# ಯುಗರಶ್ಮಿ

★ ವೈಚಾರಿಕತೆ + ಅಹಂತೆ = ದೇವನಿಷೇಧ

★ ವಿಜ್ಞಾನವು ಸಂಸ್ಕಾರ ವಿರುದ್ಧವಲ್ಲ

★ ದಾಂಪತ್ಯ ಜೀವಿತದ ಮಹತ್ವ

★ ರಮಝಾನ್ ವ್ರತಾನುಷ್ಠಾನ

ತ್ರೈಮಾಸಿಕ

ಮೇ 1988

ಬೆಲೆ: ರೂ. 1-50

(ಓ ಸತ್ಯ ವಿಶ್ವಾಸಿಗಳೇ) ನೀವು ಸಂಬಂಧಿಕರಿಗೆ, ಬಡವರಿಗೆ ಮತ್ತು ಯಾತ್ರಿಕರಿಗೆ ಅವರ ಪಾಲುಗಳನ್ನು ನೀಡಿರಿ. ಅದು ಅಲ್ಲಾಹನ ತೃಪ್ತಿಯನ್ನು ಆಶಿಸುವವರಿಗೆ ಉತ್ತಮವಾಗಿದೆ. ಮತ್ತು ಅದೇ ಜನರು ವಿಜಯಿಗಳಾಗುವರು.

—ಪವಿತ್ರ ಖುರ್‌ಆನ್ (30 : 39)

# ಯುಗರಶ್ಮಿ ತ್ರೈಮಾಸಿಕ

10–23–1008 ಅನ್ಸಾರಿ ರೋಡ್, ಬಂದರ್, ಮಂಗಳೂರು - 575 001.

ಬಿಡಿಪ್ರತಿ : ರೂ. 1–50

ವಾರ್ಷಿಕ ಚಂದಾ : ರೂ. 6–00

ಅಂಚೆ ಮೂಲಕ : ರೂ. 8–00


ವಿಷಯ ಸೂಚಿಕೆ :


| ವಿಷಯ | | ಪುಟ |
|---|---|---|
| * ಸದ್ಭಾವನೆ | ... | 1 |
| * ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು | ... | 2 |
| * ವೈಚಾರಿಕತೆ + ಅಹಂತೆ = ದೇವನಿಷೇಧ | ... | 3 |
| * ವಿಜ್ಞಾನವು ಸಂಸ್ಕಾರ ವಿರುದ್ಧವಲ್ಲ | ... | 5 |
| * ದಾಂಪತ್ಯ ಜೀವಿತದ ಮಹತ್ವ | ... | 9 |
| * ರಮಝಾನ್ ವ್ರತಾನುಷ್ಠಾನ | ... | 19 |
| * ನಿರಾಯುಧೀಕರಣ ಮತ್ತು ಆರ್ಥಿಕ ಭದ್ರತೆ | ... | 23 |
| * ಸಕಲ ರೋಗ ನಿವಾರಕ ಕ್ಯಾಬೇಜ್ | ... | 24 |
| * ನಿರ್ಲಿಂಗ ಜನನ | ... | 26 |
| * ಮಿನಿ ಒಲ್ಲದ ಲಲನೆಯರು | ... | 26 |
| * ಅಹ್ಮದಿಯಾ ವಾರ್ತೆಗಳು | ... | 27 |


## Statement about Ownership and other particulars about the Newspaper YUGARASHMI Quarterly

**[FORM IV See Rule 8]**


| | | |
|---|---|---|
| 1 | Place of publication | Mangalore |
| 2 | Period of its publication | Quarterly |
| 3 | Printer's name | Muhammed Yusuf |
| | Whether citizen of Indi a? | Yes |
| | Address | Jubilee Printing Press<br>10-23-1008/1 Ansari Road, Bunder,<br>Mangalore-575 001 |
| 4 | Publisher's name | Muhammad Yusuf |
| | Whether citizen of India? | Yes |
| | Address | 10-23-1008/1 Ansari Road, Bunder,<br>Mangalore-575 001 |
| 5 | Editor's name | Muhammad Yusuf |
| | Whether citizen of India? | Yes |
| | Address | 10-23-1008, Ansari Road, Bunder,<br>Mangalore-575 001 |
| 6 | Name and addresses of individuals who own the newspaper and partners or shareholders holding more than one percent of the capital | Jamath Ahmadiyya,<br>10-23-1008/1 Ansari Road, Bunder,<br>Mangalore-575 001. |

I, Muhammad Yusuf hereby declare that the particulars given above are true to the best of my knowledge and belief.

Date: 1–5–1988

Sd/- **Muhammad Yusuf**

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

ಸಂಪುಟ: 13 | ಮೇ 1988 / ಹಿಜ್‌ರತ್ 1367 | ಸಂಚಿಕೆ: 3

## ಸದ್ಭಾವನೆ

"ಹೆಚ್ಚಿನ ಜನರಲ್ಲಿ ದುರ್ಭಾವನೆಯ ರೋಗ ವೃದ್ಧಿಸಿ ಕಾಣುತ್ತದೆ. ತನ್ನ ಸಹೋದರನ ಕುರಿತು ಸದ್ಭಾವನೆಯನ್ನು ಹೊಂದುವುದಿಲ್ಲ. ಕ್ಷುಲ್ಲಕ ಕಾರಣಗಳಿಗೆ ಕೂಡ ತನ್ನ ಸಹೋದರನ ಬಗ್ಗೆ ಕೆಟ್ಟದ್ದಾಗಿ ಯೋಚಿಸಲು ತೊಡಗುತ್ತಾನೆ. ಆತನಲ್ಲಿ ಹಲತರ ದೋಷಗಳನ್ನೂ ಕೊರತೆಗಳನ್ನೂ ಕಂಡುಹಿಡಿದು ಆರೋಪಿಸಲಿಕ್ಕೆ ಶ್ರಮಿಸುತ್ತಾನೆ. ಅಂತಹ ದೋಷಗಳನ್ನಾಗಲಿ ಕೊರತೆಗಳನ್ನಾಗಲಿ ತನ್ನ ಮೇಲೆ ಯಾರಾದರೂ ಆರೋಪಿಸಿದರೆ ಶಕ್ತಿಯುತವಾಗಿ ಪ್ರತಿಕ್ರಿಯಿಸುತ್ತಾನೆ ಕೂಡ. ಒಟ್ಟಾರೆ, ಎಂದಿಗೂ ತನ್ನ ಸಹೋದರನ ಕುರಿತು ಯಾವುದೇ ತರದ ದುರ್ಭಾವನೆಯನ್ನು ಹೊಂದದೆ ಇರಬೇಕಾದುದು ಅತ್ಯಾವಶ್ಯಕವಾಗಿದೆ. ಯಾವಾಗಲೂ ತನ್ನ ಸಹೋದರನ ಬಗ್ಗೆ ಒಳ್ಳೆಯದನ್ನು ಭಾವಿಸುತ್ತಲೂ ಆತನಲ್ಲಿ ಒಳಿತನ್ನು ಮಾತ್ರ ಕಾಣುತ್ತಲೂ ಇರಬೇಕು. ಏಕೆಂದರೆ, ಸ್ನೇಹ ಬಲಗೊಳ್ಳುವುದು ಮತ್ತು ಪ್ರೀತಿಯುಂಟಾಗುವುದು ಈ ಪ್ರಕಾರವಾಗಿದೆ. ಪರಸ್ಪರ ಶಕ್ತಿಯನ್ನು ಬಲಪಡಿಸಲು ಸಾಧ್ಯವಾಗುವುದು ಸಹ ಈ ವಿಧಾನದಿಂದಾಗಿದೆ. ಅದರೊಂದಿಗೆ ಹಗೆ, ವಿದ್ವೇಷ, ಅಸೂಯೆ ಮೊದಲಾದ ಇತರ ದೋಷಗಳಿಂದಲೂ ಮನುಷ್ಯನು ರಕ್ಷಿಸಲ್ಪಡುತ್ತಾನೆ."
(ತಖ್‌ರೀರೇನ್, ಪುಟ 34)

—ಹಝ್ರತ್ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ರಮಝಾನ್ ತಿಂಗಳ ಚಂದ್ರದರ್ಶನವಾದರೆ ವ್ರತವನ್ನನುಷ್ಠಿಸಿರಿ. ಶವ್ವಾಲ್ ಮಾಸದ ಚಂದ್ರದರ್ಶನ ವಾದರೆ ವ್ರತಾನುಷ್ಠಾನವನ್ನು ನಿಲ್ಲಿಸಿರಿ. ಮೋಡದಿಂದ ಬಾಲಚಂದ್ರನನ್ನು ಕಾಣಲು ನಿಮಗೆ ಅಸಾಧ್ಯವಾದರೆ ರಮಝಾನ್ ಮಾಸವನ್ನು ನೀವು ಎಣಿಸಿ ಲೆಕ್ಕಹಾಕಿರಿ.

2. ರಮಝಾನ್ ಮಾಸದಲ್ಲಿ ಸ್ವರ್ಗದ ಬಾಗಿಲು ಗಳು ತೆರೆಯಲ್ಪಡುತ್ತವೆ; ನರಕದ ಬಾಗಿಲುಗಳು ಮುಚ್ಚ ಲ್ಪಡುತ್ತವೆ; ಸೈತಾನ ಶಕ್ತಿಗಳು ಸಂಕಲೆಯಿಂದ ಬಂಧಿಸ ಲ್ಪಡುತ್ತವೆ.

3. ವ್ರತಾನುಷ್ಠಾಸಿಯ ಆನಂದ ಎರಡು ಸಂದ ರ್ಭದಲ್ಲಾಗಿದೆ. ಒಂದು, ಉಪವಾಸವನ್ನು ಮುರಿಯು ವಾಗ; ಮತ್ತೊಂದು, ತನ್ನ ಸೃಷ್ಟಿಕರ್ತನನ್ನು ಕಾಣು ವಾಗ. ಆಗ ತನ್ನ ವ್ರತಾನುಷ್ಠಾನದಲ್ಲಿ ಆತನು ಆನಂದ ತುಂದಿಲನಾಗುತ್ತಾನೆ.

4. ಉಪವಾಸಿ ಕೆಟ್ಟ ಮಾತು ಮತ್ತು ದುರ್ವರ್ತನೆ ಯನ್ನು ತೊರೆಯುವುದಿಲ್ಲವಾದರೆ ಆತನು ಅನ್ನಪಾನಾದಿ ಗಳನ್ನು ತ್ಯಜಿಸುವುದರಿಂದ ಅಲ್ಲಾಹನ ಇಷ್ಟಕ್ಕೆ ಪಾತ್ರ ನಾಗಲಾರ.

5. ಉಪವಾಸವು ಒಂದು ಗುರಾಣಿಯಾಗಿದೆ.

6. ನಿಮ್ಮ ಪೈಕಿ ಯಾವನೇ ಉಪವಾಸಿ ಅನಾವಶ್ಯ ವಾಗಿಯೂ ಅನ್ಯಾಯವಾಗಿಯೂ ವರ್ತಿಸಬಾರದು. ನಿಮ್ಮೊಡನೆ ಜಗಳಾಡಲು ಯಾರಾದರೂ ಬಂದರೆ ನಾನು ಉಪವಾಸಿ ಎಂದು ಹೇಳಿ ದೂರವಿದ್ದುಕೊಳ್ಳಿರಿ.

7. ಯಾವನಾದರೂ ನೆನಪಿಲ್ಲದೆ ಆಹಾರವನ್ನು ಸೇವಿಸಿದರೆ ಅಥವಾ ನೀರು ಕುಡಿದರೆ ಆತನು ಉಪವಾಸ ವನ್ನು ಪೂರ್ತಿಗೊಳಿಸಲಿ. ಆತನಿಗೆ ಅನ್ನಪಾನೀಯ ಗಳನ್ನು ನೀಡಿದ್ದು ಅಲ್ಲಾಹನೇ.


ಕನ್ನಡ, ಇಂಗ್ಲಿಷ್, ಮಲಯಾಳಂ, ಅರಬಿ, ಉರ್ದು ಮತ್ತು ಪಾರ್ಸಿ ಭಾಷೆಗಳಲ್ಲಿ

ಅಂದವಾದ ಮುದ್ರಣಕ್ಕಾಗಿ

ಜೂಬಿಲಿ ಪ್ರಿಂಟಿಂಗ್ ಪ್ರೆಸ್

**Jubilee Printing Press**

ജൂബിലി പ്രിൻറിംഗ് പ്രസ്സ്

جوبلی پرنٹنگ پریس

*Quality Printers in:*
*KANNADA, ENGLISH, MALAYALAM, ARABIC, URDU, and PERSIAN*

**Ansari Road, Bunder**
**MANGALORE - 575 001.**
Phone : 32039

# ವೈಚಾರಿಕತೆ + ಅಹಂತೆ = ದೇವನಿಷೇಧ

★ ಸಿ. ಎ. ಝುಫ್ರುಲ್ಲಾ, M.Sc., B.Ed.

ನಾವು ವಾಸಿಸುವ ಭೂಮಿಯನ್ನು ಬ್ರಹ್ಮಾಂಡದ ವಿಶಾಲತೆಯೊಂದಿಗೆ ಹೋಲಿಸಿದರೆ ಅದು ಒಂದು ಮರಳ ಹರಳಿನಷ್ಟು ಕೂಡ ಕಾಣಲಿಕ್ಕಿಲ್ಲ. ಹಾಗಿರುವ ಭೂಮಿಯ ಮೇಲೆ ಮೂರನೇ ಒಂದಂಶ ಮಾತ್ರ ವಿಸ್ತಾರವಿರುವ ನೆಲದಲ್ಲಿ ಜೀವಿಸುತ್ತಿರುವ ಇಪ್ಪತ್ತು ಲಕ್ಷ ಜೀವಜಾಲಗಳಲ್ಲಿ ಒಂದು ಮಾತ್ರವಾಗಿರುವ ಮನುಷ್ಯ ಜೀವಿ ತನ್ನ ತಲೆಯ ಮೇಲೆ, ದೃಷ್ಟಿ ತಲುಪದ ದೂರದಲ್ಲಿ ವ್ಯಾಪಿಸಿರುವ ಪ್ರಪಂಚ ವೈಚಿತ್ರ್ಯಗಳ ಕುರಿತು ಏನನ್ನೋ ತಿಳಿಯಲು ಸಾಧ್ಯವಾಗುತ್ತದೆಂದು ತೋಚಿದಾಗ ಅಹಂಕಾರಗೊಂಡು ದೇವನಿಷೇಧಿಯಾಗಿ ಮಾರ್ಪಡುತ್ತಾನೆ. ವಿಜ್ಞಾನದ ಸಹಾಯದಿಂದ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯವೆಂದು ಭ್ರಮಿಸಿ ನಡೆಯುವ ಮನುಷ್ಯನು, ವಿಜ್ಞಾನದ ಪರಿಮಿತಿಗಳ ಕುರಿತು ಮನಗಾಣದೆ ಅದು ಎಲ್ಲಾ ಎಲ್ಲೆಗಳನ್ನು ಮೀರಿ ಮುಂದಕ್ಕೆ ನೀಗುತ್ತಿರುತ್ತದೆಂದು ಭಾವಿಸಿದ್ದಾನೆ. ಮಾತ್ರವಲ್ಲ, ವೈಜ್ಞಾನಿಕ ಸತ್ಯಗಳಾಚೆ ಯಾವುದೇ ಯಾಥಾರ್ಥ್ಯ ಇಲ್ಲವೆಂದು ಸಹ ಘೋಷಿಸುತ್ತಾನೆ.

ಆದರೆ ನಿಷ್ಪಕ್ಷವಾಗಿ ವೈಜ್ಞಾನಿಕ ತತ್ವಗಳನ್ನು ವಿಶ್ಲೇಷಿಸುವಾಗ ಅದರ ಪರಿಮಿತಿಗಳು ವ್ಯಕ್ತವಾಗಿ ದೇವಾಸ್ತಿಕ್ಯವು ಅಂಗೀಕರಿಸಲ್ಪಡುವುದು. ಪ್ರತಿಯೊಂದು ಸಂದರ್ಭದಲ್ಲೂ ವಸ್ತು ಅಥವಾ ಶಕ್ತಿ ಹೇಗೆ ವರ್ತಿಸುತ್ತದೆ? ಅದರ ಸ್ವಭಾವವೇನು? ಎಂಬುದರ ಕುರಿತು ವಿಜ್ಞಾನಿ ಅಧ್ಯಯನ ಮಾಡುತ್ತಾನೆ. ವಸ್ತುವಿನ ವರ್ತನೆ ಅಥವಾ ಗುಣದ ಕುರಿತು ಏನಾದರೂ ಒಂದು ಅಭಿಪ್ರಾಯ ತನ್ನ ಮನಸ್ಸಿನಲ್ಲಿ ಮೂಡಿಬರುವಾಗ, ಅನ್ಯೋನ್ಯ ಸಂಬಂಧವಿಲ್ಲದ ಪ್ರತಿಯೊಂದು ಅಭಿಪ್ರಾಯವನ್ನೂ ಪರಿಶೀಲನೆ ನಿರೀಕ್ಷಣೆಗಳಿಗೆ ಗುರಿಪಡಿಸಿದ ಬಳಿಕ ಒಂದು ಸಾಮಾನ್ಯ ತತ್ವಕ್ಕೆ ವಿಜ್ಞಾನಿ ರೂಪಗೊಡುತ್ತಾನೆ. ಇಂತಹ ತತ್ವಗಳ ಸಂಹಿತೆಯಾಗಿದೆ ವಿಜ್ಞಾನ. ಇದರಿಂದ, ವಿಜ್ಞಾನಕ್ಕೆ ವಸ್ತುವಿನೊಂದಿಗೆ ಸಂಬಂಧವೆಂದೂ ವಸ್ತು ಹೇಗೆ ವರ್ತಿಸುವುದೆಂದು ತಿಳಿದುಕೊಳ್ಳುವುದಾಗಿದೆ ವಿಜ್ಞಾನಿಯು ಮಾಡುವುದೆಂದೂ ಬಹಳ ಸ್ಪಷ್ಟ. ವಸ್ತುವು ಒಂದು ಪ್ರತ್ಯೇಕ ರೀತಿಯಲ್ಲಿ ಮಾತ್ರ ಏಕೆ ವರ್ತಿಸುವುದೆಂದು ಕೇಳಿದರೆ ಉತ್ತರ ಹೇಳಲು ವಿಜ್ಞಾನಿಗೆ ಸಾಧ್ಯವಿಲ್ಲ. ಉದಾಹರಣೆಗೆ, ನಾವು ನಿತ್ಯ ಉಪಯೋಗಿಸುವ ನೀರಿನ ಬಗ್ಗೆ ಆಲೋಚಿಸೋಣ. ಎರಡು ಹೈಡ್ರೋಜನ್ ಅಣು ಮತ್ತು ಒಂದು ಓಕ್ಸಿಜನ್ ಅಣು ಸೇರುವಾಗ ಜಲ ಉಂಟಾಗುತ್ತದೆ ಎಂದಲ್ಲವೇ ವಿಜ್ಞಾನ ಹೇಳುವುದು. ಆದರೆ ಬಹಳ ಬೇಗ ಬೆಂಕಿ ಹಿಡಿಯುವ ಹೈಡ್ರೋಜನ್ ಮತ್ತು ಉರಿಯಲು ಸಹಾಯ ಮಾಡುವ ಓಕ್ಸಿಜನ್ ಒಟ್ಟಿಗೆ ಸೇರಿದಾಗ ಅವುಗಳ ಗುಣಗಳಿಂದ ಸಂಪೂರ್ಣ ಭಿನ್ನವಾದ ಬೆಂಕಿಯನ್ನು ನಂದಿಸಿಬಿಡುವ ಜಲ ಹೇಗೆ ಉಂಟಾಗುತ್ತದೆಂದು ಕೇಳಿದರೆ ಏನು ಉತ್ತರವಿದೆ? ಹಾಗೆಯೇ ಅಯಸ್ಕಾಂತದ ವ್ಯತ್ಯಸ್ತ ಧ್ರುವಗಳು ಪರಸ್ಪರ ಆಕರ್ಷಿಸುತ್ತವೆ ಹಾಗೂ ಒಂದೇ ಜಾತಿಯ ಧ್ರುವಗಳು ಒಂದು ಇನ್ನೊಂದರಿಂದ ದೂರವಾಗುತ್ತದೆ ಎಂಬುದು ವೈಜ್ಞಾನಿಕ ಸತ್ಯವಾಗಿದೆ. ಆದರೆ ಏಕೆ ಹೀಗೆ ಈ ಪ್ರಕಾರ ಸಂಭವಿಸುತ್ತದೆಂಬ ಪ್ರಶ್ನೆಗೆ ಉತ್ತರವಿಲ್ಲ. ವಿಜ್ಞಾನವೆಂದು ಅಂಗೀಕರಿಸಲ್ಪಡುವ ಎಲ್ಲಾ ತತ್ವಗಳ ಸ್ಥಿತಿ ಇದೇ ರೀತಿಯಾಗಿದೆ.

ಪ್ರಪಂಚದ ಎಲ್ಲಾ ವಸ್ತುಗಳ ಚಟುವಟಿಕೆ ಬರೇ ನಾಲ್ಕು ತರದ ಕಣಗಳಿಂದಾಗಿದೆ ಎಂದು ಆಧುನಿಕ ವಿಜ್ಞಾನ ಹೇಳುತ್ತದೆ. ಅವು ಪ್ರೊಟೋನ್, ನ್ಯೂಟ್ರೋನ್, ಇಲಕ್ಟ್ರೋನ್, ನ್ಯೂಟ್ರಿನೋ ಎಂಬವು. ಈ ನಾಲ್ಕು ಕಣಗಳ ಸ್ವಭಾವವನ್ನು ನಿಯಂತ್ರಿಸುತ್ತಿರುವುದು ಗುರುತ್ವ, ವೈದ್ಯುತ, ಕಾಂತಬಲ, ಅಶಕ್ತ ನ್ಯೂಕ್ಲಿಯರ್ ಬಲ, ಶಕ್ತ ನ್ಯೂಕ್ಲಿಯರ್ ಬಲ ಒಂಬೀ ನಾಲ್ಕು ಬಲಗಳಾಗಿವೆ. ಇವುಗಳಲ್ಲಿ ಅತ್ಯಂತ ಶಕ್ತಿ ಕುಂದಿದ, ಆದರೆ ಪ್ರಪಂಚದ ಸ್ವಭಾವವನ್ನು ನಿರ್ಣಯಿಸಿರುವ ಗುರುತ್ವ ಶಕ್ತಿಯನ್ನು ನಮ್ಮ ಅಧ್ಯಯನಕ್ಕೆ ಗುರಿಪಡಿಸೋಣ. ಭೂಮಿಯ ಸುತ್ತಲೂ ಇರುವ ಭ್ರಮಣಪಥದಲ್ಲಿ ಚಂದ್ರನನ್ನು ಹಿಡಿದು ನಿಲ್ಲಿಸಿರುವ, ಜೀವಿಸಲು ಅವಶ್ಯವಿರುವ ವಾಯುಮಂಡಲವನ್ನು

ಶೂನ್ಯಾಕಾಶಕ್ಕೆ ಹರಿದುಹೋಗದಂತೆ ನಿಯಂತ್ರಿಸುತ್ತಿರುವ, ಭೂಮಧ್ಯೆ ರೇಖೆಯಲ್ಲಿರುವ ಒಬ್ಬನು ಭೂಮಿಯ ಸ್ವಯಂ ಭ್ರಮಣ ಕಾರಣದಿಂದ ಗಂಟೆಗೆ 1000 ಮೈಲು ವೇಗದಲ್ಲಿ ಸಂಚರಿಸಿದರೂ ಭೂಮಿಯಿಂದ ಹೊರಗೆ ಎಸೆಯಲ್ಪಡದೆ ನಿಲ್ಲುವುದೆಲ್ಲ ಗುರುತ್ವಾಕರ್ಷಣ ಶಕ್ತಿಯಿಂದಾಗಿದೆ ಎಂದು ನಮಗೆ ಗೊತ್ತಿದೆ. ಗುರುತ್ವಾಕರ್ಷಣ ಶಕ್ತಿಯ ಮೂಲ ಘಟಕ 'ಗ್ರಾವಿಟೋನ್' ಎಂದು ಹೇಳಲು ಶಾಸ್ತ್ರಜ್ಞಸಿಗೆ ಸಾಧ್ಯವೆಂದಲ್ಲದೆ ಗ್ರಾವಿಟೋನನ್ನು ಕಂಡುಹಿಡಿಯಲು ಇದುವರೆಗೆ ಇವರಿಗೆ ಸಾಧ್ಯವಾಗಿಲ್ಲ. ವಸ್ತುಗಳು ತಮ್ಮೊಳಗೆ ಸ್ಪರ್ಶವಿಲ್ಲದೆ ಒಂದು ನೂಲಬಂಧವಾದರೂ ಇಲ್ಲದೆ ಹೇಗೆ ಇನ್ನೊಂದು ವಸ್ತುವನ್ನು ಆಕರ್ಷಿಸುತ್ತದೆಂದೂ ಆಕರ್ಷಣ ಶಕ್ತಿ ಹೇಗೆ ಉಂಟಾಯಿತೆಂದೂ ಕೇಳಿದರೆ ವಿಜ್ಞಾನದ ಬಳಿ ಉತ್ತರವಿಲ್ಲ. ಗೋಳಗಳನ್ನು ಪರಸ್ಪರ ಬಂಧಿಸಿಟ್ಟಿರುವ ನೂಲನ್ನು ಐಸಾಕ್ ನ್ಯೂಟನಾಗಲಿ, ಬೇರೆ ಯಾರೇ ಆಗಲಿ ಗುರುತ್ವಾಕರ್ಷಣ ಶಕ್ತಿಯೆಂದು ಹೆಸರಿಸಿದ ಮಾತ್ರಕ್ಕೆ ಎಂದಿಗೂ ಅದು ವಿಜ್ಞಾನದ ಸೃಷ್ಟಿಯಾಗಲಿಕ್ಕಿಲ್ಲ. ಏಕೆಂದರೆ ಐಸಾಕ್ ನ್ಯೂಟನ್ ಈ ಶಕ್ತಿಗೆ ಗುರುತ್ವಾಕರ್ಷಣ ಶಕ್ತಿಯೆಂದು ಹೆಸರಿಡುವ ಮೊದಲೇ ಇಲ್ಲಿ ಆ ಶಕ್ತಿ ಇದ್ದಿತಲ್ಲವೇ ? ಯಾವುದೇ ವಸ್ತುವಿನ ಆತ್ಯಂತಿಕ ಸ್ವಭಾವವನ್ನು ಮನಗಾಣಲು ವಿಜ್ಞಾನಕ್ಕೆ ಇಷ್ಟರ ವರೆಗೆ ಸಾಧ್ಯವಾಗಿಲ್ಲ. ವಿಜ್ಞಾನವು ಭಾಗಶಃ ಸತ್ಯವನ್ನು ಮಾತ್ರವೇ ದರ್ಶಿಸುತ್ತದೆಂದು ಗೋಳಶಾಸ್ತ್ರಜ್ಞರಾದ ಜೇಮ್ಸ್‌ಜೀನ್ಸ್ ಮತ್ತು ಎಡಿಂಗ್ಟನ್ ಮೊದಲೇ ಹೇಳಿದ ಕಾರಣ ಇದೇ ಆಗಿತ್ತು. ನಾಸ್ತಿಕ ಮತ್ತು ಸಂದೇಹವಾದಿ ಆಗಿದ್ದ ಜೇಮ್ಸ್‌ಜೆನ್ಸ್, ದೇವಾಸ್ತಿತ್ವ ವಿನಾ ವೈಜ್ಞಾನಿಕ ಪ್ರಶ್ನೆಗಳಿಗೆ ಪರಿಹಾರ ಕಾಣಲು ಸಾಧ್ಯವಿಲ್ಲವೆಂದು ನಂತರ ಹೇಳಬೇಕಾದುದು ಮೇಲೆ ಹೇಳಿದ ವಾಸ್ತವಾಂಶವನ್ನು ಮನಗಂಡ ಕಾರಣದಿಂದಾಗಿತ್ತು.

ಸಾಮಾನ್ಯ ಮನುಷ್ಯ ಭಾವನೆಗೂ ಬುದ್ಧಿಗೂ ಅತೀತವಾದ ಬಹಳ ವಾಸ್ತವಾಂಶಗಳು ಧರ್ಮದಲ್ಲಿ ಕಾಣುವಂತೆಯೇ ವಿಜ್ಞಾನದಲ್ಲಿ ಸಹ ನಮಗೆ ಕಾಣಲು ಸಾಧ್ಯ. ಎಲ್ಲಾ ಶಾಸ್ತ್ರಗಳ ರಾಜ್ಞಿಯೆಂದು ಹೇಳಲಾಗುವ ಗಣಿತ ಶಾಸ್ತ್ರವೇ – Mathematics is the Queen of Sciences – ಇದಕ್ಕೆ ಪುರಾವೆಯಾಗಿದೆ. ಒಂದು ರೇಖೆಯು ಲಂಬರೇಖೆ ಅದುವೇ ಎಂದು ಕಲ್ಪಿಸುವರೆ ಅಥವಾ ಭಾವನೆಯಲ್ಲಿ ತರುವರೆ ಕಷ್ಟವಾದೀತು. ಆದರೆ $Y = \sqrt{-1x}$ ಎಂಬ ಸಮವಾಕ್ಯದ ಪ್ರಕಾರ ಇದು ಸತ್ಯವಾಗಿ ಸಾಬೀತಾಗುತ್ತದೆ. ಹಾಗೆ ನಮಗೆ ಈ ವಾಸ್ತವಿಕತೆಯನ್ನು ಅಂಗೀಕರಿಸಬೇಕಾಗಿ ಬರುತ್ತದೆ. ಎರಡು ಸಮಾನಾಂತರ ರೇಖೆಗಳು ಸಮಾನಾಂತರದಲ್ಲಿದ್ದುಕೊಂಡೇ ಪ್ರತಲದಲ್ಲೇ ಸಂಧಿಸುವುವು ಎಂಬುದು ಇನ್ನೊಂದು ಉದಾಹರಣೆಯಾಗಿದೆ. ಯಾವುದೇ ಶಾಸ್ತ್ರವಾಗಲಿ ರೂಪಗೊಂಡಿರುವುದು ಸ್ವತಸ್ಸಿದ್ಧ ಪ್ರಮಾಣಗಳ (Axioms) ಮೂಲಕವಾಗಿದೆ. ಆದರೆ ಇವುಗಳನ್ನು ಬೇರೆಯಾಗಿ ತೆಗೆದು ಪರಿಶೀಲಿಸಿದರೆ ಏನೂ ವಿವರಿಸಲಿಕ್ಕೆ ಸಾಧ್ಯವಿಲ್ಲ. ಬುದ್ಧಿಗೆ ಬಾಹ್ಯವಾಗಿ ಹೊಂದಿಕೊಳ್ಳಲು ಅಸಾಧ್ಯವಾದುದರಿಂದ ಇಂತಹ ವೈಜ್ಞಾನಿಕ ಸತ್ಯಗಳನ್ನು ಅಂಗೀಕರಿಸಲಾಗದೆಂದು ಹೇಳುವುದು ಬುದ್ಧಿಹೀನತೆಯ ಲಕ್ಷಣವಾಗಿದೆ. ಒಂದು ಹನಿ ನೀರಿನಲ್ಲಿ 3300 ಬಿಲಿಯನ್ ಪರಮಾಣುಗಳಿವೆ. ಸೆಕೆಂಡಿನಲ್ಲಿ ಒಂದು ಎಂಬಂತೆ ಲೆಕ್ಕಮಾಡಲು ಪ್ರಾರಂಭಿಸಿದರೆ ಅವುಗಳನ್ನು ಎಣಿಸಿ ಮುಗಿಸುವರೆ ಅನೇಕ ಸಾವಿರ ವರ್ಷಗಳೇ ಬೇಕಾದೀತು. ಹಾಗಿರುವಾಗ ಒಂದು ಹನಿ ನೀರಿನಲ್ಲಿರುವ 3300 ಬಿಲಿಯನ್ ಪರಮಾಣುಗಳಲ್ಲಿ ಒಂದು ಪರಮಾಣುವಿನ ಒಳಗಿರುವ ಅವಸ್ಥೆಯನ್ನು ವಿವರಿಸಲಿಕ್ಕೆ ಭೌತಿಕ ಶಾಸ್ತ್ರಜ್ಞರು ಆಧುನಿಕ ಯುಗದಲ್ಲಿ ಸಹ ಕಷ್ಟಪಡುತ್ತಾರೆ. ನ್ಯೂಕ್ಲಿಯಸನ್ನು ಸೂರ್ಯನಿಗೂ ಇಲಕ್ಟ್ರೋನನ್ನು ಗ್ರಹಗಳಿಗೂ ಹೋಲಿಸಿಕೊಂಡು ಸದ್ಯ ಅವರಿಗೆ ತೃಪ್ತಿಹೊಂದಲು ಸಾಧ್ಯವಾಗಿದೆ. ರಶ್ಯನ್ ವಿಜ್ಞಾನಿಯಾದ ವಿ. ಐ. ರಿದಿನಿಕನ ಅಭಿಪ್ರಾಯದಲ್ಲಿ "ಅಣು ಲೋಕವನ್ನು ಕಲ್ಪಿಸುವರೆ ಭಾವನಾ ಶಕ್ತಿ ಕೂಡ ಅಶಕ್ತವಾಗಿದೆ."

ವಿಜ್ಞಾನವು ವಿಕಾಸಗೊಂಡಂತೆ ಮನುಷ್ಯನ ಅಜ್ಞತೆ, ಕಳವಳ ಮತ್ತು ನಿಸ್ಸಹಾಯಾವಸ್ಥೆ ಹೆಚ್ಚುತ್ತದೆ. ವಿಜ್ಞಾನದ ವಿಕಾಸ ದೇವಾಸ್ತಿತ್ವದ ಮಹತ್ವವನ್ನು ಹೆಚ್ಚಿಸುತ್ತದೆಂದು ಪ್ರತಿಯೊಂದು ಶಾಸ್ತ್ರವನ್ನು ಅಧ್ಯಯನ ಮಾಡುವಾಗ ಮನವರಿಯಬಹುದು. ಫ್ರೆಂಚ್ ವಿಜ್ಞಾನಿ ಮೋರಿಸ್ ಬುಕೆಯ ಅಭಿಪ್ರಾಯದಲ್ಲಿ "ವಿಜ್ಞಾನದ ಪಥದಲ್ಲಿ ಒರ್ವನು ಹೆಚ್ಚು ಮುಂದಕ್ಕೆ ಸಂಚರಿಸಿದಂತೆ, ಒಬ್ಬ ಸೃಷ್ಟಿಕರ್ತನ ಅಸ್ತಿತ್ವಕ್ಕೆ ಅನುಕೂಲವಾದ ವಾದಗಳು ಅಷ್ಟೇ ಹೆಚ್ಚು ಬಲಗೊಳ್ಳುತ್ತವೆ." ★

ಇಸ್ಲಾಂ ಮತ್ತು ವಿಜ್ಞಾನ* - 4

# ವಿಜ್ಞಾನವು ಸಂಸ್ಕಾರ ವಿರುದ್ಧವಲ್ಲ

—ಡಾ। ಅಬ್ದುಸ್ಸಲಾಂ

'ಜಾಪನೀಸ್ ಶಾಸ್ತ್ರ', 'ಚೈನೀಸ್ ಶಾಸ್ತ್ರ', 'ಇಂಡಿಯನ್ ಶಾಸ್ತ್ರ' ಎಂಬಿತ್ಯಾದಿಯಾಗಿ, ಅನಾವಶ್ಯಕ ಹಾಗೂ ಮೂಲ ಉದ್ದೇಶದಿಂದ ಶ್ರದ್ಧೆಯನ್ನು ಬೇರೆಡೆಗೆ ತಿರುಗಿಸಲು ಎಡೆಗೊಡುವ ಧ್ಯೇಯವಾಕ್ಯಗಳನ್ನು ಹಿಂಬಾಲಿಸಿ ಹೋಗುವವುಗಳಲ್ಲ ನಾನು ಮೇಲೆ ಹೇಳಿದ ದೇಶಗಳು. ವಿಜ್ಞಾನದ ಯಾವ ರಂಗಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಬೇಕೆಂಬುದರ ಬಗ್ಗೆ ಬೇರೆ ಬೇರೆ ರಾಷ್ಟ್ರಗಳಿಗೆ ಬೇರೆ ಬೇರೆ ಅಭಿಪ್ರಾಯಗಳಿದ್ದರೂ ವಿಜ್ಞಾನದ ನಿಯಮಗಳು, ಪಾರಂಪರ್ಯಗಳು, ಮಾರ್ಗಗಳು ಇತ್ಯಾದಿ ಸರ್ವಜನೀನವೆಂದು ಈ ರಾಜ್ಯಗಳಿಗೆ ಚೆನ್ನಾಗಿ ಗೊತ್ತಿದೆ. ಪಾಶ್ಚಾತ್ಯ ಶಾಸ್ತ್ರವನ್ನು ಅಂಗೀಕರಿಸಿದರೆ ತಮ್ಮ ಸಾಂಸ್ಕಾರಿಕ ಪಾರಂಪರ್ಯಕ್ಕೆ ಹಾನಿಯಾಗುವುದೆಂಬ ಭೀತಿಯೇನೂ ಅವರಿಗಿಲ್ಲ. ತಮ್ಮ ಪಾರಂಪರ್ಯ ಅಷ್ಟು ದುರ್ಬಲವೆಂದು ನಂಬಿಕೊಂಡು ಅವರು ಅದನ್ನು ದೂಷಿಸುವುದಿಲ್ಲ.

ವಿಜ್ಞಾನಕ್ಕೆ ನೀಡುವ ಪ್ರೋತ್ಸಾಹದ ಕುರಿತು ಮೊದಲು ನಾನು ಹೇಳಿದ್ದೇನೆ. ತನ್ನ ಪ್ರವರ್ತನೆಯಲ್ಲಿ ನಿರತನಾಗುವುದಕ್ಕೆ ವಿಜ್ಞಾನಿಗೆ ನೀಡಬೇಕಾದ ಸುರಕ್ಷಿತತೆ ಮತ್ತು ನಿರಂತರತೆಯಾಗಿದೆ ಇದರಲ್ಲೊಂದು. ಇಂದು ಸಾಕಷ್ಟು ಅರ್ಹತೆ ಇದ್ದರೆ, ಒಬ್ಬ ಅರಬಿ ಅಥವಾ ಮುಸ್ಲಿಂ, ವಿಜ್ಞಾನಿ ಅಥವಾ ತಾಂತ್ರಿಕ ತಜ್ಞನಿಗೆ ಅಮೇರಿಕದಲ್ಲೂ ಬ್ರಿಟನಿನಲ್ಲೂ ಆಯುಷ್ಕಾಲವಿಡೀ ಸ್ವಾಗತ ಲಭಿಸುವುದೆಂಬ ಭರವಸೆ ಇದೆ. (ಹೀಗಿರುವ ಅರಬ್ ಮುಸ್ಲಿಂ ವಿಜ್ಞಾನಿಗಳು 30,000ಕ್ಕೂ ಮಿಕ್ಕಿ ಇದ್ದಾರೆಂದು ಸಹ್ಲಾನ್ ಲೆಕ್ಕ ಹಾಕಿದ್ದಾರೆ) ಅಲ್ಲಿ ಆ ಶಾಸ್ತ್ರಜ್ಞರಿಗೆ ಸುರಕ್ಷಿತತೆ ಇದೆ, ಆದರವಿದೆ, ತನ್ನ ಕೆಲಸದಲ್ಲೂ ಪುರೋಗತಿಯಲ್ಲೂ ಸಂದರ್ಭ ಸಮತ್ವ ಲಭಿಸುವುದೆಂದು ಸಹ ಭರವಸೆ ಇದೆ. ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಈ ವಿಶ್ವಾಸವನ್ನು ಪೋಷಿಸಲು ಸಾಧ್ಯವೇ ಎಂದು ನಾವು ಸ್ವಯಂ ಕೇಳಬೇಕು. ನಮ್ಮ ಸರಕಾರದಿಂದ ತಾತ್ಕಾಲಿಕವಾಗಿ ಬೇರ್ಪಟ್ಟು ನಿಲ್ಲುವ ಒಂದು ದೇಶದಿಂದ ಬಂದವರೆಂದ ಮಾತ್ರಕ್ಕೆ ನಾವು ಆ ವಿಜ್ಞಾನಿಗಳ ಸೇವೆಯನ್ನು ನಿಲ್ಲಿಸುವುದಾಗಲಿ, ಅವರಿಗೆದುರಾಗಿ ಪಕ್ಷಪಾತವನ್ನು ತೋರಿಸುವುದಾಗಲಿ ಮಾಡುವುದಿಲ್ಲವೇ ಎಂದು ನಾವು ನಮ್ಮೊಡನೆಯೇ ಕೇಳಬೇಕು.

## ಅಮೇರಿಕನ್ ಮಾದರಿ

ಫಾಸ್ಸಿಸದಲ್ಲಿ ಲೋಕಮಹಾಯುದ್ಧಗಳ ಮಧ್ಯದ ಕಾಲಘಟ್ಟದಲ್ಲಿ ಯುರೋಪನ್ನು ಬಿಟ್ಟು ಓಡಬೇಕಾಗಿ ಬಂದ ವಿಜ್ಞಾನಿಗಳನ್ನೆಲ್ಲಾ ತಮ್ಮ ದೇಶಕ್ಕೆ ಸ್ವಾಗತಿಸಿ ಸ್ವೀಕರಿಸಿದವರು ಅಮೇರಿಕ ವಿಜ್ಞಾನ ರಂಗದಲ್ಲಿ ಇಂದು ಅದಕ್ಕಿರುವ ಮೇಧಾಶಕ್ತಿಯನ್ನು ದೊರಕಿಸಿಕೊಟ್ಟರು ಎಂಬುದರಲ್ಲಿ ಸಂದೇಹವಿಲ್ಲ. ಶಾಸ್ತ್ರಜ್ಞರಿಗೆ ಅಮೇರಿಕ ಪೌರತ್ವವನ್ನೂ ಅವಕಾಶವನ್ನೂ ನೀಡಿತು. ತಮ್ಮ "ಕರ್ತವ್ಯ ನಿರ್ವಹಣ ಪರ್ಯಟನೆ" ಕಳೆದ ಕೂಡಲೇ ಈ ವಿಜ್ಞಾನಿಗಳು ತಮ್ಮ ದೇಶಗಳಿಗೆ ಹಿಂತೆರಳಬೇಕೆಂದು ಇತ್ಯಾದಿಯಾಗಿ ಅಮೇರಿಕ ಅಗತ್ಯಪಡಿಸಿರಲಿಲ್ಲ. ಈ ವಿಜ್ಞಾನಿಗಳು ಇಂಗ್ಲಿಷ್ ಕಲಿತರು. ಕುಟುಂಬ ಸಮೇತ ಅಮೇರಿಕದಲ್ಲಿ ವಾಸ ಹೂಡಿದರು. 1938 ಡಿಸೆಂಬರ್‌ನಲ್ಲಿ ನೋಬಲ್ ಬಹುಮಾನ ಪಡೆದ ಎಂಟಿಕೋ ಫೆರ್ಮಿಯ ಕಥೆ ಪ್ರಶಸ್ತವಾದುದು. ಸ್ಟಾಕ್‌ಹೋಮಿನಲ್ಲಿ ನೋಬಲ್ ಬಹುಮಾನ ಸಮಾರಂಭ ಕಳೆದ ಕೂಡಲೇ ಆ ಬಹುಮಾನ ಮೊತ್ತದಿಂದ ಟಿಕೇಟು ಪಡೆದು ಫೆರ್ಮಿ ಕುಟುಂಬ ಸಮೇತ ಅಮೇರಿಕಕ್ಕೆ ವಲಸೆ ಹೋದರು. ವಲಸೆ ಹೋಗಲು ಫೆರ್ಮಿಗೆ ಅಮೇರಿಕ ಅಧಿಕೃತ

* ಮಾತೃಭೂಮಿ, ಮೇ 14–18, 1986

ಅನುಮತಿ ನೀಡುವ ಮೊದಲೇ ಅಮೇರಿಕದ ಮೊತ್ತ ಮೊದಲ ಅಣುರಿಯಾಕ್ಟರ್ ನಿರ್ಮಿಸುವ ಹೊಣೆಗಾರಿಕೆಯನ್ನು ಫೆರ್ಮಿಗೆ ಒಪ್ಪಿಸಿಯಾಗಿತ್ತು. ಆಕ್ಸಿಸ್ ರಾಷ್ಟ್ರಗಳ ರಹಸ್ಯಾನ್ವೇಷಣ ಪೋಲೀಸರಿಗೆ ವಿವರ ಲಭಿಸೀತೋ ಎಂಬ ಭೀತಿ ಕಾರಣ ಇದಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳನ್ನು ಮುಂದುವರಿಸಲು ಅಮೇರಿಕ ಧೈರ್ಯಪಡಲಿಲ್ಲ.

ಇಸ್ಲಾಮಿಕ ರಾಜ್ಯಗಳಲ್ಲಿ ತಾವು ಆಮದು ಮಾಡಿದ ಶಾಸ್ತ್ರಜ್ಞರಲ್ಲಿ ಅತ್ಯಂತ ಮಿಗಿಲಾದವರನ್ನು ಪಡೆಯುವ ಶ್ರಮವಾದರೂ ಮಾಡಲಾಗುತ್ತದೆಯೇ? ಹೀಗೆ ದೊರೆತವರಿಗೆ ಸುರಕ್ಷಿತತೆ ಮತ್ತು ಸಮಾಧಾನದ ಭರವಸೆಯನ್ನು ನಾವು ನೀಡುತ್ತಿದ್ದೇವೆಯೇ? ಅತ್ಯಂತ ನಿಷ್ಠೆಯಿಂದ ಅವರು ನಮಗೆ ಸಂಶೋಧನ ವಿದ್ಯಾಲಯ ಸ್ಥಾಪಿಸಿ ಕೊಡುವುದಕ್ಕೋಸ್ಕರ ನಾವು ಅವರನ್ನು ಅಷ್ಟೇ ಹಾರ್ದಿಕವಾಗಿ ಸ್ವಾಗತಿಸುತ್ತೇವೆಯೇ?

## ಅಂತಾರಾಷ್ಟ್ರೀಯ ರಂಗದಲ್ಲಿ ಸ್ಥಾನಗಿಟ್ಟಿಸುವುದಿಲ್ಲ

ಅಂತಾರಾಷ್ಟ್ರೀಯ ವಿಜ್ಞಾನ ರಂಗದಿಂದ ಇಸ್ಲಾಮಿಕ ವಿಜ್ಞಾನಿಗಳು ಅಗಲಿ ನಿಲ್ಲುವುದು ಇನ್ನೊಂದು ಪ್ರಧಾನ ದೋಷವಾಗಿದೆ. ವಿಭಿನ್ನ ಶಾಸ್ತ್ರಗಳಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ವೈಜ್ಞಾನಿಕ ಒಕ್ಕೂಟಗಳ ಪೈಕಿ ಐದರಲ್ಲಾದರೂ ಸದಸ್ಯತ್ವವುಳ್ಳ ಇಸ್ಲಾಮಿ ರಾಷ್ಟ್ರ ಈಜಿಪ್ಟ್ ಮಾತ್ರವಾಗಿದೆ. ಈಜಿಪ್ಟ್‌ಗೆ ಇಂತಹ 16 ಒಕ್ಕೂಟಗಳಲ್ಲಿ ಸದಸ್ಯತ್ವವಿದೆ. ನಮ್ಮ ರಾಷ್ಟ್ರಗಳಲ್ಲಿ ಯಾವುದಕ್ಕೂ ಒಂದು ಅಂತಾರಾಷ್ಟ್ರೀಯ ಸಂಶೋಧನ ಸಂಸ್ಥೆ ಇಲ್ಲ. ನಮ್ಮ ರಾಜ್ಯಗಳಲ್ಲಿ ಅಂತಾರಾಷ್ಟ್ರೀಯ ವೈಜ್ಞಾನಿಕ ಸಮ್ಮೇಳನಗಳು ಬಹಳ ವಿರಳವಾಗಿ ನಡೆಯುತ್ತವೆ. ತಮ್ಮ ರಾಜ್ಯಗಳಲ್ಲೇ ಜೀವಿಸಿ ದುಡಿಯುವ ನಮ್ಮಂತಹ ಬೆರಳೆಣಿಕೆಯ ಮಂದಿಗೆ ಮಾತ್ರವೇ ವಿದೇಶಗಳ ವೈಜ್ಞಾನಿಕ ಸಂಸ್ಥೆಗಳಲ್ಲಾಗಲಿ ಸಮ್ಮೇಳನಗಳಲ್ಲಾಗಲಿ ಪಾಲುಗೊಳ್ಳಲು ಸಾಧ್ಯವಾಗುತ್ತದೆ. ವಿದೇಶ ಯಾತ್ರೆಗಳೆಲ್ಲಾ ಆಡಂಬರವೆಂದಾಗಿದೆ ಸರ್ವಸಾಮಾನ್ಯವಾದೊಂದು ಅಭಿಪ್ರಾಯ.

ಈ ಏಕಾಕಿತನಕ್ಕೆ ಪರಿಹಾರ ಕಾಣಲಿಕ್ಕಾಗಿಡೆ ಪಾಕಿಸ್ತಾನದಲ್ಲಿ ಇಂಟರ್‌ನ್ಯಾಶನಲ್ ಸೆಂಟರ್ ಫೋರ್ ಥಿಯರಿಟಿಕಲ್ ಫಿಸಿಕ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಲು ನಾನು ಶಿಫಾರಸು ಮಾಡಿದ್ದು. ತಮ್ಮ ವಿಷಯಗಳ ಹೊಸ ಬೆಳವಣಿಗೆಗಳ ಕುರಿತೂ ಇನ್ನಿತರ ವಿಚಾರಗಳ ಬಗ್ಗೆಯೂ ಅರಿಯಲಿಕ್ಕೂ ಅನುಭವಿಸಲಿಕ್ಕೂ ವಿಕಾಸಶೀಲ ರಾಷ್ಟ್ರಗಳ ವಿಜ್ಞಾನಿಗಳು ಪರದೇಶಗಳಿಗೆ ಹೋಗುವ ಗತಿಗೇಡು ಕೊನೆಗೊಳ್ಳಬೇಕೆಂದು ಸಹ ನಾನು ಭಾವಿಸಿದೆ. ಅಂತಾರಾಷ್ಟ್ರೀಯ ಅಣುಇಂಧನ ಕಮಿಷನ್ (ಐ.ಎ.ಇ.ಎ.), ಯುನೆಸ್ಕೋ ಎಂಬೀ ಸಂಯುಕ್ತ ರಾಷ್ಟ್ರ ಸಂಘಟನೆಗಳ ದ್ವಾಗಿದೆ ಈ ಇಂಟರ್‌ನ್ಯಾಶನಲ್ ಸೆಂಟರ್. ಸುಮಾರು 175 ಅರಬಿ, ಮುಸ್ಲಿಂ ಸಂಶೋಧಕರಿಗೆ ವರ್ಷಂಪ್ರತಿ ಈ ಸಂಸ್ಥೆ ಅಧ್ಯಯನ ಸೌಕರ್ಯವನ್ನು ನೀಡುತ್ತದೆ. (ಎಲ್ಲಾ ವಿಕಾಸಶೀಲ ರಾಷ್ಟ್ರಗಳಿಂದ 1000 ಮಂದಿಗೂ) ಈ 175 ಮಂದಿಗಳ ಪೈಕಿ 15 ಮಂದಿಗೆ ಕುವೈಟ್ ಸಾಯನ್ಸ್ ಫೌಂಡೇಶನ್ ಹಾಗೂ ಕುವೈಟ್ ಖತರ್ ವಿಶ್ವವಿದ್ಯಾಲಯಗಳು ಧನಸಹಾಯವನ್ನು ನೀಡುತ್ತವೆ. ಬಾಕಿಯವರಿಗೆ ನಾನು ಇಟೆಲಿ, ಸ್ವೀಡನ್ ಮೊದಲಾದ ರಾಜ್ಯಗಳಿಂದ ಧನಸಹಾಯವನ್ನು ಒದಗಿಸಿಕೊಡುತ್ತೇನೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಐದು ಪ್ರಧಾನ ವಿಚಾರಗಳನ್ನು ಇಸ್ಲಾಮಿಕ್ ರಾಷ್ಟ್ರ ಸಮೂಹಗಳ ಶಾಸ್ತ್ರನವೋತ್ಥಾನ ಆಶ್ರಯಿಸಿಕೊಂಡಿದೆ. ಅವು, ಪ್ರಾಮಾಣಿಕವಾದ ಪ್ರತಿಬದ್ಧತೆ, ಉದಾರವಾದ ಪ್ರೋತ್ಸಾಹ, ಸುರಕ್ಷಿತತೆಯ ಭರವಸೆ, ಸ್ವಯಂ ಆಡಳಿತಾಧಿಕಾರ, ನಮ್ಮ ವಿಜ್ಞಾನರಂಗದ ಅಂತಾರಾಷ್ಟ್ರೀಕರಣ ಎಂಬವುಗಳಾಗಿವೆ.

## ಸಂಪ್ರದಾಯವಾದಿಗಳು ವಿರೋಧಿಸುವರು, ಪರವಾಇಲ್ಲ

ವಿಜ್ಞಾನದೊಡನಿರುವ ಈ ಅಭಿನಿವೇಶವನ್ನು ಕೆಲವರು ವಿರೋಧಿಸುವರೆಂಬುದರಲ್ಲಿ ಸಂದೇಹವಿಲ್ಲ. ಹೀಗೆ ವಿರೋಧಿಸುವವರು ಇಸ್ಲಾಮಿಕ ದೇವಶಾಸ್ತ್ರ ಪಾರಂಪರ್ಯದ ಹೆಸರನ್ನು ಅನರ್ಹವಾಗಿ ಬಳಸುತ್ತಾರೆಂಬುದು ಬಹಳ ದುಃಖಕರವಾದ ವಿಚಾರವಾಗಿದೆ.

ಲಂಡನಿನಿಂದ ಪ್ರಕಟಗೊಳ್ಳುತ್ತಿರುವ ಬಹಳ ಪ್ರಚಾರವಿರುವ ಒಂದು ಇಸ್ಲಾಮಿ ಮಾಸಪತ್ರಿಕೆಯಲ್ಲಿ ವಿಜ್ಞಾನದ ಬಗ್ಗೆ ಬಹಳ ಅಸಂಬದ್ಧವಾಗಿ ಬರೆಯಲಾದ

ಲೇಖನಗಳು ಇಂದು ಸಹ ಮುದ್ರಿತವಾಗುತ್ತವೆ. ಕೆಲವು ಲೇಖನಗಳ ಉದಾಹರಣೆಗಳನ್ನು ನೋಡಿರಿ :

"ಮಧ್ಯಕಾಲಗಳ ಶಾಸ್ತ್ರ ವಾಸ್ತವದಲ್ಲಿ 'ಇಸ್ಲಾಮಿಕ' ಶಾಸ್ತ್ರವಾಗಿತ್ತೋ......?"

"ಅಲ್ ಕಿನ್‌ಡಿ, ಅಲ್ ಫರಾಬಿ, ಇಬ್ನ್ ಅಲ್ ಹಲ್ಕಾಂ, ಇಬ್ನ್ ಸೀನಾ ಮೊದಲಾದ ಮಧ್ಯಕಾಲಗಳ ಪ್ರಶಸ್ತ ಮುಸ್ಲಿಂ ಶಾಸ್ತ್ರಜ್ಞರು ಮುಸ್ಲಿಮರಾಗಿದ್ದರು ಹೊರತು, ಅವರಲ್ಲಿ ಅಥವಾ ಅವರ ಸಾಧನೆಗಳಲ್ಲಿ ಇಸ್ಲಾಮಿಕವಾಗಿ ಏನೂ ಇದ್ದಿಲ್ಲವೆಂದು ತಿಳಿಯುತ್ತದೆ. ಮಾತ್ರವಲ್ಲ, ಅವರು ಸ್ಪಷ್ಟವಾದ ಅನಿಸ್ಲಾಮಿಕ ಜೀವನವನ್ನು ನಡೆಸುತ್ತಿದ್ದರು. ವೈದ್ಯಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಗಣಿತಶಾಸ್ತ್ರ, ತತ್ವಶಾಸ್ತ್ರ ಮೊದಲಾದ ರಂಗಗಳಲ್ಲಿ ಅವರು ಮಾಡಿದ ಸಾಧನೆಗಳು ಗ್ರೀಕ್ ಚಿಂತನೆಯ ಸ್ವಾಭಾವಿಕವೂ ವೈಚಾರಿಕವೂ ಆದ ಅನುಬಂಧ ಮಾತ್ರವಾಗಿದ್ದುವು......

"ಅಲ್ ಕಿನ್‌ಡಿಗೆ ಮುತಸಲೈಟ್ ವಿಶ್ವಾಸಗಳಿದ್ದವು......... ಇಬ್ನ್ ಅಲ್ ಹಲ್ಕಾಂ ಸಂಪೂರ್ಣ ಅರಿಸ್ಟಾಟಲ್ ವಿಶ್ವಾಸಿ."

ವೈಜ್ಞಾನಿಕ ಇತಿಹಾಸಕಾರನಾದ ದೆಬೋರನ ಮಾತುಗಳನ್ನು ಕೇಳಿರಿ:

"ಅಲ್ ಹಲ್ಕಾಂ ಎಲ್ಲಾ ಸಿದ್ಧಾಂತಗಳನ್ನೂ ಪರಿಗಣಿಸಿ ಎಲ್ಲವುಗಳಿಂದ ಉತ್ತಮ ಅಂಶಗಳನ್ನು ಕಂಡುಹಿಡಿಯಲು ಹೆಚ್ಚು ಕಮ್ಮಿ ವಿಜಯಕರವಾದ ಶ್ರಮಗಳನ್ನು ನಡೆಸಿದನು. ಇಂದ್ರಿಯಗಳಿಗೆ ಅನುಭವವೇದ್ಯವಾದ ಪ್ರಪಂಚವನ್ನು ಮಾತ್ರವೇ ಹಲ್ಕಾಂ ಸತ್ಯವೆಂದು ತಿಳಿದಿದ್ದನು. ಹಲ್ಕಾಂನನ್ನು ಧರ್ಮ ವಿರೋಧಿಯೆಂದು ಭಾವಿಸಿದುದರಲ್ಲಿಯೂ ಮುಸ್ಲಿಂ ಲೋಕ ಆತನನ್ನು ಪೂರ್ಣವಾಗಿ ಮರೆತುಬಿಟ್ಟುದುದರಲ್ಲಿಯೂ ಆಶ್ಚರ್ಯವಿಲ್ಲ......"

ಬಹುಪಕ್ಷ ಮುಸ್ಲಿಮರು ಅಭಿಮಾನಪಡುವ ಸಾಧನೆಗಳನ್ನು ಗಳಿಸಿಕೊಟ್ಟವರ ಬಗ್ಗೆ ಹೀಗೆಲ್ಲಾ ಆ ಲೇಖಕ ನಮ್ಮ ವೈಜ್ಞಾನಿಕ ಪಾರಂಪರ್ಯವನ್ನೇ ಮುಂಚೆ ಕುಸಿದ ಏಕಾಕಿತನ ಧೋರಣೆಗಾಗಿ ಮತ್ತೂ ವಾದಿಸುತ್ತಾರೆ:

"ಉತ್ತಮ ಅಂಶಗಳನ್ನು ಮಾತ್ರ ಆರಿಸಿಕೊಂಡು ಏಕಪಕ್ಷೀಯವಾದ ಏಕಾಕಿತನವನ್ನು ಸ್ವಯಂ ಸ್ವೀಕರಿಸಿದುದರಿಂದ ಮಾತ್ರ ಪಾಶ್ಚಾತ್ಯರ ರಾಜಕೀಯ ಮೇಧಾವಿತ್ವದಿಂದ ರಕ್ಷೆಹೊಂದಲು ಕೆಲವು ರಾಷ್ಟ್ರಗಳಿಗೆ ಸಾಧ್ಯವಾಯಿತು. ರಶ್ಯಾ ಮತ್ತು ಚೀನಾ ಹೀಗೆ ಪರದೇಶದ ಆಳ್ವಿಕೆಯಿಂದ ಪಾರಾದುವು. ಜಪಾನನ್ನು ಸೋಲಿಸುವುದನ್ನು ನಿಲ್ಲಿಸಬೇಕಾದರೆ ಪೂರ್ವ ಶರ್ತವಾಗಿ ಜಪಾನು ಮತ್ತು ಅಮೇರಿಕ ಪರಸ್ಪರ ವ್ಯಾಪಾರ ಸಂಬಂಧವನ್ನು ಆರಂಭಿಸಬೇಕೆಂಬ ಅಮೇರಿಕದ ಕಮಾಂಡರ್ ಪೆರಿಯ ಬೇಡಿಕೆಯನ್ನು ಅಂಗೀಕರಿಸಿದ್ದರೆ ಜಪಾನು ಸಹ ರಶ್ಯಾ ಮತ್ತು ಚೀನಾದಂತೆ ಆಗುತ್ತಿತ್ತು.........

"......ಪಾಶ್ಚಾತ್ಯ ವಿಜ್ಞಾನ, ಪಾಶ್ಚಾತ್ಯ ತಾಂತ್ರಿಕ ವಿದ್ಯೆ ಎಂಬವುಗಳ ಆಮದು ನಿಲ್ಲಿಸಲು ತಮ್ಮನ್ನು ಪ್ರಾಪ್ತರನ್ನಾಗಿ ಮಾಡುವ ವಿಜ್ಞಾನ ಧೋರಣೆಯನ್ನು ಇಸ್ಲಾಮೀ ರಾಷ್ಟ್ರಗಳು ರೂಪೀಕರಿಸಬೇಕಾಗಿದೆ......"

ಪ್ರಾರ್ಥನೆಯ ಸಮಯವನ್ನು ನಿಶ್ಚಯಿಸಲಿಕ್ಕಿರುವ ಉಪಕರಣವನ್ನು ಕಂಡುಹಿಡಿಯಲಿಕ್ಕೆ ಗ್ರೀಕ್ ಬೈಝಂಟೈನ್ (ಸೌರ) ಕೆಲೆಂಡರ್ ಉಪಯೋಗಿಸಿದುದಕ್ಕೆ ಅಲ್‌ಬರೂನಿಯನ್ನು ಓರ್ವ ಸಮಕಾಲೀನನು ಧರ್ಮವಿರೋಧಿಯೆಂದು ಕರೆದುದು ನನಗೆ ನೆನಪಾಗುತ್ತದೆ. "ಬೈಝಂಟೈನ್ ಜನರು ರೊಟ್ಟಿಯನ್ನೂ ತಿನ್ನುತ್ತಾರೆ. ಇನ್ನು ನೀವು ರೊಟ್ಟಿಗೆ ವಿರುದ್ಧವಾಗಿಯೂ ಧಾರ್ಮಿಕ ವಿರೋಧವನ್ನು ಹೇರುವಿರೋ ?" – ಅಂದು ಅಲ್‌ಬರೂನಿ ನೀಡಿದ ಮರುಯೇಟು ಹೀಗಿತ್ತು.

ಇಸ್ಲಾಮಿನಲ್ಲಿ ವಿಜ್ಞಾನವನ್ನು ಅಭಿವೃದ್ಧಿಗೊಳಿಸಲು ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂಬುದರ ಬಗ್ಗೆ ನಾನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

## ವೈಜ್ಞಾನಿಕ ವಿದ್ಯಾಭ್ಯಾಸ

ಪವಿತ್ರ ಗ್ರಂಥ ಅಲ್–ತಫಕ್ಕುರ್ (ಪ್ರಕೃತಿ ನಿಯಮಗಳಿಗೆ ಸಂಬಂಧಿಸಿದ್ದು) ಅಲ್–ತಕ್ಷೀರ್ (ತಾಂತ್ರಿಕ ವಿದ್ಯೆಯಿಂದ ಪ್ರಕೃತಿಯನ್ನು ಜಯಿಸುವುದು) ಎಂಬವುಗಳಿಗೆ ಬಹಳ ಪ್ರಾಧಾನ್ಯ ನೀಡುತ್ತದೆ. ಈ ವಿಚಾರವನ್ನೂ

ಆಧುನಿಕ ಜೀವಿತ ಯಾಥಾರ್ಥ್ಯಗಳನ್ನೂ ಗಣನೆಗೆ ತೆಗೆಯುವಾಗ, ಇಸ್ಲಾಮಿನ ಉಲಮ (ಮತ ಪಂಡಿತ) ಮೊತ್ತಮೊದಲಿಗೆ ಮಾಡಬೇಕಾದುದು ಸೆಕೆಂಡರಿ ಶಾಲೆಯಿಂದ ವಿಶ್ವವಿದ್ಯಾಲಯದ ವರೆಗೆ, ವಿದ್ಯಾಭ್ಯಾಸದ ಎಲ್ಲಾ ಘಟ್ಟಗಳಲ್ಲೂ ವಿಜ್ಞಾನ–ತಂತ್ರಜ್ಞಾನ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದು. ಇಂದು, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೋಲಿಸಿ ನೋಡಿದರೆ ಆನುಕಾಲಿಕವಾಗಿ ಬಹಳ ಕನಿಷ್ಠ ಸಂಖ್ಯೆಯ ಮುಸ್ಲಿಮರು ಮಾತ್ರ ವಿಜ್ಞಾನದ ಅಧ್ಯಯನ ಮಾಡುತ್ತಿದ್ದಾರೆ. ಶಾಲೆಗಳಲ್ಲೂ ವಿಶ್ವವಿದ್ಯಾಲಯಗಳಲ್ಲೂ ಹೆಚ್ಚು ಹೆಚ್ಚು ವಿಜ್ಞಾನ–ತಂತ್ರಜ್ಞಾನ ವಿಷಯಗಳನ್ನು ಕಲಿಯಲು ನಮ್ಮ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು.

ಇದಕ್ಕಾಗಿ ಶಾಲೆಗಳಲ್ಲಿ ವೈಜ್ಞಾನಿಕ ಅಧ್ಯಾಪನಗಳನ್ನು ಕೊಡಬೇಕು, ಯೋಗ್ಯತೆಯುಳ್ಳ ಅಧ್ಯಾಪಕರು ಬೇಕು, ವಿಜ್ಞಾನ ಉಪಕರಣಗಳು ಬೇಕು. ಒಂದು ವೇಳೆ, ಅಥವಾ ಹೆಚ್ಚು ಪ್ರಧಾನವಾಗಿ, ಅರ್ಹ ವಿದ್ಯಾರ್ಥಿಗಳು ಮಧ್ಯದಲ್ಲಿ ವಿದ್ಯಾಭ್ಯಾಸವನ್ನು ನಿಲ್ಲಿಸದೆ ಮುಂದುವರಿಸಿಕೊಂಡು ಹೋಗಲು ಪ್ರೋತ್ಸಾಹವನ್ನು ಸಹ ನೀಡಬೇಕಾದೀತು.

ಆರ್ಥಿಕ ಪರಾಧೀನತೆಗಳಿಂದಲೂ ಇನ್ನಿತರ ಕಾರಣಗಳಿಂದಲೂ ಹೀಗೆ ಮಧ್ಯದಲ್ಲೇ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾದವರು ಬಹಳಷ್ಟು ಮಂದಿ ಇದ್ದಾರೆ. ಮಕ್ಕಳಿಗೆ ವಿಜ್ಞಾನವನ್ನೇ ಜೀವಿತವೃತ್ತಿಯನ್ನಾಗಿ ಮಾಡಲು ಅವಶ್ಯವಾದ ದೀರ್ಘಕಾಲ ವಿದ್ಯಾಭ್ಯಾಸಕ್ಕೆ ಧನವ್ಯಯ ಮಾಡಲು ಹೆತ್ತವರಿಗೆ ಸಾಧ್ಯವಾಗುವುದಿಲ್ಲ.

ಇಸ್ಲಾಮಿ ರಾಷ್ಟ್ರಗಳಿಗೆಲ್ಲಾ ಪ್ರಯೋಜನ ಸಿಗುವಂತೆ ಒಂದು 'ಇಸ್ಲಾಮಿಕ ವಿಜ್ಞಾನ ಪ್ರತಿಭಾ ನಿಧಿ' ರೂಪೀಕರಿಸಬೇಕು. ಪ್ರತಿವರ್ಷ 5 ಕೋಟಿ ಡಾಲರಾದರೂ ನಿಧಿಗೆ ಲಭಿಸಬೇಕು. ಈ ಮೊತ್ತ ಇಸ್ಲಾಮಿಕ ರಾಷ್ಟ್ರಗಳಿಗೂ ಲಭ್ಯವಾಗಬೇಕು. ಇಂತಹ ಒಂದು ನಿಧಿಯನ್ನು ರೂಪೀಕರಿಸುವುದು ಅಸಾಧ್ಯವೆಂದಾದರೆ, ಒಪೆಕ್ ರಾಜ್ಯಗಳು, ಬಹಳ ಉದಾರವಾಗಿ ತಮ್ಮದೇ ಆದ ವಿಜ್ಞಾನ ಪ್ರತಿಭಾ ನಿಧಿಗಳನ್ನು ರೂಪೀಕರಿಸಿ ಮುತುವರ್ಜಿವಹಿಸಬೇಕಾಗಿದೆ. ಪ್ರತಿಯೊಂದು ಭೂವಲಯಕ್ಕೂ ಪ್ರತ್ಯೇಕವಾಗಿ ಕಾಯ್ದಿರಿಸಿಕೊಂಡು, ಈ ಒಪೆಕ್ ನಿಧಿಗಳು ಇತರ ರಾಷ್ಟ್ರಗಳಿಗೂ ಲಭಿಸುವಂತಾಗಬೇಕು.

ಮಧ್ಯಪೂರ್ವ ದೇಶದಲ್ಲಾಗಲಿ ವಿದೂರಪೂರ್ವ ದೇಶದಲ್ಲಾಗಲಿ, ಆಫ್ರಿಕದಲ್ಲಾಗಲಿ ಇರುವ ಒಂದೇ ಒಂದು ಮುಸ್ಲಿಂ ರಾಜ್ಯಕ್ಕೂ ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಉನ್ನತ ವಿಜ್ಞಾನ–ತಂತ್ರಜ್ಞಾನ ಸಾಮರ್ಥ್ಯವಿಲ್ಲ. ಈ ಸಾಮರ್ಥ್ಯವನ್ನು ಗಳಿಸುವುದರಲ್ಲಿ ಇತ್ತೀಚಿಗಿನ ಕಾಲಗಳಲ್ಲಿ ಸರಕಾರಗಳು ತೋರಿಸುವ ಅನಾಸಕ್ತಿಯೇ ಇದಕ್ಕೆ ಮುಖ್ಯ ಕಾರಣ. ಅಂತಾರಾಷ್ಟ್ರ ಮಾನದಂಡಗಳನ್ನಿಟ್ಟು ನೋಡುವಾಗ ಒಂದು ಆಧುನಿಕ ಸಮೂಹದಲ್ಲಿ ನಿರೀಕ್ಷಿಸಲ್ಪಡುವ ವಿಜ್ಞಾನ–ತಂತ್ರಜ್ಞಾನ ಸಾಮರ್ಥ್ಯದ ಹತ್ತರಲ್ಲೊಂದು ಅಂಶ ಮಾತ್ರವೇ ಇಸ್ಲಾಮಿ ಲೋಕಕ್ಕಿದೆ. ಆಧುನಿಕ ಸಮೂಹದಲ್ಲಿ ಸಾಂಪತ್ತಿಕವಾಗಿ ಸಜೀವವಾದ ಮನುಷ್ಯ ಸಾಮರ್ಥ್ಯದ ಶೇಕಡ 3 ಉನ್ನತ ವಿಜ್ಞಾನ–ವೈದ್ಯ–ತಂತ್ರಜ್ಞಾನ ರಂಗಗಳಲ್ಲಿರಬೇಕು ಹಾಗೂ ಆ ಸಮೂಹದ ಒಟ್ಟು ರಾಷ್ಟ್ರ ವರಮಾನಗಳಲ್ಲಿ ಶೇಕಡ ಒಂದು ಈ ರಂಗದಲ್ಲಿ ಪ್ರವರ್ತಿಸುವವರಿಗೋಸ್ಕರ ವ್ಯಯಿಸಬೇಕೆಂಬುದು ಅಂತಾರಾಷ್ಟ್ರ ಮಾನದಂಡವಾಗಿದೆ.

## ತಾಂತ್ರಿಕ ಮಟ್ಟ

ವಿಜ್ಞಾನ ಮತ್ತು ತಂತ್ರಜ್ಞಾನ ಮೂಲಕ ಪ್ರಕೃತಿಯನ್ನು ಜಯಿಸುವುದರ ಕುರಿತು ತಕ್ಷೀರ್‌ನಲ್ಲೂ ತಫಾಕುರ್‌ನಲ್ಲೂ ಪವಿತ್ರ ಗ್ರಂಥ ಬಹಳವಾಗಿ ಒತ್ತುಕೊಟ್ಟಿದೆ. ತಮ್ಮ ಕಾಲದಲ್ಲಿ ತಾಂತ್ರಿಕ ವಿದ್ಯೆಯಲ್ಲಿ ಆಧಿಪತ್ಯವನ್ನು ಗಳಿಸಿದ ದಾವಿದ್ ಮತ್ತು ಸೊಲೊಮನ್‌ರ ಉದಾಹರಣೆಗಳನ್ನು ಪವಿತ್ರ ಗ್ರಂಥ ನಮ್ಮ ಮುಂದಿಡುತ್ತದೆ.

"ಹಾಗೆ ನಾವು ಅವನಿಗೋಸ್ಕರ ಕಬ್ಬಿಣವನ್ನು ಮೃದುಗೊಳಿಸಿದೆವು...... ಅವನಿಗೋಸ್ಕರ ನಾವು ಗಾಳಿಯನ್ನು ಪಳಗಿಸಿದೆವು...... ಜಿನ್ನುಗಳನ್ನು ಅವನ ಅಧೀನಪಡಿಸಿದೆವು."

ಇದು ಅವರ ಕಾಲದ ತಾಂತ್ರಿಕ ಶಕ್ತಿಗಳನ್ನು ನಿಯಂತ್ರಿಸಿದುದರ ಕುರಿತಾಗಿದೆಯೆಂಬುದು ನನ್ನ ನಮ್ರ ವ್ಯಾಖ್ಯಾನ. ಈ ಶಕ್ತಿಗಳನ್ನು ಅಧೀನಪಡಿಸಿ ಅವರು

# ದಾಂಪತ್ಯ ಜೀವಿತದ ಮಹತ್ವ

★ ಎಂ. ಅಲಿಕೋಯ

ಗ್ರೀಸ್‌ನ ಎಥೋಸ್ ಗಿರಿಶೃಂಗವು ಕ್ರೈಸ್ತ ಧರ್ಮೀಯ ಸನ್ಯಾಸಿ ಸಮುದಾಯದ ವಾಸಕೇಂದ್ರವಾಗಿದೆ. ಮಾಸಿಡೋನಿಯದಿಂದ ಏಜಿಯನ್ ಸಮುದ್ರಕ್ಕೆ ತಳ್ಳಲ್ಪಟ್ಟಂತಿರುವ ಎಥೋಸ್, ಎತನ್ಸಿನಿಂದ ಸುಮಾರು 150 ಮೈಲು ದೂರದಲ್ಲಿದೆ. 30 ಮೈಲು ಎತ್ತರವಿರುವ ಈ ಶೃಂಗದ ಅತಿ ಹೆಚ್ಚು ವಿಸ್ತಾರವಿರುವ ಸ್ಥಳದ ಅಗಲ ಆರೂವರೆ ಮೈಲುಗಳು. ವೃಕ್ಷನಿಬಿಡವಾದ ಇದರ ಉತ್ತರ ಭಾಗ ಶೃಂಗದ ತುದಿಯ ವರೆಗೆ ಹರಡಿರುವುದಾಗಿ ಕಾಣಬಹುದು. ಪಕ್ಕನೆ ಸಮುದ್ರದಿಂದ ಮೇಲೆದ್ದು ಬಂದಂತೆ ತೋರುತ್ತದೆ ಈ ಗಿರಿಶೃಂಗ. ಸನ್ಯಾಸಿವರ್ಯರೂ ಇತರ ಹಿರಿಯರೂ ಸೇರಿ 1924ರಲ್ಲಿ ನಿರ್ಮಿಸಿದುದಾಗಿದೆ ಇಂದಿನ ಸಂವಿಧಾನ. 1927ರ ಗ್ರೀಕ್ ಸಂವಿಧಾನದ ಅಂಶವಾಗಿ ಅದು ಪರಿಗಣಿಸಲ್ಪಡುತ್ತದೆ. ಗ್ರೀಕ್ ಸರಕಾರದ ಪ್ರಾತಿನಿಧ್ಯ ಪರಿಪೂರ್ಣವಾಗಿದೆ. ಆದರೆ ನಿಜವಾದ ಆಡಳಿತ ಸನ್ಯಾಸಿ ಸಮುದಾಯದಲ್ಲಿ ಆಧಿಷ್ಠಿತವಾಗಿದೆ. ಉನ್ನತ ಮಟ್ಟದ ನಾಲ್ಕು ಸನ್ಯಾಸಿಗಳಿರುವ ನಿರ್ವಾಹಕ ಸಮಿತಿ ಮತ್ತು ಸನ್ಯಾಸಿ ಸಮುದಾಯದಿಂದ 20 ಪ್ರತಿನಿಧಿಗಳು ಆಡಳಿತ ಕಾರ್ಯಾಲಯದಲ್ಲಿದ್ದಾರೆ. 1783ರಿಂದ ಈ ರೂಢಿ ಜಾರಿಯಲ್ಲಿದೆ. ಈ ಸನ್ಯಾಸಿ ಸಮುದಾಯ ಸಾವಿರ ವರ್ಷಗಳಿಗೆ ಮೊದಲು ಎಂದರೆ 9ನೇ ಶತಮಾನದಲ್ಲಿ ಪೀಟರ್ ಎಥೋನೈಟ್‌ನ ಕಾಲದಲ್ಲಿ ಸ್ಥಾಪಿಸಲ್ಪಟ್ಟದ್ದಾಗಿದೆ. ಈ ಶತಕದ ಆರಂಭದಲ್ಲಿ ಎಥೋಸ್ ಗಿರಿಶಿಖರದಲ್ಲಿ 8000 ಸನ್ಯಾಸಿಗಳಿದ್ದರು. 1961ರಲ್ಲಿ 2687 ಪುರುಷರು ಮಾತ್ರವಿದ್ದ ಒಟ್ಟು ಜನಸಂಖ್ಯೆಯಲ್ಲಿ 2000 ಮಂದಿ ಸನ್ಯಾಸಿಗಳು. ಬಾಕಿಯವರು ಸಾಮಾನ್ಯ ಕೆಲಸಗಾರರಾಗಲಿ ಕೂಲಿಗಾರರಾಗಲಿ ಆಗಿದ್ದಾರೆ. ಕನ್ಯೆ ಮರಿಯಳಿಗೆ ಸಮರ್ಪಿಸಲಾದ ಎಥೋಸಿನಲ್ಲಿ ಹನ್ನೊಂದನೇ ಶತಮಾನದಿಂದೀಚೆಗೆ ಯಾವಳೇ ಸ್ತ್ರೀಗೂ ಪ್ರವೇಶ ಅನುಮತಿ ನೀಡಲಾಗಿಲ್ಲ.

---

(8ನೇ ಪುಟದಿಂದ)

ಅರಮನೆಗಳನ್ನೂ ಅಣೆಕಟ್ಟುಗಳನ್ನೂ ಜಲಾಶ್ರಯಗಳನ್ನೂ ನಿರ್ಮಿಸಲು ಉಪಯೋಗಿಸಿದರು. ಕಬ್ಬಿಣ ಮತ್ತು ದ್ರವರೂಪದ ತಾಮ್ರದಿಂದ ಪ್ರತಿರೋಧ ಗೋಡೆಯನ್ನು ನಿರ್ಮಿಸಿದ ದುಲ್‌ಕರ್ನೈನ್‌ರ ದೃಷ್ಟಾಂತ ಸಹ ಪವಿತ್ರ ಗ್ರಂಥದಲ್ಲಿದೆ. ಹೀಗೆ ಖುರ್‌ಆನಿನಲ್ಲಿ ಲೋಹಶಾಸ್ತ್ರ, ಬೃಹತ್ ನಿರ್ಮಾಣ, ವಾಯುಶಕ್ತಿ, ವಾರ್ತಾ ವಿನಿಮಯ ಇತ್ಯಾದಿಗಳ ತಾಂತ್ರಿಕ ವಿದ್ಯೆಗಳ ಕುರಿತು ಪ್ರಾಧಾನ್ಯದಿಂದ ಪ್ರತಿಪಾದಿಸಲಾಗಿದೆ. ಎಲ್ಲಾ ಮುಸ್ಲಿಮರೂ ತಿಳಿದಿರುವಂತೆ ಪವಿತ್ರ ಗ್ರಂಥ ಎಂದಿಗೂ ಯಾತ್ರಾ ವಿವರಣೆ ಅಲ್ಲ. ಭಾವೀಕಾಲಕ್ಕಿರುವ ಆಹ್ವಾನ ಮತ್ತು ಸಮುದಾಯ ಅನುವರ್ತಿಸಬೇಕಾದ ಮಾದರಿಗಳು ಅದರಲ್ಲಿ ಅಡಕವಾಗಿದೆ.

ಅತ್ಯಂತ ಹೊಸ ತಾಂತ್ರಿಕ ವಿದ್ಯೆಯನ್ನು ಸ್ವಾಯತ್ತಪಡಿಸುವುದರಲ್ಲಿ ಅತ್ಯಂತ ತತ್ಪರರಾಗಿದ್ದರು ಪ್ರವಾದಿವರ್ಯರು. ಅರೇಬಿಯಾದಲ್ಲಿ ಪ್ರಥಮವಾಗಿ ಒಂದು ಮಾದರಿ ಬೇಕಾಗಿದೆ ಎಂದು ಅವರು ಮನಗಂಡರು. ಬೈಝಂಟೈನ್ ಕಾಲದ ಮಾನ್–ಜಾನಿಖ್‌ಗಳನ್ನು ಸ್ಥಾಪಿಸಲಿಕ್ಕೂ ಅರಬಿಯರು ಯುದ್ಧದ ಆವಶ್ಯಕತೆಗಳಿಗೆ ಅತ್ಯಂತ ನವೀನ ಉಪಕರಣಗಳನ್ನು ಉಪಯೋಗಿಸಲಿಕ್ಕೂ 'ಖೈಬರ್‌ನೊಂದಿಗೆ' ಇರುವ ಆಶ್ರಿತತೆಯನ್ನು ಕಡಿಮೆಗೊಳಿಸಲಿಕ್ಕೂ ಪೈಗಂಬರರು ಆಜ್ಞಾಪಿಸಿದುದನ್ನು ಜ್ಞಾಪಿಸಿರಿ.

(ಸಶೇಷ)

ಲೋಕದಲ್ಲಿರುವ ಬೇರೆ ಯಾವುದಕ್ಕೂ ಹೋಲಿಸಲು ಅಸಾಧ್ಯವಾದ ಪ್ರದೇಶಗಳಲ್ಲಿ ಒಂದಾಗಿದೆ ಎಥೋಸ್. ಇಲ್ಲಿಯ ಸನ್ಯಾಸಿ ಸಮುದಾಯದ ಗಡಿಯನ್ನು ದಾಟುವರೆ ಒಬ್ಬಳೇ ಒಬ್ಬ ಸ್ತ್ರೀಗೆ ಕೂಡ **ಅನುಮತಿ** ಇಲ್ಲ. ಸಾವಿರ ವರ್ಷಗಳಿಂದೀಚೆಗೆ ಒಬ್ಬಾಕೆ ಸ್ತ್ರೀಯಾಗಲಿ ಈ ಗಿರಿಶೃಂಗವನ್ನು ಪ್ರವೇಶಿಸಿದುದಾಗಿ ತಿಳಿದುಬಂದಿಲ್ಲ. ಲೈಂಗಿಕತೆಯ ಕಾರಣವನ್ನು ಮುಂದಿಟ್ಟು, 9ನೇ ಶತಮಾನದಿಂದಲೇ ಎಥೋಸ್ ಶೃಂಗದಲ್ಲಿ ಸ್ತ್ರೀಯರಿಗೆ ಪ್ರವೇಶವನ್ನು ನಿಷೇಧಿಸಲಾಗಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ, ನಿಯಂತ್ರಣಾತೀತವಾದ ಕೀಟಗಳೂ ಚಿತ್ರಶಲಭಗಳೂ ಕಾಡುಪಾರಿವಾಳಗಳೂ ಹೊರತು ಬೇರೆ ಯಾವುದೇ ವರ್ಗದ ಹೆಣ್ಣು ಜಾತಿಗೆ ಎಥೋಸಿನಲ್ಲಿ ಪ್ರವೇಶವಿಲ್ಲ. ಅಲ್ಲಿ ಹುಂಜಗಳು ಕಾಣಸಿಗುತ್ತವೆ. ಆದರೆ ಒಂದೇ ಒಂದು ಹೇಂಟೆ ಇಲ್ಲ. ಹೋರಿಗಳಿವೆ, ಆದರೆ ದನಗಳಿಲ್ಲ. ಕುರಿ, ನಾಯಿ, ಬೆಕ್ಕು ಇತ್ಯಾದಿಗಳು ಎಥೋಸಿನಲ್ಲಿವೆ. ಆದರೆ ಅವುಗಳ ಹೆಣ್ಣು ಜಾತಿ ಕಾಣಸಿಗಲಿಕ್ಕಿಲ್ಲ. ಎಲ್ಲವೂ ಗಂಡು ಜಾತಿ. ಒಂದೇ ಒಂದು ಶಿಶುವಾಗಲಿ ಈ ಗಿರಿಶಿಖರದಲ್ಲಿ ಹುಟ್ಟಲಿಲ್ಲ. ಎಥೋಸ್ ಶೃಂಗವು ಸಂಪೂರ್ಣವಾಗಿ ಒಂದು ಸ್ತ್ರೀನಿರೋಧ ಪ್ರದೇಶವಾಗಿದೆ. ಹತ್ತು ಶತಕಗಳಿಗೆ ಪೂರ್ವದಲ್ಲಿ ಈ ನಿಯಮ ಅಲ್ಲಿ ಜಾರಿಗೆ ಬಂತು. ಮನುಷ್ಯರಲ್ಲಾಗಲಿ ಮೃಗಗಳಲ್ಲಾಗಲಿ ಒಂದೇ ಒಂದು ಹೆಣ್ಣು ಜಾತಿ ಎಥೋಸಿನಲ್ಲಿ ಕಾಲಿಡಲಿಲ್ಲ ಎಂಬುದಾಗಿದೆ ಸತ್ಯ. ಬ್ರದರ್ ಟೋಲ್ಬೋ ಎಂಬೋರ್ವ ಪುರೋಹಿತ 1938ರಲ್ಲಿ ಇಲ್ಲಿ ಮೃತನಾಗುವಾಗ ಆತನಿಗೆ 82 ವರ್ಷ ಪ್ರಾಯವಾಗಿತ್ತು. ಜೀವನದಲ್ಲಿ ಒಮ್ಮೆಯಾದರೂ ಆತನು ಸ್ತ್ರೀಯನ್ನು ಕಂಡಿಲ್ಲ. ಟೋಲ್ಬೋ ಹುಟ್ಟಿದ ಕೂಡಲೇ ಆತನ ತಾಯಿ ಇಹಲೋಕ ತ್ಯಜಿಸಿದ್ದಳು. ನಾಲ್ಕು ತಾಸು ಮಾತ್ರ ಪ್ರಾಯವಿದ್ದ ಶಿಶುವನ್ನು ಸನ್ಯಾಸಿಮಠಕ್ಕೆ ಕೊಂಡೊಯ್ಯಲಾಯಿತು. ಅಲ್ಲಿಂದ ಹೊರಗೆ ಹೋಗದೆಯೇ ಶೈಶವ, ಬಾಲ್ಯ ಮತ್ತು ಯೌವನಾವಸ್ಥೆಯನ್ನು ಟೋಲ್ಬೋ ಕಳೆದನು. ಒಮ್ಮೆಯಾದರೂ ತನ್ನ ಕಣ್ಣುಗಳು ಒಬ್ಬ ಸ್ತ್ರೀಯ ಮುಖದ ಮೇಲೆ ಬೀಳುವ ಸಂದರ್ಭ ಟೋಲ್ಬೋನಿಗೆ ಲಭಿಸಿರಲಿಲ್ಲ.

ಎಥೋಸ್ ಮೌಂಟ್ ಎಂಬ ಶೀರ್ಷಿಕೆಯಲ್ಲಿ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ (ಸಂಪುಟ 11, 1968) ಮತ್ತು ಇರ್ವಿನ್ ಪಾಲ್ ಬರೆದ ದಿ ವರ್ಡ್ (The Word) ಎಂಬ ಗ್ರಂಥದಿಂದ ಸಂಗ್ರಹಿಸಲಾದ ವಿಷಯಗಳಾಗಿವೆ ಮೇಲೆ ಉದ್ಧರಿಸಿದ್ದು. ಎಥೋಸಿನ ಸನ್ಯಾಸಿ ಸಮೂಹದ ಬಗೆಗಿನ ವಿವರಣೆಗಳು ಇತರ ಹಲವು ಗ್ರಂಥಗಳಲ್ಲಿ ಸಹ ಕಾಣಲ್ಪಡುತ್ತವೆ.

ಕೆ. ಲೇಕ್ ಬರೆದ The early days of monasticism on Mount Athos, ಎಫ್. ಎಂ. ಹಾಸ್ಲಕ್ ಬರೆದ Athos and Monastries, ಶರಾದ್ ಬರೆದ Athos, the Mountain of Silence, ಜೆ. ವಾಲಂಟ್ ಬರೆದ Monks of Mount Athos ಎಂಬ ಗ್ರಂಥಗಳು ಅವುಗಳ ಪೈಕಿ ಕೆಲವು.

ಪೌರಸ್ತ್ಯ ಕ್ರೈಸ್ತರೆಡೆಯಲ್ಲಿರುವ ಖಲೇಸಿ ಎಂಬೊಂದು ಪ್ರತ್ಯೇಕ ವರ್ಗದ ಕುರಿತು ತಿಳಿದುಕೊಳ್ಳುವುದು ವಾಚಕರಿಗೆ ಆಸಕ್ತಿಯುಳ್ಳ ವಿಚಾರವಾಗಿರಬಹುದು. ಲೈಂಗಿಕವಾದ ಪಾಪವನ್ನು ನಿವಾರಿಸಲಿಕ್ಕಾಗಿ ಈ ವರ್ಗದ ಎಲ್ಲಾ ಸದಸ್ಯರು ಶಸ್ತ್ರಕ್ರಿಯೆ ಮೂಲಕ ಷಂಡತ್ವವನ್ನು ಪಡೆದುಕೊಂಡಿರುತ್ತಾರೆ. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ, ಸಂಪುಟ III, 1981ರಲ್ಲಿ Eunuch ಎಂಬ ಶೀರ್ಷಿಕೆಯಡಿಯಲ್ಲಿ ಉಲ್ಲೇಖಿಸಿದ್ದು ಈ ರೀತಿಯಾಗಿದೆ: "ಲೈಂಗಿಕ ಪಾಪವನ್ನಾಗಲಿ ಲೈಂಗಿಕಾಸಕ್ತಿಯನ್ನಾಗಲಿ ನಿವಾರಿಸಲಿಕ್ಕಾಗಿ ಸ್ವಇಚ್ಛೆಯಿಂದ ಷಂಡತ್ವವನ್ನು ಪಡೆದಿರುವವರು ಕ್ರೈಸ್ತ ಚರಿತ್ರೆಯ ಹಲವಾರು ಘಟ್ಟಗಳಲ್ಲಿ ಗೋಚರಿಸಿದುದಾಗಿ ಪ್ರಸಿದ್ಧ ಕ್ರೈಸ್ತವ ತಿಯೋಲಜಿಸ್ಟ್ ಓರಿಗನ್ ಪ್ರಸ್ತಾವಿಸುತ್ತಾರೆ. (AD 185 – ce 254). ಮತ್ತಾಯ 19:12, 5 : 28 – 30 ವಚನಗಳನ್ನು ತಮ್ಮ ಈ ಕೃತ್ಯಗಳಿಗೆ ಅವರು ಆಧಾರ ಮಾಡುತ್ತಾರೆ. ತಾವು ದೇವಸೇವೆ ಮಾಡುತ್ತೇನೆಂಬ ನಂಬಿಕೆಯಿಂದ ಮೂರನೇ ಶತಮಾನದಲ್ಲಿ ವಾಲಸಿ ಪಂಥದವರು ಸ್ವಇಚ್ಛೆಯಿಂದ ಷಂಡತ್ವವನ್ನು ಹೊಂದಿದ್ದರು. "(Encyclopaedia Britanica, Vol III, 1981, Eunuch)

ಹೊಸ ಒಡಂಬಡಿಕೆಯಲ್ಲಿ, ಯೇಸುಕ್ರಿಸ್ತರದೆಂದು ಹೇಳಲ್ಪಡುವ ಆ ವಾಕ್ಯಗಳು ಈ ರೀತಿಯಾಗಿವೆ:

1. "ತಾಯಿಯ ಗರ್ಭದಿಂದ ನಪುಂಸಕರಾಗಿ ಹುಟ್ಟಿದವರು ಕೆಲವರು ಇದ್ದಾರೆ; ಮನುಷ್ಯರಿಂದ

ನಪುಂಸಕರಾಗಿ ಮಾಡಲ್ಪಟ್ಟವರು ಕೆಲವರು ಇದ್ದಾರೆ; ಮತ್ತು ಪರಲೋಕ ರಾಜ್ಯದ ನಿಮಿತ್ತವಾಗಿ ತಮ್ಮನ್ನು ತಾವೇ ನಪುಂಸಕರಾಗಿ ಮಾಡಿಕೊಂಡವರು ಕೆಲವರು ಇದ್ದಾರೆ. ಅಂಗೀಕರಿಸಬಲ್ಲವನು ಅಂಗೀಕರಿಸಲಿ" (ಮತ್ತಾಯ 19:12)

2. "ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು. ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಿತ್ತು ಬಿಸಾಟುಬಿಡು; ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವುದಕ್ಕಿಂತ ಅವಯವಗಳಲ್ಲಿ ಒಂದು ಹೋಗುವದು ನಿನಗೆ ಹಿತವಲ್ಲವೇ. ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಟುಬಿಡು; ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವದಕ್ಕಿಂತ ಅವಯವಗಳಲ್ಲಿ ಒಂದು ಹೋಗುವದು ನಿನಗೆ ಹಿತವಲ್ಲವೇ." (ಮತ್ತಾಯ 5:28–30)

ಕ್ರೈಸ್ತ ಸನ್ಯಾಸಿ ಸಮುದಾಯದ ಅತಿದೊಡ್ಡ ಸದಾಚಾರನಿಷ್ಠೆ ಸ್ತ್ರೀವಿರೋಧವೆಂದು ಇದರಿಂದೆಲ್ಲಾ ಮನಗಾಣಬಹುದು. ಸ್ತ್ರೀ ಕೀಳ್ಮಟ್ಟದ ಸೃಷ್ಟಿಯೆಂದೂ ಅವಳೊಂದಿಗಿನ ಸಂಬಂಧ ಅಧಃಪತನಕ್ಕೂ ಅನೈತಿಕತೆಗೂ ಕೊಂಡೊಯ್ಯುವುದೆಂದೂ ಆಗಿದೆ ಅವರ ನೀತಿಶಾಸ್ತ್ರ. ಬ್ರಹ್ಮಚರ್ಯೆ ದಾಂಪತ್ಯ ಜೀವನಕ್ಕಿಂತ ಮಿಗಿಲೆಂಬ ತಪ್ಪಾದ ಅಭಿಪ್ರಾಯವು ಕೆಲವು ಮತತತ್ವಗಳ ಮೇಲೆ ಪ್ರಭಾವ ಬೀರಿದೆ ಎಂಬುದಕ್ಕೆ ಪುರಾವೆಗಳಾಗಿವೆ ಇವೆಲ್ಲಾ. ಮನುಷ್ಯನ ಪತನಕ್ಕೆ ಹೊಣೆ ಸ್ತ್ರೀಯೆಂದೂ ಆಕೆ ಆತ್ಮವಿಲ್ಲದ ಸತ್ವವೆಂದೂ ಸೈತಾನನ ಉಪಕರಣವೆಂದೂ ಇತ್ಯಾದಿಯಾಗಿ ಕ್ರೈಸ್ತ ಸಿದ್ಧಾಂತವು ಘೋಷಿಸುತ್ತಿದೆಂದು ಇದರಿಂದೆಲ್ಲಾ ತಿಳಿದುಕೊಳ್ಳಬೇಕಾಗಿದೆ. ಲೈಂಗಿಕತೆಯನ್ನು ದ್ವೇಷಿಸಬೇಕೆಂಬ ಅಭಿಪ್ರಾಯವನ್ನು ಕ್ರೈಸ್ತ ಮೇಧಾವಿಗಳು ಸದಾ ಸೂಚಿಸುವುದನ್ನೂ ಕಾಣಬಹುದು.

ಮನುಷ್ಯರೆಡೆಯಲ್ಲಿ ಕೀಳ್ಮಟ್ಟದಲ್ಲಿ ಸ್ತ್ರೀಯನ್ನು ಪರಿಗಣಿಸಬೇಕಾದ ಅವಶ್ಯವಿದೆಯೇ ? ಅವಳು ಭೂಮಿಯಲ್ಲಿ ಹೇಗೆ ಶಪಿಸಲ್ಪಟ್ಟವಳಾದಳು ? ಈ 'ಪತನ' ಹೇಗೆ ಸಂಭವಿಸಿತು ? ಕ್ರೈಸ್ತ ಸಿದ್ಧಾಂತ ಪ್ರಕಾರ ಪಾಪ ಭೂಮಿಯಲ್ಲಿ ಉಂಟಾದುದು ಸ್ತ್ರೀ ಮೂಲಕವಾಗಿದೆ. ಸಂತ ಪೌಲ್ ಅದನ್ನು ವ್ಯಕ್ತಗೊಳಿಸುತ್ತಾನೆ: ಆದಮನು ವಂಚನೆಗೆ ಒಳಬೀಳಲಿಲ್ಲ. ಬದಲಾಗಿ ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು. ಹಾಗೆ ಮನುಷ್ಯ ವಂಶದ ಪತನ ಸ್ತ್ರೀ ಮೂಲಕ ಸಂಭವಿಸಿತು. (ತಿಮೋಥೆಯನಿಗೆ I, 2:14) ಹಳೆಯ ಒಡಂಬಡಿಕೆಯಲ್ಲಿ, ಹವ್ವಾಳ ಶಾಪ ಎಲ್ಲಾ ಸ್ತ್ರೀಯರಿಗೂ ತಟ್ಟಿದೆ ಎಂದು ನಾವು ಓದುತ್ತೇವೆ. ಸ್ತ್ರೀಯರ ಪದವಿ ಎರಡನೆಯ ದರ್ಜೆಯದೆಂಬ ತನ್ನ ನಿಲುವು ಸಂತ ಪೌಲ್ ತಿಮೋಥೆಯನಿಗೆ ಬರೆದ ತನ್ನ ಪತ್ರಗಳಲ್ಲಿ ವ್ಯಕ್ತಪಡಿಸಿದ್ದಾನೆ. ಸಂತ ಪೌಲ್ ಬರೆಯುತ್ತಾನೆ: "ಸ್ತ್ರೀಯರು ಮೌನವಾಗಿದ್ದು ಪೂರ್ಣ ವಿಧೇಯರಾಗಿ ಉಪದೇಶವನ್ನು ಕೇಳಬೇಕು. ಉಪದೇಶ ಮಾಡುವದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡೆಸುವದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವದಿಲ್ಲ. ಅವರು ಮೌನವಾಗಿರಬೇಕು. ಮೊದಲು ನಿರ್ಮಿತನಾದವನು ಆದಾಮನಲ್ಲವೇ, ಆ ಮೇಲೆ ಹವ್ವಳು; ಇದಲ್ಲದೆ ಆದಾಮನು ವಂಚನೆಗೆ ಒಳಬೀಳಲಿಲ್ಲ, ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು." (I ತಿಮೊಥೆಯನಿಗೆ, 2:11–14) ಪುನಃ ಹೇಳುತ್ತಾನೆ: "ಸ್ತ್ರೀ ಸಂಪರ್ಕವಿಲ್ಲದೆ ಇರುವದು ಮನುಷ್ಯನಿಗೆ ಒಳ್ಳೇದು, ಆದರೆ ಜಾರತ್ವವು ಪ್ರಬಲವಾಗಿರುವದರಿಂದ ಪ್ರತಿಯೊಬ್ಬನಿಗೆ ಸ್ವಂತ ಹೆಂಡತಿ ಇರಲಿ, ಪ್ರತಿಯೊಬ್ಬಳಿಗೆ ಸ್ವಂತ ಗಂಡನು ಇರಲಿ." (I ಕೊರಿಂಥದವರಿಗೆ, 7:1, 2). ಪುನಃ "ನೀನು ಹೆಂಡತಿಯು ಕಟ್ಟಿಲ್ಲದವನಾಗಿದ್ದೀಯೋ? ಹೆಂಡತಿಯನ್ನು ದೊರಕಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಡ. ಮದುವೆ ಮಾಡಿಕೊಂಡವರಿಗೆ ಶರೀರ ಸಂಬಂಧವಾಗಿ ಕಷ್ಟ ಅನುಭವಿಸುವದು; ಇದು ನಿಮಗೆ ಉಂಟಾಗಬಾರದೆಂದು ನನ್ನ ಅಪೇಕ್ಷೆ". (I ಕೊರಿಂಥದವರಿಗೆ 7:27, 29). ಪುನಃ: "ದೇವಜನರ ಎಲ್ಲಾ ಸಭೆಗಳ ಮರ್ಯಾದೆಯ ಪ್ರಕಾರ ಸ್ತ್ರೀಯರು ಸಭೆಯ ಕೂಟಗಳಲ್ಲಿ ಸುಮ್ಮನಿರಬೇಕು. ಮಾತಾಡುವದಕ್ಕೆ ಅವರಿಗೆ ಅಪ್ಪಣೆಯಿಲ್ಲ; ಅವರು ಅಧೀನದಲ್ಲಿರಬೇಕು. ಧರ್ಮಶಾಸ್ತ್ರದಲ್ಲಿಯೂ ಹೀಗೆ ಹೇಳಿದೆಯಲ್ಲಾ......... ಸ್ತ್ರೀಯರು ಸಭೆಯಲ್ಲಿ ಮಾತಾಡುವದು ನಾಚಿಗೆಗೆಟ್ಟ ಕೆಲಸವಾಗಿದೆ". (I ಕೊರಿಂಥದವರಿಗೆ, 14:34, 35)

ಸ್ತ್ರೀಯರನ್ನು ಅವಗಣಿಸುತ್ತಲೂ ನಿಕೃಷ್ಟ ಜೀವಿಯೆಂದು ಸಾರುತ್ತಲೂ ಇರುವ ನಡೆವಳಿಕೆ ಸಂಹಿತೆ ಕ್ರೈಸ್ತ ಸಭೆಯ ಚರಿತ್ರೆಯಲ್ಲಿ ಆರಂಭದಿಂದ ಮಧ್ಯಕಾಲ ಮೂಲಕ ಆಧುನಿಕ ಯುಗದ ತನಕ ಕ್ರೈಸ್ತ ಧರ್ಮದಲ್ಲಿ ಮುಂದುವರಿದು ಬಂತೆಂಬುದಕ್ಕೆ ಸಂತ ಪೌಲನ ಮಾತ್ರವಲ್ಲ, ಪ್ರಮುಖರಾದ ಅನೇಕ ಕ್ರೈಸ್ತ ಪುರೋಹಿತರ ಉಲ್ಲೇಖಿಸಲ್ಪಟ್ಟ ನಿಲುವು ಸಾಕ್ಷ್ಯ ನೀಡುತ್ತವೆ. ಸ್ತ್ರೀಯರನ್ನು ಪಾಪದ ಪ್ರತಿರೂಪವಾಗಿ ಎಲ್ಲರೂ ಕಾಣುತ್ತಾರೆ. ಉದಾಹರಣೆಗೆ Jesus and Modern Religion ಎಂಬ ಗ್ರಂಥದಲ್ಲಿ ಕ್ರೈಸ್ತ ಪುಣ್ಯಾತ್ಮರುಗಳ ಉದ್ಧರಣೆಗಳಲ್ಲಿ ಕೆಲವು ಗಮನಾರ್ಹವಾಗಿವೆ:

1. ಬ್ರಹ್ಮಚರ್ಯೆ ಕೈಗೊಂಡವನೂ ಕಾಮಾಸಕ್ತಿ ಮೂಲಕ ತಮ್ಮ ಆತ್ಮತೇಜಸ್ಸನ್ನು ಮಲಿನಗೊಳಿಸದವನೂ ಅನುಗ್ರಹೀತನು. —ಸಂತ ಗ್ರಿಗೊರಿ

2. ಸ್ತ್ರೀ ಪಿಶಾಚಿಯ ಕವಾಟದಂತಿದ್ದಾಳೆ. ಆತ್ಮ ಪ್ರಕಾಶವನ್ನೂ ಮೊತ್ತ ಮೊದಲಿನ ದೇವಾಜ್ಞೆಯನ್ನೂ ಉಲ್ಲಂಘಿಸಿದವಳು. ವಿವಾಹವು ವ್ಯಭಿಚಾರದಿಂದ ಭಿನ್ನವಲ್ಲ. —ಸಂತ ತೆರ್ತುಲ್ಲಿಯನ್

3. ಅಗಲಿಸಲಾಗದ ಪಾಪ, ದುರ್ಮಾರ್ಗಕ್ಕೆ ಪ್ರಲೋಭನೆ, ಆವಶ್ಯಕವಾದ ಒಂದು ವಿಪತ್ತು, ಗೃಹ ಜೀವನಕ್ಕೆ ಒಂದು ಅಹಿತ ವಸ್ತು, ಮಾರಕವಾದ ವಶೀಕರಣ ವಸ್ತು – ಸ್ತ್ರೀ ಎಂದರೆ ಇವೆಲ್ಲಾ. —ಸಂತ ಕ್ರಿಸೋಸ್ಟೋಮ್.

4. ಸ್ತ್ರೀ ಪಿಶಾಚಿಯ ಉಪಕರಣವಾಗಿದೆ. —ಸಂತ ಬೆರ್ನಾರ್ಡ್.

5. ಸ್ತ್ರೀ ಪಿಶಾಚಿಯ ಆಯುಧಗಳ ಮೂಲವೂ ಸರ್ಪದ ಸುಯ್ಗುಡು ಶಬ್ದವೂ ಆಗಿದ್ದಾಳೆ. —ಸಂತ ಅಂತೋನಿ.

6. ಆತ್ಮಗಳನ್ನು ಅಧೀನಪಡಿಸಲು ಸೈತಾನ ಉಪಯೋಗಿಸುವ ಉಪಕರಣವಾಗಿದೆ ಸ್ತ್ರೀ. —ಸಂತ ಸಿಪ್ರಿಯನ್.

ಸ್ತ್ರೀಯರೊಡನೆ ಮತ್ತು ವಿವಾಹವೆಂಬ ಸಾಮಾಜಿಕ ಪದ್ಧತಿಯ ಬಗ್ಗೆ ಕ್ರೈಸ್ತರು ತೋರಿಸಿಬರುವ ಮನೋಭಾವ ಏನೆಂಬುದಕ್ಕೆ ಎಷ್ಟೋ ಉದಾಹರಣೆಗಳನ್ನು ಇನ್ನೂ ಮುಂದಿಡಬಹುದು. ಆದರೆ ಇಂದು ಇಗರ್ಜಿಗಳಲ್ಲಿ ಪುರೋಹಿತರು ನಡೆಸುವ ದೀರ್ಘವಾದ ವಿವಾಹ ಸಮಾರಂಭಗಳನ್ನು ಕಾಣುವಾಗ ಸ್ವಾಭಾವಿಕವಾಗಿಯೂ ವಿವಾಹವೆಂಬ ಸಾಮಾಜಿಕ ಪದ್ಧತಿಯ ಕುರಿತು ಏನನ್ನೂ ಅರಿಯದೆಯೂ ಮನಗಾಣದೆಯೂ ಅವರು ಅದೆಲ್ಲಾ ಮಾಡುತ್ತಿದ್ದಾರೆಂದು ಭಾವಿಸದೆ ನಿರ್ವಾಹವಿಲ್ಲ.

ಬ್ರಹ್ಮಚರ್ಯೆ ಯಥಾರ್ಥದಲ್ಲಿ ಅವರು ಇಚ್ಛಿಸಿದ ಲಕ್ಷ್ಯಕ್ಕಿರುವ ಮಾರ್ಗದಿಂದ ಅವರನ್ನು ಅಗಲಿಸಿದೆ. ಸನ್ಯಾಸವನ್ನು ಕಂಡುಹಿಡಿಯಲು ಅವರನ್ನು ಪ್ರೇರೇಪಿಸಿದ್ದು ದೇವರ ಪ್ರೀತಿಯನ್ನು ಸಂಪಾದಿಸಬೇಕೆಂಬ ಮೋಹವಾಗಿದೆ. ಯೇಸುಕ್ರಿಸ್ತರದೆಂದು ಹೇಳಲ್ಪಡುವ ಅಧ್ಯಾಪನಗಳನ್ನನುಸರಿಸಿ ಜೀವಿಸಬೇಕೆಂಬ ವಾಂಛೆಯೂ ಆಗಿದೆ.

ಬ್ರಹ್ಮಚರ್ಯೆ ಮತ್ತು ಮೇಲೆ ಹೇಳಿದ ಸ್ತ್ರೀ ವಿರೋಧವನ್ನು ಸರ್ವಶಕ್ತನಾದ ದೇವರು ಮನುಷ್ಯರ ಮೇಲೆ ಕಡ್ಡಾಯಗೊಳಿಸಿರುತ್ತಿದ್ದರೆ ಇಷ್ಟರೊಳಗೆಯೇ ಮನುಷ್ಯ ರಾಶಿ ಭೂಮುಖದಿಂದ ನಿರ್ಮೂಲವಾಗುತ್ತಿತ್ತು. ಬೇರೆ ಮಾತಿನಲ್ಲಿ ಹೇಳುವುದಾದರೆ, ಈ ನಿಷೇಧಗಳು ಮನುಷ್ಯನಿಗೆ ಸಂತಾನೋತ್ಪಾದನೆಗೆ ಈ ಶಕ್ತಿಗಳನ್ನು ನೀಡಿದ ದೇವರಲ್ಲಿ ತಪ್ಪು ಕಾಣಲಿಕ್ಕೆ ದಾರಿಯಾಗುತ್ತಿತ್ತು. ಮೇಲೆ ಪ್ರಸ್ತಾವಿಸಲಾದ ಸ್ತ್ರೀ ಸಂಬಂಧ ಹಾಗೂ ಲೈಂಗಿಕವಾದ ಸಾಂಪ್ರದಾಯಿಕ ಸದಾಚಾರ ಸಿದ್ಧಾಂತಗಳನ್ನು ಪೂರ್ಣವಾಗಿ ತಳ್ಳಿಹಾಕಿ ಅದರ ಪಕ್ಕಾರರುಗಳಿಗೆ ಸರ್ವಶಕ್ತನಾದ ದೇವರು ಪವಿತ್ರ ಖುರ್‌ಆನ್ ಮೂಲಕ ತಾಕೀತು ನೀಡಿದ್ದು ಈ ಪ್ರಕಾರವಾಗಿದೆ:

"ಲೈಂಗಿಕ ಸಂಬಂಧಗಳಿಗೆ ನಿಷೇಧ ಹೇರಲಿಕ್ಕೂ ಬ್ರಹ್ಮಚರ್ಯೆ ಅಥವಾ ಸನ್ಯಾಸವನ್ನು ಸ್ವೀಕರಿಸಲಿಕ್ಕೂ ಅವರು ಕಂಡುಹಿಡಿದ ಮಾರ್ಗಗಳು ಸ್ವಯಂಕೃತಗಳಾಗಿವೆ. ನಾವು ಅದನ್ನು ಅವರಿಗೆ ಕರ್ತವ್ಯವಾಗಿ ವಿಧಿಸಿರಲಿಲ್ಲ. ಆದುದರಿಂದ ಈ ನೂತನ ಸಂಪ್ರದಾಯವನ್ನು ಅನುಷ್ಠಿಸಲಿಕ್ಕೆ ಅವರಿಗೆ ಸಾಧ್ಯವಿಲ್ಲ." (57 : 28)

ಈ ಖುರ್‌ಆನ್ ವಚನವನ್ನು ವಿವರಿಸುತ್ತಾ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ತನ್ನ "ಇಸ್ಲಾಂ ಧರ್ಮ ತತ್ವಜ್ಞಾನ ಎಂಬ ಖ್ಯಾತ ಗ್ರಂಥದಲ್ಲಿ ಹೀಗೆ ಬರೆದಿರುತ್ತಾರೆ:

"ಜನರು ಷಂಡತ್ವ ಅಥವಾ ಸನ್ಯಾಸವನ್ನು ಸ್ವೀಕರಿಸಲಿಕ್ಕೆ ದೇವರು ವಿಧಿಸಿರಲಿಲ್ಲವೆಂದು ಪವಿತ್ರ ಖುರ್‌ಆನ್ ಹೇಳುತ್ತಾ, ಹಾಗೆ ಅದು ವಿಧಿಸಿದ್ದರೆ ಸಕಲ ಮನುಷ್ಯರು ಅದನ್ನನುಸರಿಸುವರೆ ಬದ್ಧರಾಗುವರೆಂದೂ ಅದರ ಫಲವಾಗಿ ಮನುಷ್ಯ ವರ್ಗದ ಸಂತಾನೋತ್ಪತ್ತಿ ಕ್ರಿಯೆ ನಿಂತುಹೋಗಿ ಬಹಳ ಮೊದಲೇ ಮನುಷ್ಯ ವಂಶ ಅಂತ್ಯಗೊಳ್ಳುತ್ತಿತ್ತೆಂದೂ ಸೂಚಿಸುತ್ತದೆ. ಮಾತ್ರವಲ್ಲ, ಚಾರಿತ್ರ್ಯವನ್ನು ಕಾಪಾಡಲು ಪುಂಸತ್ವವನ್ನು ನಾಶಪಡಿಸುವಂತಹ ಮಾರ್ಗವನ್ನು ಕೈಗೊಳ್ಳುವುದಾದರೆ ಅದು ಆ ಶಕ್ತಿಯನ್ನು ನೀಡಿದ ಸೃಷ್ಟಿಕರ್ತನಿಗೆ ವಿರುದ್ಧವಾದ ವರ್ತನೆಯಾಗುತ್ತದೆ. ಶಕ್ತಿಯಿದ್ದು ಸಹ ಓರ್ವನು ದೇವರಲ್ಲಿರುವ ಭಯಭಕ್ತಿಯ ನಿಮಿತ್ತ ದುಷ್ಟ ಪ್ರೇರಣೆಗಳನ್ನೂ ದುರ್ವಿಕಾರಗಳನ್ನೂ ದಮನಗೊಳಿಸುವುದರಲ್ಲಿ ಜಯಶೀಲನಾಗುವನಾದರೆ ಅದರಲ್ಲಿ ಪುಣ್ಯವಿದೆ. ಹಾಗೆ ಅವನು ತನ್ನ ಶಕ್ತಿಯನ್ನು ಯಥಾತಥವಾಗಿ ವಿನಿಯೋಗಿಸಿಯೂ ವಿನಿಯೋಗಿಸದೆಯೂ ಇರುವುದರಿಂದ ಎರಡು ವಿಧ ಪುಣ್ಯಕ್ಕೆ ಪಾತ್ರನಾಗುವನು. ತನ್ನ ಪುಂಸತ್ವವನ್ನು ನಾಶಪಡಿಸಿದವನಿಗೆ ಈ ಎರಡು ವಿಧ ಪ್ರತಿಫಲ ನಷ್ಟವಾಗುತ್ತದೆ. ಶಕ್ತಿಯ ಸಾನ್ನಿಧ್ಯದಿಂದ ಉಂಟಾಗುವ ದುಷ್ಟ ಪ್ರೇರಣೆಗಳನ್ನು ಎದುರಿಸಿ ಜಯಗಳಿಸುವುದರಿಂದ ಪುಣ್ಯ ಲಭಿಸುತ್ತದೆ. ಆದರೆ ಪ್ರಾಯ ತುಂಬಿರದ ಬಾಲಕನಂತೆ ಯಾರಲ್ಲಿ ಈ ಶಕ್ತಿ ಇರುವುದಿಲ್ಲವೋ, ಅವನಿಗೆ ಹೇಗೆ ಪುಣ್ಯ ದೊರೆಯುವುದು? ಅವನಿಗೆ ದುರ್ವಿಕಾರಗಳನ್ನು ಜಯಿಸುವ ಅಥವಾ ತನ್ನ ಶಕ್ತಿಯನ್ನು ಯಥಾವಕಾಶ ಉಪಯೋಗಿಸುವ ಸಂದರ್ಭ ಲಭಿಸುವುದಿಲ್ಲವಾದುದರಿಂದ ಅದಕ್ಕೆ ಸಂಬಂಧಿಸಿದ ಪುಣ್ಯಫಲ ಸಹ ಲಭಿಸಲಾರದು".

ವಿವಾಹದ ಯಥಾರ್ಥ ಉದ್ದೇಶದ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ದೇವರು ಹೇಳಿದ್ದು ಈ ರೀತಿಯಾಗಿದೆ:

"ನೀವು ಜತೆಗೂಡಿ ಜೀವಿಸಿ ಮನಸ್ಸಮಾಧಾನ ಪಡೆಯಲಿಕ್ಕಾಗಿ ನಿಮ್ಮ ವರ್ಗದಿಂದಲೇ ನಿಮಗೆ ಅವನು ಜೋಡಿಗಳನ್ನು ಸೃಷ್ಟಿಸಿಕೊಟ್ಟಿದ್ದಾನೆ. ಅವನು ಅದಕ್ಕಾಗಿ ನಿಮ್ಮೆಡೆಯಲ್ಲಿ ಸ್ನೇಹವನ್ನೂ ಕಾರುಣ್ಯವನ್ನೂ ಸುರಿಸಿದ್ದಾನೆ; ಇದು ಅವನ ನಿದರ್ಶನಗಳಲ್ಲಿ ಒಂದಾಗಿದೆ. ಚಿಂತನೆ ಮಾಡುವವರಿಗೆ ಇದರಲ್ಲಿ ಹಲವು ದೃಷ್ಟಾಂತಗಳಿವೆ." (30 : 22)

"ಅವನು ಒಂಟಿ ವಸ್ತುವಿನಿಂದ ನಿಮ್ಮನ್ನು ಸೃಷ್ಟಿಸಿ ಅದರಿಂದಲೇ ನಿಮ್ಮ ಮನಶ್ಶಾಂತಿಗೋಸ್ಕರ ಅದರ ಜೋಡಿಯನ್ನೂ ಸೃಷ್ಟಿಸಿರುವನು". (7 : 190)

"ಅವರು ನಿಮಗೂ ನೀವು ಅವರಿಗೂ ಉಡುಪು" (2 : 188)

"ನಿಮ್ಮ ಧನವನ್ನು ನೀಡಿ (ಮಹರ್) ಅವರನ್ನು ಪಡೆಯಿರಿ. ದಾಂಪತ್ಯ ಸಂಬಂಧಕ್ಕೆ ಹೊರತಾದ ಲೈಂಗಿಕ ಸಂಬಂಧ ಇರಬಾರದು" (4 : 25)

ಮನಶ್ಶಾಂತಿ, ಸುಖ, ಸಂತೃಪ್ತಿಗಳನ್ನು ಪಡೆಯಲಿಕ್ಕೂ ಒಳಿತುಂಟಾಗಲಿಕ್ಕೂ ಪರಸ್ಪರ ಸ್ನೇಹ–ವಾತ್ಸಲ್ಯ ನೆಲೆನಿಲ್ಲಲಿಕ್ಕೂ ವಿವಾಹ ಮೂಲಕ ಉದ್ದೇಶಿಸಲಾಗಿದೆಂದು ಮೇಲೆ ಉದ್ಧರಿಸಿದ ಖುರ್‌ಆನ್ ವಚನಗಳು ನಮಗೆ ಕಲಿಸಿ ಕೊಡುತ್ತವೆ. ಮನುಷ್ಯನು ಸಹಜವಾಗಿಯೇ ಸಾಮೂಹಿಕ ಜೀವಿ. ತನಗೆ ಅತ್ಯಂತ ಹತ್ತಿರದ ಸಂಗಾತಿ ಇರಬೇಕೆಂಬ ಅವನ ಅಭಿಲಾಷೆಯು ಸಾಕ್ಷಾತ್ಕರಿಸಲ್ಪಡುವುದು ವಿವಾಹ ಮೂಲಕವಾಗಿದೆ. ವಿವಾಹ ಬಂಧದಲ್ಲಿ ಏರ್ಪಡದ ಮನುಷ್ಯನು ಸರಿಯಾಗಿ ಹೊಂದಾಣಿಕೆಯಾಗುವ ಸಂಗಾತಿಯನ್ನು ಹುಡುಕಿ ಆಯುಷ್ಕಾಲವನ್ನಿಡೀ ವ್ಯರ್ಥಗೊಳಿಸುತ್ತಾನೆ. ವಿವಾಹಿತರಾಗುವ ಮೂಲಕ ಪರಸ್ಪರ ವಿಶ್ವಾಸದ ಸುರಕ್ಷಿತತೆಗೆ ಅವನು ಪ್ರವೇಶಿಸುತ್ತಾನೆ. ದುರ್ಮಾರ್ಗದಿಂದಲೂ ಅನೈತಿಕ ಲೈಂಗಿಕ ಸಂಬಂಧಗಳಿಂದಲೂ ಅಗಲಿ ನಿಲ್ಲಲಿಕ್ಕೆ ಅವರಿಗೆ ಆಗ ಸಾಧ್ಯವಾಗುತ್ತದೆ. ಆದ್ದರಿಂದಲೇ ಧನಾರ್ಜನೆ ಮಾರ್ಗವಿರುವ ಎಲ್ಲಾ ಯುವಕರು ವಿವಾಹವಾಗಲೇಬೇಕೆಂದು ಮುಹಮ್ಮದ್ ಪೈಗಂಬರರು ಆದೇಶಿಸಿದ್ದು. ಕಾರಣವೇನೆಂದರೆ ವ್ಯಕ್ತಿಯ ಪಾವಿತ್ರ್ಯ ಮತ್ತು ಸದಾಚಾರ ನಿಷ್ಠೆಯನ್ನು ಕಾಪಾಡಲು ಶಕ್ತವಾಗುವ ರೀತಿಯಲ್ಲಿ, ದುಷ್ಟ ಉದ್ದೇಶದಿಂದ ಮತ್ತೊಬ್ಬ

ಸ್ತ್ರೀಯನ್ನು ನೋಡುವುದರಿಂದ ಅವನನ್ನು ತಡೆಯಲಿಕ್ಕೆ ದಾಂಪತ್ಯವು ಉಪಯುಕ್ತವಾಗುತ್ತದೆ. ಮನುಷ್ಯ ಕುಲದ ನೆಲೆನಿಲ್ಲುವಿಕೆ ಸಾಧ್ಯವಾಗುತ್ತದೆ. ಎಂಬುದಾಗಿದೆ ದಾಂಪತ್ಯದಲ್ಲಿ ಖುರ್‌ಆನ್ ಸೂಚಿಸುವ ಇನ್ನೊಂದು ವಿಶೇಷತೆ. ಖುರ್‌ಆನ್ ಹೀಗೆ ಹೇಳುತ್ತದೆ:

"ಓ ಮನುಷ್ಯರೇ, ನಿಮ್ಮನ್ನು ಸೃಷ್ಟಿಸಿದ ಒಡೆಯನಿಗೆ ಭಯಪಡಿರಿ. ಏಕಜೀವದಿಂದ ನೀವು ಸೃಷ್ಟಿಸಲ್ಪಟ್ಟಿದ್ದೀರಿ. ಅದರಿಂದಲೇ ಅದರ ಜೋಡಿ ಸಹ ಸೃಷ್ಟಿತವಾಗಿದೆ. ಅದರಿಂದ ಅನೇಕಾನೇಕ ಗಂಡು ಮತ್ತು ಹೆಣ್ಣು ಉಂಟಾಗುತ್ತಿವೆ." (4 : 2)

"ನಿಮ್ಮ ಹೆಂಡಂದಿರು ನಿಮಗೆ ಒಂದು ವಿಧದ ಕೃಷಿಭೂಮಿ. ನೀವು ಉದ್ದೇಶಿಸುವ ರೀತಿಯಲ್ಲಿ ಅಲ್ಲಿಗೆ ಹೋಗಿರಿ. ನಿಮಗಾಗಿ ಮುಂಚಿತವಾಗಿ ಕೆಲವು ಒಳಿತುಗಳನ್ನು ಮಾಡಿ ಇಡಿರಿ." (2 : 224)

ಹೆಂಡಂದಿರನ್ನು ಕೃಷಿಸ್ಥಳಕ್ಕೆ ದೇವರು ಹೋಲಿಸಿದುದನ್ನು ಇಲ್ಲಿ ಕಾಣಬಹುದು. ವಿಶ್ವಾಸಿಗಳು ತಮ್ಮ ಹೆಂಡಂದಿರನ್ನು ಆರಿಸಿಕೊಳ್ಳಬೇಕೆಂದು ದೇವರು ಆದೇಶಿಸಿರುತ್ತಾನೆ. ಉತ್ತಮ ಹಾಗೂ ಆರೋಗ್ಯಕರವಾದ ಪೈತೃಕವನ್ನು ಗಳಿಸುವರೆ ದಾಂಪತ್ಯಬಂಧ ಅನಿವಾರ್ಯವೆಂದು ಅವನು ವಿಧಿಸಿರುತ್ತಾನೆ. ಸಮರ್ಥನಾದ ಕೃಷಿಕನು ಬೀಜ ಬಿತ್ತಲಿಕ್ಕೆ ಮಣ್ಣನ್ನು ಆಯ್ದುಕೊಂಡು ಹದಗೊಳಿಸುವ ಮೂಲಕ ಉತ್ತಮ ಬೆಳೆ ಉಂಟಾಗುವಂತೆಯೇ ತನ್ನ ಗುಣವನ್ನೂ ಇಡೀ ಸಮಾಜದ ಒಳಿತನ್ನೂ ಗುರಿಯಾಗಿರಿಸಿಕೊಂಡು ವಿವಾಹ ಸಂಬಂಧದಲ್ಲಿ ಏರ್ಪಡಬೇಕೆಂದು ಈ ಖುರ್‌ಆನ್ ವಚನ ಸೂಚಿಸುತ್ತದೆ. ಮಾನವ ಕುಲಕ್ಕೆ ಅನಿವಾರ್ಯವಾದ ಖುರ್‌ಆನಿನ ಈ ತತ್ವಗಳು ಪ್ರವಾದಿಗಳಿಗೂ ಮಹಾತ್ಮರುಗಳಿಗೂ ಇತರರಿಗೂ ಒಂದೇ ರೀತಿಯಲ್ಲಿ ಅನ್ವಯಿಸುತ್ತವೆ. ಎಲ್ಲಾ ಪ್ರವಾದಿಗಳೂ ವಿವಾಹಿತರೂ ಪಿತರೂ ಆಗಿದ್ದರೆಂದು ಖುರ್‌ಆನ್ ಹೇಳುತ್ತದೆ. ಮುಹಮ್ಮದ್ ಪೈಗಂಬರರನ್ನು ಸಂಬೋಧಿಸಿ ದೇವರು ಹೀಗೆ ಹೇಳುತ್ತಾನೆ: "ನಿನಗೆ ಮುಂಚೆ ನಾವು ಪ್ರವಾದಿಗಳನ್ನು ನಿಯೋಜಿಸಿದ್ದೇವೆ. ಅವರಿಗೆ ನಾವು ಹೆಂಡಂದಿರನ್ನೂ ಮಕ್ಕಳನ್ನೂ ನೀಡಿದ್ದೇವೆ." ಆದುದರಿಂದ ಪೈಗಂಬರರ ನಿಕಟಪೂರ್ವವಾಗಿ ಆಗಮಿಸಿದ ಯೇಸುಕ್ರಿಸ್ತರು ಸಹ ಇದರಿಂದ ಹೊರತಲ್ಲವೆಂದು ಈ ವಾಕ್ಯ ಸ್ಪಷ್ಟಪಡಿಸುತ್ತದೆ.

ಇತರ ಮತಗಳು ಮೋಕ್ಷಪ್ರಾಪ್ತಿಗೆ ಅತಿ ಪ್ರಧಾನವಾದ ಮಾರ್ಗವಾಗಿ ಬ್ರಹ್ಮಚರ್ಯೆಯನ್ನು ಪರಿಗಣಿಸುವಾಗ ಪೈಗಂಬರರು ಹೇಳುವುದು ಈ ಪ್ರಕಾರವಾಗಿದೆ:

"ಇಸ್ಲಾಮಿನಲ್ಲಿ ಸನ್ಯಾಸವಿಲ್ಲ. ಬ್ರಹ್ಮಚರ್ಯೆಯನ್ನು ಅನುಷ್ಠಿಸುವ ಯಾವೊಬ್ಬನನ್ನೂ ನನ್ನ ಅನುಯಾಯಿಯೆಂದು ಗಣಿಸಲಾಗದು. ದಾಂಪತ್ಯದ ಪ್ರಾಧಾನ್ಯವೇನೆಂದು ನನ್ನ ಜೀವನಮಾದರಿ ಮೂಲಕ ನಾನು ತೋರಿಸಿಕೊಟ್ಟಿದ್ದೇನೆ. ದಾಂಪತ್ಯವು ನನ್ನ ಜೀವನ ಕ್ರಮವಾಗಿದೆ. ಈ ಮಾದರಿಯನ್ನು ಅನುಸರಿಸದವನು ನನ್ನ ಪೈಕಿಯವನಲ್ಲ."

ಸ್ವಪ್ನಜೀವಿಗಳ ಧರ್ಮವಲ್ಲ ಇಸ್ಲಾಂ. ಸ್ವಂತ ಅಭಿಪ್ರಾಯದ ಆಧಾರದಲ್ಲಿ ಜೀವಿಸುವ ಭಾವನಾಜೀವಿಗಳು ವಾಸ್ತವಿಕತೆಗಳಿಂದ ಪೂರ್ಣವಾಗಿ ಅಗಲಿ ನಿಲ್ಲುತ್ತಾರೆ. ದಾಂಪತ್ಯವು ಫಲಪ್ರದವೂ ಪ್ರಾಯೋಗಿಕ ಜೀವಿತದಲ್ಲಿ ಮಾರ್ಗದರ್ಶಕವೂ ಸಹಾಯಕವೂ ಆಗಿದೆಯೆಂಬುದು ವಾಸ್ತವ. ಅದು ಭೌತಿಕವೂ ಆಧ್ಯಾತ್ಮಿಕವೂ ಆದ ಜೀವಿತದಲ್ಲಿ ಒಂದೇ ರೀತಿಯಲ್ಲಿ ಮಹತ್ವವುಳ್ಳದ್ದಾಗಿದೆ.

ದೈವಿಕ ಬೋಧನೆಗಳೂ ಪ್ರಕಟನೆಗಳೂ ಎಷ್ಟೋ ಇದ್ದು ಸಹ ಆಂಗ್ಲಿಕನ್ ಚರ್ಚ್ ಮತ್ತು ಕೆಲವು ಚಿಕ್ಕ ಅಲ್ಪ ಸಂಖ್ಯಾತ ಪಂಗಡಗಳು ಹೊರತು ಬಹುಸಂಖ್ಯಾತ ರೋಮನ್ ಕೆಥೋಲಿಕ್ ಪಂಗಡಗಳು ಬ್ರಹ್ಮಚರ್ಯೆಯ ಅನುಷ್ಠಾನವನ್ನು ಅಂಗೀಕರಿಸಿ ಅದರ ಮೂಲಕ ಮಹಾಪಾಪಕ್ಕೆ ಗುರಿಯಾದ ಅನೇಕ ದೃಷ್ಟಾಂತಗಳಿವೆ.

ಆತ್ಮ ಸಾಕ್ಷಾತ್ಕಾರವನ್ನು ಗಳಿಸುವ ಗುರಿಯನ್ನಿರಿಸಿ ಬ್ರಹ್ಮಚರ್ಯೆ ಅನುಪೇಕ್ಷಿತವೆಂಬ ನಂಬಿಕೆ ಸಂಪೂರ್ಣ ಹುಸಿ ಹಾಗೂ ಆತ್ಮವಂಚನೆಯೆಂದು ರುಜುಗೊಂಡಿದೆ. ಕಾರಣವೇನೆಂದರೆ, ಬ್ರಹ್ಮಚರ್ಯೆಯು ಜೀವಶಾಸ್ತ್ರಪರವಾದ ಒಂದು ಪ್ರಾಥಮಿಕ ಅವಶ್ಯವನ್ನೂ ಮೂಲಭೂತವಾದ ಮಾನವ ಚೇತನವನ್ನೂ ನಿಷೇಧಿಸುತ್ತದೆ. ವಾಸ್ತವದಲ್ಲಿ ಬ್ರಹ್ಮಚರ್ಯೆಯು ವಿರುದ್ಧ ಪರಿಣಾಮ

ವನ್ನುಂಟುಮಾಡುವುದು ಮಾತ್ರವಲ್ಲ ಲೈಂಗಿಕ ವ್ಯತಿಕ್ರಮಗಳಿಗೂ ಮಾನಸಿಕವಾದ ಕೀಳು ವರ್ತನೆಗಳಿಗೂ ದಾರಿಮಾಡಿಕೊಡುತ್ತದೆ.

ಮಧ್ಯಯುಗದ ಅನೈತಿಕತೆಯು ಬಗ್ಗೆ ಬರ್ಟ್ರೆಂಡ್ ರಸೆಲ್ ತನ್ನ Marriage and Morals ಎಂಬ ಗ್ರಂಥದಲ್ಲಿ ಹೀಗೆ ಬರೆಯುತ್ತಾರೆ: "ಮಧ್ಯಯುಗದ ಅನೈತಿಕತೆಯು ವ್ಯಾಪಕವೂ ನಿರಾಶಾಜನಕವೂ ಆಗಿದೆ. ಮೈತ್ರರು ಜೀವಿಸುತ್ತಿರುವುದು ಸ್ವಂತ ಪುತ್ರಿಯರೊಂದಿಗೆ ಪಾಪಕೃತ್ಯಗಳಲ್ಲಿ ತೊಡಗಿಕೊಂಡಾಗಿದೆ. ಪುರುಷರಾದ ತಮ್ಮ ಇಷ್ಟಮಿತ್ರರನ್ನು ಹತ್ತಿರದವರೊಂದಿಗೆ ಅನೈತಿಕ ಸಂಬಂಧವನ್ನಿರಿಸಲಿಕ್ಕೆ ಆರ್ಚ್‌ಬಿಷಪ್‌ಗಳು ಪ್ರೇರೇಪಿಸಂತ್ತಾರೆ." ಮುಂದುವರಿದು, History of European Moral ಎಂಬ ಗ್ರಂಥದಿಂದ ಅವರು ತೆಗೆದು ಉದ್ಧರಿಸಿದ್ದು ಈ ಪ್ರಕಾರವಾಗಿದೆ:

"ಪುರೋಹಿತರು ಪ್ರತಿಜ್ಞೆಗಳನ್ನು ಮಾಡಿಕೊಂಡು ಸಾಮಾನ್ಯ ಪೌರರಿಗಿಂತ ಕೀಳ್ಮಟ್ಟಕ್ಕೆ ತಲಪಿ ಪಾಪವನ್ನು ಜೀವಿತ ಚರ್ಯೆಯಾಗಿ ಬದಲಾಯಿಸುತ್ತಾರೆಂಬುದರಲ್ಲಿ ಆಶ್ಚರ್ಯಪಡಲಿಕ್ಕಿಲ್ಲ. ಇತರ ಅನೇಕ ಪಾಪಕೃತ್ಯಗಳಲ್ಲದೆ ಅನೈತಿಕ ದಾಂಪತ್ಯಬಂಧಕ್ಕೂ ವ್ಯಭಿಚಾರಕ್ಕೂ ಶಿಕ್ಷಿಸಲ್ಪಟ್ಟ 23ನೇ ಪೋಪ್‌ಜಾನ್ ಅವರ ಕುಕೃತ್ಯಗಳ ಬಗ್ಗೆಯೂ ಪುರೋಹಿತರೆಡೆಯಲ್ಲಿರುವ ಬೇರೆ ಪಾಪಕೃತ್ಯಗಳ ಬಗ್ಗೆಯೂ ಇಲ್ಲಿ ಬಹಳ ಹೆಚ್ಚಾಗಿ ವಿವರಿಸುವ ಅವಶ್ಯವಿಲ್ಲ. 1171ರಲ್ಲಿ ಕ್ಯಾನ್ಟರದಲ್ಲಿ ಸನ್ಯಾಸಿಶ್ರೇಷ್ಠನಾಗಿ ಆರಿಸಲ್ಪಟ್ಟ St. Auqustireನಿಗೆ ಒಂದೇ ಗ್ರಾಮದಲ್ಲಿ ಮಾತ್ರ 13 ಜಾರಸಂತಾನಗಳು ಇದ್ದುವೆಂದು ತನಿಖೆಯಿಂದ ರುಜುವಾತಾಗಿದೆ. ಸ್ಪೈಯಿನಿನ ಪುರೋಹಿತಶ್ರೇಷ್ಠನಾದ ಸೈಂಟ್ ಪೆಲೆಯೋನಿಗೆ 70ಕ್ಕಿಂತಲೂ ಹೆಚ್ಚು ಉಪಪತ್ನಿಯರಿದ್ದರೆಂದು 1130ರಲ್ಲಿ ಸಾಬೀತಾಗಿದೆ. 1274ರಲ್ಲಿ ಲೀಜಿಯಲ್ಲಿ ಮೈತ್ರನಾಗಿದ್ದ 3ನೇ ಹೆನ್ರಿಯನ್ನು ಆತನಿಗೆ 65 ಜಾರ ಸಂತಾನಗಳಿವೆ ಎಂಬ ಕಾರಣಕ್ಕೆ ಸ್ಥಾನದಿಂದ ವಜಾಗೊಳಿಸಲಾಗಿತ್ತು. ಪಾಪಕೃತ್ಯದ ದೀರ್ಘವಾದ ಪಟ್ಟಿಯಲ್ಲಿ ಸೇರಿದ ಕ್ರೈಸ್ತ ಪುರೋಹಿತರುಗಳ ಹೆಸರುಗಳನ್ನು ಶೇಖರಿಸುವುದು ಶೀಘ್ರ ಸಾಧ್ಯವಲ್ಲವೆಂದು ಹೇಳಬೇಕಾಗಿದೆ. ಪುರೋಹಿತರು ವಾಸ್ತವದಲ್ಲಿ ಹೆಂಡಂದಿರನ್ನು ಅರಿಸಿದಾಗ ಅಂತಹ ಕೃತ್ಯಗಳು ಅನಧಿಕೃತವೂ ಅವರ ಕರ್ತವ್ಯಗಳಿಗೆ ವಿಶೇಷವಾಗಿ ಮಾರಕವೂ ಆಗಿತ್ತು. ದ್ವಿಪತ್ನಿತ್ವ ಮತ್ತು ಶಿಸ್ತುಭಂಗ ಅವರಲ್ಲಿ ಸಾಮಾನ್ಯವಾಗಿತ್ತು. ಕನ್ಯಾಮಠಗಳು ಸಂಪೂರ್ಣ ವೇಶ್ಯಾಲಯಗಳಾಗಿ ಮಾರ್ಪಟ್ಟ ಕಾರಣದಿಂದಲೂ ಪುರೋಹಿತರು ಕೇವಲ ಮೃಗತುಲ್ಯರಾಗಿ ಒದಲಾದ ಕಾರಣದಿಂದಲೂ ಸಹೋದರಿಯರೊಂದಿಗೆ ಮತ್ತು ತಾಯಂದಿರೊಂದಿಗೆ ಪುರೋಹಿತರು ವಾಸಿಸುವುದನ್ನು ಕಠಿಣ ನಿಯಮ ಮೂಲಕ ತಡೆಯಬೇಕಾಗಿ ಬಂದಿತ್ತು. ಕನ್ಯಾಮಠಗಳ ಗೋಡೆಗಳೊಳಗೆ ಶಿಶುಹತ್ಯೆಗಳೂ ಭ್ರೂಣಹತ್ಯೆಗಳೂ ಸರ್ವಸಾಮಾನ್ಯವಾಗಿದ್ದುವು. ಇಂತಹ ವಾಸ್ತವಾಂಶಗಳನ್ನು ಮಧ್ಯಕಾಲದ ಬರಹಗಾರರಲ್ಲಿ ಹಲವರು ಉಲ್ಲೇಖಿಸಿದ್ದಾರೆ. ಕ್ರೈಸ್ತ ಸಭೆಯ ಮಹತ್ವಾದ ಕೊಡುಗೆಗಳಲ್ಲಿ ಒಂದಾದ ಸಾರ್ವಲೌಕಿಕ ಸ್ನೇಹ ಅವರದೇ ಸನ್ಯಾಸಿ ಮಠಗಳಲ್ಲಿ ನೆಲೆಯೂರಿತ್ತು. Reformation (16ನೇ ಶತಮಾನದಲ್ಲಿ ಕೆಥೋಲಿಕ್ ಸಭೆಗೆ ವಿರುದ್ಧವಾದ ಧರ್ಮ ಸುಧಾರಣಾ ಸಂಘಟನೆ)ಗೆ ನಿಕಟಪೂರ್ವದಲ್ಲಿ ಪುರೋಹಿತರುಗಳ ಈ ಅನೈತಿಕ ಸಂಬಂಧಗಳ ಕುರಿತು ಶಕ್ತಿಯುತವಾದ ಆರೋಪಣೆಗಳಿದ್ದುವು."

ಆದರೆ ಈ ಚಿತ್ರಕ್ಕೆ ಇನ್ನೊಂದು ಮುಖ ಸಹ ಇದೆ. ವ್ಯಕ್ತಿ ಮತ್ತು ಸಮಾಜದ ಪಾವಿತ್ರ್ಯ ಮತ್ತು ಸದಾಚಾರ ನಿಷ್ಠೆಯನ್ನು ಪರೀಕ್ಷಿಸಲಿಕ್ಕೂ ಅವರ ಜೀವಶಾಸ್ತ್ರಪರವಾದ ಪ್ರಾಥಮಿಕ ಅವಶ್ಯವನ್ನು ಮತ್ತು ಮಾನವಸಹಜ ಬೇಡಿಕೆಯನ್ನು ಪೂರೈಸುವ ಉದ್ದೇಶದಿಂದಲೂ ದೇವರೇ ನಿಶ್ಚಯಿಸಿದ ದಾಂಪತ್ಯ ಸಂಬಂಧವನ್ನು ಧಿಕ್ಕರಿಸಿದ ಕಾರಣ ಕ್ರೈಸ್ತ ಸಂಸ್ಕಾರದ ಪೆಂಡುಲಂ ಯಾಥಾಸ್ಥಿಕವಾದ ಅವರ ಸದಾಚಾರ ಪ್ರಜ್ಞೆಯಿಂದ ಅನಿವಾರ್ಯವಾಗಿಯೂ ಸ್ವತಂತ್ರ ಲೈಂಗಿಕತೆ ಹಾಗೂ ನಗ್ನತಾ ಪ್ರದರ್ಶನದೆಡೆಗೆ ಅಲುಗಾಡಿ ತಲಪಲು ಕಾರಣವಾಯಿತು. ಅಭಿನವ ಸದಾಚಾರನಿಷ್ಠೆಯ ಲಕ್ಷಣವಾಗಿ ಸಹ ಇದನ್ನು ವ್ಯಾಖ್ಯಾನಿಸಲಾಗಿದೆ. ನಿರ್ಭಾಗ್ಯವಶಾತ್ ಪಾಶ್ಚಾತ್ಯ ಕ್ರೈಸ್ತರಿಗೆ ಸಂಬಂಧಿಸಿದಂತೆ ಪಾತಿವ್ರತ್ಯವು ಪ್ರಶಂಸನೀಯವಾದ ಒಂದು ಗುಣವೆಂದು ಪರಿಗಣಿಸಲ್ಪಡದ ಪಟ್ಟಿಗಾಗಿದೆ. ಅದು ಅವರಿಗೆ ಒಂದು ಕಟ್ಟುಕಥೆ ಮಾತ್ರವಾಗಿದೆ. ದಾಂಪತ್ಯ ಜೀವನ ಮತ್ತು

ಪರಸ್ಪರ ವಿಶ್ವಾಸವನ್ನು ಹೊಂದುವುದು ಸಹ ನಿರರ್ಥಕ ವೆಂದು ಅವರು ಭಾವಿಸುತ್ತಾರೆ. ವಿವಾಹ ಜೀವನದ ಒಳಗೂ ಹೊರಗೂ ವೈಕೃತಿ ಮತ್ತು ವಿಷಯಲಂಪಟತೆ ಯನ್ನು ಗುಲಯಾಗಿರಿಸಿಕೊಂಡಿರುತ್ತಾರೆ. ಇವು ಲೈಂಗಿ ಕತೆಯ ನಿಜವಾದ ಉದ್ದೇಶವನ್ನೇ ಹಾನಿಗೊಳಿಸುತ್ತವೆ. ಪುರುಷನ ಲೈಂಗಿಕ ಸಂತೃಪ್ತಿಗೆ ಬೇಕಾಗಿರುವ ಒಂದು ಉಪಕರಣವೆಂಬಂತೆ ಸ್ತ್ರೀಯು ಕೀಳಾಗಿ ಕಾಣಲ್ಪಟ್ಟಳು. ಅನೈತಿಕ ಲೈಂಗಿಕ ಸಂಬಂಧಕ್ಕಿರುವ ಸ್ವಾತಂತ್ರ್ಯ ಅತ್ಯಂತ ವಿನಾಶಕಾರಿಯಾಗಿದೆ. ಸ್ತ್ರೀ ಶರೀರವು ಈ ರೀತಿಯಲ್ಲಿ ವಾಣಿಜ್ಯಪರವಾಗಿ ಉಪಯೋಗಿಸಲ್ಪಡುವುದರ ವಿರುದ್ಧ ವಾಗಿ ಗಣನೀಯ ಶ್ರಮವೇನೂ ಮಾಡಲಾಗಿಲ್ಲ. ಇದರೆಲ್ಲಾ ಫಲವಾಗಿ ವಿವಾಹ ವಿಚ್ಛೇದನದ ಸಂಖ್ಯೆ ಬಹಳವಾಗಿ ವರ್ಧಿಸಿತು. ಮಾತ್ರವಲ್ಲ, ಗರ್ಭಪಾತ, ಅವಿವಾಹಿತ ತಾಯಂದಿರು, ಕನ್ಯಾಗರ್ಭ, ಜಾರಸಂತತಿ ಗಳು, ಲೈಂಗಿಕ ಪಾಪಕೃತ್ಯಗಳು ಇತ್ಯಾದಿ ವ್ಯಾಪಕವಾಗಿ ಹರಡಿದುವು.

ಇಸ್ಲಾಂ ಧರ್ಮವು ಇದಕ್ಕೆ ಸಂಬಂಧಿಸಿ ವ್ಯಕ್ತವೂ ಪ್ರಕಾಶಭರಿತವೂ ಆದ ಬೋಧನೆಯನ್ನು ನೀಡಿದೆ. ಲೈಂಗಿಕ ಪಾವಿತ್ರ್ಯ ಹಾಗೂ ಪಾತಿವ್ರತ್ಯದ ಕುರಿತು ಇಸ್ಲಾಮಿನ ವೀಕ್ಷಣವು ಕಾಠಿಣ್ಯವಿಲ್ಲದ ಮಧ್ಯ ಮಾರ್ಗ ವಾಗಿದೆ. ಸರ್ವಶಕ್ತನಾದ ದೇವನು ಹೇಳುತ್ತಾನೆ: "ಸ್ಪಷ್ಟವಾದ ಪ್ರಮಾಣಗಳ ಸಹಿತ ನಾವು ನಮ್ಮ ಪ್ರವಾದಿಗಳನ್ನು ನಿಮ್ಮೆಡೆಗೆ ಕಳುಹಿಸಿದ್ದೇವೆ. ಪವಿತ್ರ ಗ್ರಂಥ ಮತ್ತು ತ್ರಾಸಿನೊಂದಿಗೆ – ಎರಡೂ ಕೊನೆಗಳನ್ನು ಬಿಟ್ಟು ಸುರಕ್ಷಿತವೂ ವಿವೇಕಯುತವೂ ಆದ ಮಧ್ಯ ಮಾರ್ಗ ಸಹಿತ – ಅದರ ಮೂಲಕ ಜನರು ನೀತಿಯಿಂದ ವರ್ತಿಸಲೆಂದು." (57 : 26)

ಲೋಕದಲ್ಲಿರುವ ಧರ್ಮಗಳಲ್ಲಿ ಇಸ್ಲಾಂ ಮಾತ್ರ ದಾಂಪತ್ಯವು ಪವಿತ್ರವೂ ನೈತಿಕವೂ ಧಾರ್ಮಿಕವೂ ಆದ ಒಂದು ಹೊಣೆಗಾರಿಕೆಯೆಂದು ಅನುಯಾಯಿಗಳಿಗೆ ಬೋಧಿಸುತ್ತದೆ. ಇತರ ಧರ್ಮಗಳಲ್ಲಿ ಅದೊಂದು ಅನುಮತಿ ಮಾತ್ರವಾಗಿದೆ. ಅಷ್ಟೇ ಅಲ್ಲ, ಇಸ್ಲಾಂ ಧರ್ಮಾನುಯಾಯಿಗಳ ಸಾನ್ಮಾರ್ಗಿಕ ಜೀವಿತದ ಬಗ್ಗೆ ಅದಕ್ಕಿರುವ ಉತ್ಕಂಠೆ ನಿಮಿತ್ತವೂ ಅವರ ಆರೋಗ್ಯ ಪರವಾದ ಬೆಳವಣಿಗೆಗೋಸ್ಕರವೂ ಸಮಾನ ನೀತಿ ಪಾಲಿಸಬೇಕೆಂಬ ಕಟ್ಟುನಿಟ್ಟಿನ ನಿಬಂಧನೆಯ ಮೇರೆಗೆ ಬಹುಪತ್ನಿತ್ವವನ್ನು ಅನುಮತಿಸಿದೆ. ಕಠಿಣವಾದ ಜೀವಿತ ಯಾಥಾರ್ಥ್ಯಗಳೆದುರಿಗೆ ಮನುಷ್ಯನು ಕಣ್ಣು ಮುಚ್ಚುವುದನ್ನು ಇಸ್ಲಾಂ ದ್ವೇಷಿಸುತ್ತದೆ. ಅದರಿಂದ ಅವನೇ ಸ್ವಯಂ ಮೂರ್ಖನಾಗುವನೆಂದು ಅವನು ಬೊಟ್ಟು ಮಾಡುತ್ತಾನೆ. ಜೀವಿತ ಕಾಲವಿಡೀ ಅವಿವಾ ಹಿತನಾಗಿ ಬದುಕುವ ಪುರುಷ ಹಾಗೂ ಕನ್ಯೆಯಾಗಿಯೇ ಕಾಲಕಳೆಯುವ ಸ್ತ್ರೀ ಇಸ್ಲಾಮಿನ ದೃಷ್ಟಿಯಲ್ಲಿ ಸಮಾಜಕ್ಕೆ ಪ್ರಯೋಜನವಿಲ್ಲದವರಾಗಿದ್ದಾರೆ. ನಿಷ್ಕ್ರಿಯತೆಯಲ್ಲ ಸೃಷ್ಟಿಕಾರಕತೆಯು ಇಸ್ಲಾಮಿಗೆ ಪ್ರಾಧಾನ್ಯ.

ವಿವಾಹ ಮತ್ತು ದಾಂಪತ್ಯ ಜೀವನದ ಬಗ್ಗೆ ಪ್ರಖ್ಯಾತರಾದ ವಿದ್ವಾಂಸರು ಮತ್ತು ಮಹಾತ್ಮರುಗಳ ವ್ಯಾಖ್ಯೆಗಳೇನೆಂದು ನೋಡೋಣ:

ಖಲೀಲ್ ಜಿಬ್ರಾನ್ ತನ್ನ Voice of the Master ಎಂಬ ಗ್ರಂಥದಲ್ಲಿ ವಿವಾಹದ ಬಗ್ಗೆ ಹೀಗೆ ಬರೆಯುತ್ತಾರೆ:

"ಭೂಮಿಯಲ್ಲಿ ಮೂರನೆಯದಾದ ಒಂದು ಪರಿ ಶುದ್ಧಾತ್ಮದ ಜನನಕ್ಕೋಸ್ಕರವಿರುವ ಎರಡು ಆತ್ಮಗಳ ಸಂಮಿಲನವಾಗಿದೆ ವಿವಾಹ. ಬೇರ್ಪಡಿಸಲಾಗದ ಶಕ್ತ ವಾದ ಪ್ರೀತಿ ವಾತ್ಸಲ್ಯಗಳಿಂದ ಕೂಡಿದ ಎರಡು ಜೀವಿತ ಗಳ ಸಂಯೋಜನೆಯಾಗಿದೆ ಅದು. ಪರಮೋನ್ನತವಾದ ಈ ಐಕ್ಯವು ಅವರ ಭಿನ್ನವಾದ ಅಸ್ತಿತ್ವವನ್ನು ನಾಸ್ತಿ ಮಾಡುತ್ತದೆ. ಪ್ರಾರಂಭದಲ್ಲಿ ಮಿನುಗುತ್ತಿರುವ, ಕೊನೆ ಯಲ್ಲಿ ಅನಶ್ವರತೆ ಗಳಿಸುವ ಸಂಕೋಲೆಯ ಸ್ವರ್ಣ ಕೊಂಡಿಯಾಗಿದೆ ಅದು. ಆತ್ಮಲೋಕದ ಕೃಷಿಭೂಮಿ ಯನ್ನು ಫಲಭೂಯಿಷ್ಠವನ್ನಾಗಿ ಮಾಡಲಿಕ್ಕೂ ಅನು ಗ್ರಹದಾಯಕ ಮಾಡಲಿಕ್ಕೂ ಆಕಾಶದಿಂದ ಲಭಿಸುವ ಜಲವಾಗಿದೆ ವಿವಾಹಜೀವಿತ."

Dr. A. S. Altekar ತನ್ನ The Position of Woman in Hindu Civilization ಎಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ:

"ವೈದಿಕಕಾಲದಲ್ಲಿ ವಿವಾಹವು ಸುಸ್ಥಾಪಿತವಾದ ಒಂದು ವ್ಯವಸ್ಥೆ ಮಾತ್ರವಾಗಿರಲಿಲ್ಲ. ಸಾಮಾಜಿಕವೂ ಧಾರ್ಮಿಕವೂ ಆದ ಕರ್ತವ್ಯ ಕೂಡ ಆಗಿತ್ತು.

ಅವಿವಾಹಿತನು ಅಶುದ್ಧನು ಎಂದು ಸಹ ವೇದದ ಒಂದು ವಾಕ್ಯದಲ್ಲಿ ಹೇಳಲಾಗಿದೆ."

ಡಾ| ಎ. ಎಸ್. ಮ್ಯಾಕ್ಸ್‌ವೆಲ್ ತನ್ನ Your Bible and you ಎಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ:

"ವಿವಾಹವು ಅತಿ ಪುರಾತನವಾದೊಂದು ವ್ಯವಸ್ಥೆಯಾಗಿದೆ. ಏಡನ್ ತೋಟದ ಸೃಷ್ಟಿಯ ಕಾಲದಷ್ಟು ಹಳೆಯದಾಗಿದೆ ಅದು. ಮೊತ್ತಮೊದಲಿನ ವಿವಾಹ ದೇವರ ಪೌರೋಹಿತ್ಯದಿಂದಲೇ ನಡೆಯಿತು. ಅವನೇ ವಧುವನ್ನು ಪುರುಷನಿಗೆ ನೀಡಿದ್ದು. ಬೈಬಲಿನ ಮೊದಲಿನ ಎರಡು ಅಧ್ಯಾಯಗಳಲ್ಲಿ ಈ ಕಥೆಯನ್ನು ಪ್ರಸ್ತಾಪಿಸಲಾಗಿದೆ. ವಿವಾಹದ ಮೂಲಕ ಪುರುಷನು ಮಾತಾಪಿತರನ್ನು ಬಿಟ್ಟು ತನ್ನ ಪತ್ನಿಯೊಂದಿಗೆ ಸೇರಿದಾಗ ಎರಡೂ ಶರೀರಗಳು ಒಂದಾಗಿಬಿಡುತ್ತವೆ.

ಡಾ| ವಿಲಿಯಂ ಫಿಲಿಪ್ ತನ್ನ ಎಕ್ಯುಮೆನಿಕಲ್ ಸ್ಟಡೀಸ್ ಎಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ:

"ವಿವಾಹವನ್ನು ಮಾಡಿಕೊಳ್ಳದೆಯೂ ಆ ಮೂಲಕ ಸಂತಾನೋತ್ಪಾದನೆ ಪ್ರಕ್ರಿಯೆಯನ್ನು ತಡೆಯುವುದೂ ಮಹಾ ಪಾಪವೆಂದು ಸುವಾರ್ತಾ ಕಾಲ ಮೊದಲ್ಗೊಂಡೇ ಭಾವಿಸಲ್ಪಡುತ್ತಿತ್ತು."

ಶೇಕ್ಸ್‌ಪಿಯರ್ ತನ್ನ ಒಂದು ಗ್ರಂಥಸಂಕಲನದಲ್ಲಿ ಹೀಗೆ ಬರೆದಿದ್ದರು:

"ನೀನು ಸಾಯುವಾಗ ನಿನ್ನ ಪರವಾದದ್ದು ಬಾಕಿಯಾಗಲಿಕ್ಕಾಗಿ ನಿನ್ನ ವಂಶವನ್ನು ಹೆತ್ತು ಸಾಕಬೇಕಾದದ್ದು ಪ್ರಕೃತಿ ನಿಯಮಾನುಸಾರ ನಿನಗೆ ಋಣಿಯಾಗಿರುತ್ತದೆ."

Marriage and Home life ಎಂಬ ಗ್ರಂಥದಲ್ಲಿ ಅದರ ಗ್ರಂಥಕರ್ತ Dr. M. Mead ಬರೆಯುತ್ತಾರೆ:

"ದಾಂಪತ್ಯವು ಗೃಹಜೀವನದ ಅಡಿಪಾಯವಾಗಿದೆ. ತಮ್ಮ ಸಂತಾನಗಳನ್ನು ಪ್ರೀತಿ ಮತ್ತು ಸಂರಕ್ಷಣೆಯ ಪರಿಸರದಲ್ಲಿ ಬೆಳೆಸಲಿಕ್ಕೆ ಅದು ಸ್ತ್ರೀಯನ್ನೂ ಪುರುಷನನ್ನೂ ಸಜ್ಜುಗೊಳಿಸುತ್ತದೆ. ತಮ್ಮ ತಲೆಮಾರಿಗೆ ಶಕ್ತವಾದ ಅಡಿಪಾಯವನ್ನು ಗಟ್ಟಿಮಾಡುವ ರೀತಿಯಲ್ಲಿ ಎರಡು ವ್ಯಕ್ತಿಗಳನ್ನು ದಾಂಪತ್ಯವು ಬಂಧಿಸುತ್ತದೆ. ವಿವಾಹದ ಅಭಾವದಿಂದ ಉಂಟಾಗುವ ಸಂತಾನಗಳಲ್ಲಿ ಅನೈತಿಕತೆಯೂ ಅರಕ್ಷಿತಾವಸ್ಥೆಯೂ ಸೃಷ್ಟಿಯಾಗುತ್ತದೆ. ದಾಂಪತ್ಯ ಜೀವಿತದ ಮಹತ್ವವನ್ನು ಕಡೆಗಣಿಸಿದ ನಾಗರಿಕತೆಗಳು ಕುಸಿದು ಮಣ್ಣುಪಾಲಾಗಿವೆ. ಕುಟುಂಬ ವ್ಯವಸ್ಥೆ ಸಂರಕ್ಷಿಸಲ್ಪಡದಿದ್ದರೆ ನಮ್ಮ ನಾಗರಿಕತೆಯ ಸ್ಥಿತಿ ಸಹ ಅದೇ ಪ್ರಕಾರ ಆಗಿಬಿಡಬಹುದು."

The Religion of Islam ಎಂಬ ತನ್ನ ಪ್ರಸಿದ್ಧ ಗ್ರಂಥದಲ್ಲಿ ಮೌಲ್ವಿ ಮುಹಮ್ಮದ್ ಅಲಿ ಬರೆಯುತ್ತಾರೆ:

"ಮನುಷ್ಯ ಕುಲದ ಸಂತಾನೋತ್ಪಾದನೆ ಕೂಡ ವಿವಾಹ ಜೀವನದ ಪ್ರಧಾನ ಗುರಿಯಾಗಿದೆ. ಜೀವಿತವಿಡೀ ದಾಂಪತ್ಯಬಂಧವಿಲ್ಲದೆಯೂ ಮೃಗಗಳೋಪಾದಿಯಲ್ಲಿ ಮನುಷ್ಯರ ಸಂಖ್ಯೆಯನ್ನು ಹೆಚ್ಚಿಸಬಹುದೆಂದು ಹೇಳಲಾಗುತ್ತದೆ. ಹಾಗೆ ಆಗುವಾಗ ನಾಗರಿಕತೆ–ಎಂದರೆ ಸಾಮಾಜಿಕ ಪ್ರಜ್ಞೆ, ಹಕ್ಕು ಬಾಧ್ಯತೆಗಳು, ಹೊಣೆಗಾರಿಕೆಗಳು, ಸೊತ್ತು ವಾರೀಸುದಾರತ್ವ, ನೈತಿಕ-ಧಾರ್ಮಿಕ ಪ್ರಜ್ಞೆ, ಎಂಬಿತ್ಯಾದಿ ಮನುಷ್ಯನ ಕರ್ತವ್ಯಗಳು – ಮನುಷ್ಯನನ್ನೂ ಮೃಗವನ್ನೂ ಬೇರ್ಪಡಿಸುವ ಮಾರ್ಗರೇಖೆ ಎಂಬುದು ಇಲ್ಲದಾಗಿ ಮನುಷ್ಯರು ಸಹ ಮೃಗಗಳಿಗೆ ತುಲ್ಯರಾಗಿ ಬಿಡುವರು. ನಾಗರಿಕತೆಯ ಅಭಾವದಲ್ಲಿ ಕರ್ತವ್ಯಪ್ರಜ್ಞೆಯುಳ್ಳ ಮನುಷ್ಯವಂಶವಲ್ಲ, ಬದಲು ಚಿಂತನಾಶಕ್ತಿ ಮತ್ತು ವಿವೇಚನಾಶಕ್ತಿ ಇಲ್ಲದ ಕ್ರೂರವೂ ಕಾಮಾಸಕ್ತವೂ ಆದ ಮನುಷ್ಯರೂಪದಲ್ಲಿರುವ ಒಂದು ವರ್ಗ ಉಂಟಾಗಿಬಿಡುವುದು."

ರಾಮಾಯಣದಲ್ಲಿ ಪತ್ನಿಯಿಲ್ಲದ ಪುರುಷನನ್ನು ಎಲೆಯಿಲ್ಲದ ವೃಕ್ಷಕ್ಕೆ ಹೋಲಿಸಲಾಗಿದೆ. ಪತಿಯ ವಿರಹದಲ್ಲಿ ಸೀತೆ ವಿಲಾಪಿಸುವುದು ಈ ಪ್ರಕಾರವಾಗಿದೆ:

"ನನ್ನ ದೇವಾ, ಪತಿಯಿಲ್ಲದ ಸ್ತ್ರೀ ಆತ್ಮವಿಲ್ಲದ ಶರೀರದಂತೆಯೂ ನೀರಿಲ್ಲದ ನದಿಯಂತೆಯೂ ಆಗಿದ್ದಾಳೆ."

ಮುಹಮ್ಮದ್ ಪೈಗಂಬರರು ಈ ರೀತಿ ನುಡಿದಿದ್ದಾರೆ:

"ಸ್ತ್ರೀಯರೊಡನೆ ಉತ್ತಮ ರೀತಿಯಲ್ಲಿ ವರ್ತಿಸಲು ಅಲ್ಲಾಹನು ಆಜ್ಞಾಪಿಸಿದ್ದಾನೆ. ಏಕೆಂದರೆ ಅವರು ನಿಮ್ಮ ಹೆಂಡಂದಿರೂ ತಾಯಂದಿರೂ ಅತ್ತೆಯಂದಿರೂ ಸಹೋದರಿಯರೂ ಸಂತತಿಗಳೂ ಆಗಿದ್ದಾರೆ. ಲೋಕದಲ್ಲಿರುವುದೆಲ್ಲ ಮಹತ್ವವುಳ್ಳದ್ದೇ ಆಗಿವೆ. ಆದರೆ ಸುಕೃತವತಿಯಾದ ಪತ್ನಿಗಿಂತ ಬೆಲೆಬಾಳುವಂತಹದು ಬೇರೇನೂ ಇಲ್ಲ. ತೊಟ್ಟಿಲು ತೂಗುವ ಕೈಗಳು ಅತಿ ಉತ್ತಮವಾಗಿವೆ. ವಿವಾಹವು ಪತ್ನಿಯ ಚಾರಿತ್ರ್ಯವನ್ನು ಕಾಪಾಡುತ್ತದೆ. ಮನುಷ್ಯನು ಪಾಪಕರ್ಮಗಳಲ್ಲಿ ಮುಳುಗುವಾಗ ವಿಶ್ವಾಸವು ಅವನನ್ನು ತೊರೆಯುವುದು. ಅವನು ಪಾಪಕರ್ಮಗಳನ್ನು ತೊರೆಯುವಾಗ ವಿಶ್ವಾಸ ಅವನೆಡೆಗೆ ಹಿಂತಿರುಗುತ್ತದೆ." ಮುಂದುವರಿದು ಆ ಮಹಾಪುರುಷರು ಹೇಳುತ್ತಾರೆ:

"ಮನುಷ್ಯನನ್ನು ಅಲ್ಲಾಹನು ಜಲದಿಂದ ಸೃಷ್ಟಿಸಿದನು. ಜೀವನದಲ್ಲಿ ಮನಶ್ಶಾಂತಿ ಹೊಂದಲಿಕ್ಕಾಗಿ ರಕ್ತ ಸಂಬಂಧವನ್ನೂ ದಾಂಪತ್ಯ ಸಂಬಂಧವನ್ನೂ ಅವನು ನಿಮಗೆ ಏರ್ಪಡಿಸಿರುವನು. ಅದರ ಮೂಲಕ ಅವರೆಡೆಯಲ್ಲಿ ಪ್ರೀತಿವಾತ್ಸಲ್ಯವನ್ನೂ ಕರುಣೆಯನ್ನೂ ಅವನು ಸುರಿಸಿರುವನು."

ಇನ್ನೂ ಹೇಳುತ್ತಾರೆ:

"ಓ ನನ್ನ ಜನರೇ, ದೇವರು ಎಲ್ಲಾ ಪ್ರವಾದಿಗಳಿಗೂ ಹೆಂಡಂದಿರನ್ನೂ ಮಕ್ಕಳನ್ನೂ ನೀಡಿದ್ದಾನೆ. ಸನ್ಮಾರ್ಗಿಕ ಜೀವನವನ್ನು ನಡೆಸಲು ಅಲ್ಲಾಹನು ನಿಮಗೆ ವಿವಾಹ ಜೀವಿತವನ್ನು ಏರ್ಪಡಿಸಿರುವನು. ನಿಮ್ಮಲ್ಲಿ ವಿವಾಹ ಮಾಡಿಕೊಳ್ಳುವವರು ಧರ್ಮದ ಮೂರನೇ ಎರಡು ಪಾಲು ಪೂರ್ತಿಗೊಳಿಸಿದಂತೆ. ಏಕೆಂದರೆ ವಿವಾಹವು ಸ್ನೇಹಪ್ರಕಟನೆಯ ಅನುಪಮವಾದ ಗುಣಗಳನ್ನು ಬೆಳಗಿಸುತ್ತವೆ."

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್ ಬರೆಯುತ್ತಾರೆ:

"ಇಹ್‌ಸಾನ್ ಎಂಬ ಪದ ಶಕ್ತವಾದ ದುರ್ಗ ಎಂಬರ್ಥ ಕೊಡುವ ಹ್‌ಸ್ನ್ ಎಂಬ ಧಾತುವಿನಿಂದ ಉತ್ಪನ್ನವಾದುದಾಗಿದೆ. ಆದುದರಿಂದ ವಿವಾಹವನ್ನು ಇಹ್‌ಸಾನ್ ಎಂದು ಕರೆಯಲಾಗುತ್ತದೆ. ಏಕೆಂದರೆ ಚಾರಿತ್ರ್ಯ ಸಂರಕ್ಷಣೆಯ ಕೋಟೆಯನ್ನು ಪ್ರವೇಶಿಸುವವನು ಎಲ್ಲಾ ತರ ಪಾಪಕೃತ್ಯಗಳಿಂದ ಸಂರಕ್ಷಿಸಲ್ಪಡುತ್ತಾನೆಂದು ಇದರಿಂದ ಅರ್ಥವಾಗುತ್ತದೆ. ಮಾತ್ರವಲ್ಲ. ವಿವಾಹವು ಸಂತಾನೋತ್ಪಾದನೆ ಮೂಲಕ ತನ್ನ ವಂಶವನ್ನು ನಾಶದಿಂದ ರಕ್ಷಿಸಿ, ಅನಿಯಂತ್ರಿತವಾದ ಕಾಮ ವಿಕಾರಗಳಿಗೆ ಗುರಿಯಾಗದಂತೆ ಕಾಪಾಡುತ್ತದೆ. ಒಟ್ಟಾರೆ, ವಿವಾಹವು, ಎಲ್ಲಾ ತರ ಲೈಂಗಿಕ ಪಾಪಕೃತ್ಯಗಳ ಆಕ್ರಮಣಗಳಿಂದ ಮನುಷ್ಯನನ್ನು ರಕ್ಷಿಸುವ ಶಕ್ತಿಯುತವಾದೊಂದು ಕೋಟೆಯಾಗಿದೆ." (ಆರ್ಯಧರ್ಮ್)

ಪುನಃ ಅವರು ಬರೆಯುತ್ತಾರೆ:

"ಇಹ್‌ಸಾನ್ ಎಂಬುದು ಸ್ತ್ರೀ ಪುರುಷರ ಸಂತಾನೋತ್ಪತ್ತಿ ಶಕ್ತಿಗೆ ಸಂಬಂಧಿಸಿದ ಪರಿಶುದ್ಧತೆಯನ್ನು ಸೂಚಿಸುವ ಪದವಾಗಿದೆ. ಒಬ್ಬ ಪುರುಷನನ್ನು 'ಮುಹ್‌ಸಿನ್' (ಚಾರಿತ್ರ್ಯವಂತ) ಎಂದಾಗಲಿ ಓರ್ವ ಸ್ತ್ರೀಯನ್ನು 'ಮುಹ್‌ಸಿನ' (ಚಾರಿತ್ರ್ಯವತಿ) ಎಂದಾಗಲಿ ಹೇಳುವುದು ಈರ್ವರಿಗೂ ಇಹದಲ್ಲಿ ಅಪಮಾನವೂ ನಾಶವೂ ಪರಲೋಕದಲ್ಲಿ ಭಯಂಕರ ಶಿಕ್ಷೆಯೂ ಮಾತ್ರವಲ್ಲ. ಸಂಬಂಧಿಕರಿಗೆ ಅಪಕೀರ್ತಿಯನ್ನೂ ನಷ್ಟವನ್ನೂ ಉಂಟುಮಾಡುವ ವ್ಯಭಿಚಾರದಿಂದಲೂ ಅದರ ಸನ್ನಿವೇಶಗಳಿಂದಲೂ ದೂರವಿದ್ದು ಸಚ್ಚಾರಿತ್ರ್ಯರಾಗಿರುವಾಗ ಆಗಿದೆ." (ಇಸ್ಲಾಂ ಧರ್ಮ ತತ್ವಜ್ಞಾನ)

ಮತ್ತೂ ಹೇಳುತ್ತಾರೆ:

"ಸನ್ಮಾರ್ಗ ಜೀವನವನ್ನೂ ದೇವಭಯವನ್ನೂ ಲಕ್ಷ್ಯವಾಗಿರಿಸಿ ನೀವು ವಿವಾಹಿತರಾಗಿರಿ. ತದ್ವಿರುದ್ಧವಾಗಿ, ಮೃಗಗಳಂತೆ ಲೈಂಗಿಕಾಸಕ್ತಿಯನ್ನು ಗುರಿಯಾಗಿಟ್ಟುಕೊಂಡು ನೀವು ವಿವಾಹಿತರಾಗಬೇಡಿರಿ. ವಿವಾಹವಾಡದೆ ಇದ್ದವರು ಆಧ್ಯಾತ್ಮಿಕ ದುರಂತಗಳಲ್ಲಿ ಸಿಲುಕಿ ಶಾರೀರಿಕವಾದ ಪೀಡನಾನುಭವಗಳಿಗೆ ಗುರಿಯಾಗುತ್ತಾರೆ ಎಂದಾಗಿದೆ ಮುಹ್‌ಸಿನ್ ಎಂಬ ಪದವು ಸೂಚಿಸುವುದು." (ನಿಖಾಹ್ ಖುತ್‌ಬಾ)

ವಿವಾಹ ಜೀವಿತದಲ್ಲಿ ತನ್ನ ಎಲ್ಲಾ ಪತ್ನಿಯರೊಂದಿಗೆ ಮಾತಿನಲ್ಲೂ ಕೃತಿಯಲ್ಲೂ ಸಮಾನ ನೀತಿಯನ್ನು ಪಾಲಿಸಿ ಎಲ್ಲಾ ಕಾಲದ ಮನುಷ್ಯರಿಗೆ ಮಹಾನ್ ಮುಹಮ್ಮದ್ ಪೈಗಂಬರರು ತೋರಿಸಿದ ಅನುಕರಣೀಯ ಮಾದರಿ ಆ ಮಹಾಪುರುಷರನ್ನು ಅನುಪಮವಾದ ಪದವಿಗೇರಿಸಿದೆ.

# ರಮಝಾನ್ ವ್ರತಾನುಷ್ಠಾನ

★ ಎ. ಅಬ್ದುಲ್ ಹಕ್

ಇಸ್ಲಾಂ ಧರ್ಮಾನುಸಾರ ಚಾಂದ್ರಮಾಸವಾದ 'ರಮಝಾನ್' ತಿಂಗಳಲ್ಲಿಡೀ ವ್ರತವನ್ನನುಷ್ಠಿಸಲಿಕ್ಕೆ ವಿಧಿಸಲಾಗಿದೆ. ಉಷಃಕಾಲದಿಂದ ಸೂರ್ಯಾಸ್ತಮಾನ ವರೆಗೆ ಭಕ್ಷ್ಯಪೇಯಾದಿಗಳನ್ನೂ ದಾಂಪತ್ಯ ಲೈಂಗಿಕ ಸಂಬಂಧವನ್ನೂ ವರ್ಜಿಸುವುದಾಗಿದೆ ಈ ವ್ರತದ ಬಾಹ್ಯರೂಪ. ವ್ರತಾನುಷ್ಠಾನ ಕಾಲದಲ್ಲಿ ಅಹಿತ ವಿಚಾರಗಳಿಂದೆಲ್ಲಾ ಅಗಲಿಕೊಂಡು ಭಕ್ತಿಭರಿತ ಜೀವಿತವನ್ನು ನಡೆಸುವುದು ಅದರ ಜೀವವಾಗಿದೆ. ಈ ವ್ರತವು ಪ್ರೌಢ ವಯಸ್ಕರಾದ ಎಲ್ಲಾ ಮುಸ್ಲಿಂ ಸ್ತ್ರೀ ಪುರುಷರು ಆಚರಿಸಬೇಕೆಂದು ಇಸ್ಲಾಂ ಆದೇಶಿಸುತ್ತದೆ. ಆದರೆ ಮಕ್ಕಳಿಗೂ ರಜಸ್ವಲೆಯರಾದ ಸ್ತ್ರೀಯರಿಗೂ ಈ ಆಜ್ಞೆ ಅನ್ವಯಿಸುವುದಿಲ್ಲ. ರಜಸ್ವಲೆಯರಾದವರು ಶುದ್ಧವಾದ ಬಳಿಕವೇ ವ್ರತವನ್ನಾಚರಿಸಬೇಕಾಗಿದೆ. ರೋಗಿಗಳೂ ಯಾತ್ರಿಕರೂ ವ್ರತವನ್ನನುಷ್ಠಿಸಬೇಕಾಗಿಲ್ಲ. ಅವರು ಬಿಟ್ಟುಹೋದ ವ್ರತಗಳನ್ನು ಬೇರೆ ದಿನಗಳಲ್ಲಿ ಪೂರ್ತಿಗೊಳಿಸಬೇಕಾಗಿದೆ. ಸ್ಥಿರರೋಗಿಗಳೂ ಉಪವಾಸ ಮಾಡಲು ಅಸಾಧ್ಯವಾದ ಮಟ್ಟಿಗೆ ಅತಿ ವೃದ್ಧಾಪ್ಯವನ್ನು ಹೊಂದಿದವರೂ ಈ ಹೊಣೆಯಿಂದ ವಿನಾಯತಿ ಪಡೆಯುತ್ತಾರೆ. ಅವರಿಗೆ ಸಾಧ್ಯವಿದ್ದ ಪಕ್ಷದಲ್ಲಿ ಪ್ರತಿಯೊಂದು ದಿನದ ಉಪವಾಸಕ್ಕೆ ಬದಲು ಒಬ್ಬ ನಿರ್ಗತಿಕನಿಗೆ ಒಂದು ದಿನದ ಆಹಾರವಾಗಲಿ ಅದಕ್ಕೆ ಬೇಕಾಗುವ ಧಾನ್ಯವಾಗಲಿ, ಧನವಾಗಲಿ ದಾನಮಾಡಬೇಕಾಗಿದೆ.

ವ್ರತಾನುಷ್ಠಾನಿ ತನ್ನ ಶರೀರಕ್ಕೆ ಅನಾವಶ್ಯಕ ಪೀಡನೆಯುಂಟಾಗದಿರಲಿಕ್ಕಾಗಿ ಮುಂಜಾನೆಗೆ ಮುಂಚಿತವಾಗಿ ಆಹಾರವನ್ನೇನಾದರೂ ಸೇವಿಸಿ ತಾನು ವ್ರತವನ್ನನುಷ್ಠಿಸುವೆನೆಂದು ಮನೋನಿಶ್ಚಯ ಮಾಡಬೇಕಾಗಿದೆ. ಇಂಗಿತರಹಿತವಾದ ಕ್ರಿಯೆ ಇಸ್ಲಾಮಿನ ದೃಷ್ಟಿಯಲ್ಲಿ ಧಾರ್ಮಿಕ ಕರ್ಮವೆನಿಸುವುದಿಲ್ಲ. ಆದ್ದರಿಂದ ಈ ಪುಣ್ಯ ಕರ್ಮ ಮಾಡಬೇಕೆಂಬ ವಾಂಛೆಯಿಂದ ಮುಂಜಾನೆಯಿಂದ ಮುಸ್ಸಂಜೆಯ ವರೆಗೆ ಎಲ್ಲಾ ತರ ಭಕ್ಷ್ಯ ಪೇಯಾದಿಗಳನ್ನೂ ಪರಿತ್ಯಜಿಸಿ ಉಪವಾಸ ಮಾಡಬೇಕಾದುದು ಪ್ರಾಯಕ್ಕೆ ಬಂದ ಆರೋಗ್ಯವಂತರಾದ ಎಲ್ಲಾ ಮುಸ್ಲಿಮರ ಕರ್ತವ್ಯವಾಗಿದೆ. ವ್ರತಾನುಷ್ಠಾನಿ ಈ ನಿಷ್ಠೆಗೆ ಭಂಗ ಉಂಟುಮಾಡಬಾರದು. ಮನಃಪೂರ್ವಕ ಇದಕ್ಕೆ ಭಂಗವನ್ನುಂಟುಮಾಡುವ ಪಕ್ಷದಲ್ಲಿ ಪ್ರಾಯಶ್ಚಿತ್ತವಾಗಿ ಅದಕ್ಕಿರುವ ಶಿಕ್ಷೆಯನ್ನು ಅನುಭವಿಸಬೇಕಾಗಿದೆ.

ಮೇಲೆ ಹೇಳಿದ ಎಲ್ಲಾ ವಿಚಾರಗಳನ್ನು ಒಳಗೂಡಿಸಿಕೊಂಡು ಪವಿತ್ರ ಖುರ್‌ಆನ್ ಈ ಧರ್ಮಾನುಷ್ಠಾನದ ಬಗ್ಗೆ ನೀಡುವ ವಿವರಣೆ ಹೀಗಿದೆ:

* "ಓ ವಿಶ್ವಾಸಿಗಳೇ, ನಿಮ್ಮ ಪೂರ್ವದವರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವು ವಿಧಿಸಲ್ಪಟ್ಟಿದೆ– ನೀವು ದೋಷಬಾಧೆಯಿಂದ ತಡೆಯಲ್ಪಡಲಿಕ್ಕಾಗಿ."

* "ಕೆಲವು ನಿರ್ದಿಷ್ಟ ದಿನಗಳಲ್ಲಿ (ಈ ಅನುಷ್ಠಾನವಿದೆ). ಆದರೆ ನಿಮ್ಮ ಪೈಕಿ ಯಾರಾದರೂ ರೋಗಿಯಾಗಿದ್ದರೆ, ಅಥವಾ ಪ್ರಯಾಣದಲ್ಲಿದ್ದರೆ, ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ತಿಗೊಳಿಸಲಿ. ಅದು ಅಸಾಧ್ಯವೆಂದಾದರೆ ಪ್ರಾಯಶ್ಚಿತ್ತವಾಗಿ, ಒಬ್ಬ ನಿರ್ಗತಿಕನಿಗೆ ಆಹಾರ ನೀಡುವುದು ಕರ್ತವ್ಯವಾಗಿದೆ. ಯಾರಾದರೂ ಸ್ವಇಚ್ಛೆಯಿಂದ ಒಳಿತುಮಾಡುವುದಾದರೆ ಅದು ಅವನಿಗೆ ಉತ್ತಮ; ನೀವು ಅರಿಯುವವರಾಗಿದ್ದರೆ, ಉಪವಾಸ ವ್ರತವನ್ನನುಷ್ಠಿಸುವುದು ನಿಮಗೆ ಅತ್ಯುತ್ತಮ."

* ಜನರಿಗೆ ಮಾರ್ಗದರ್ಶಕವಾಗಿಯೂ ಸತ್ಪಥದ ಕುರಿತುಳ್ಳ ಸ್ಪಷ್ಟವಾದ ಸಾಕ್ಷ್ಯಗಳೂ ಸತ್ಯಾಸತ್ಯ ವಿವೇಚಕವಾಗಿಯೂ ಖುರ್‌ಆನ್ ಅವತೀರ್ಣವಾದ ರಮಝಾನ್

ಮಾಸ. ಆದ್ದರಿಂದ, ನಿಮ್ಮಲ್ಲಿ ಯಾವನಾದರೂ ಆ ಮಾಸವನ್ನು ಪಡೆಯುತ್ತಾನೋ ಆತನು ವ್ರತವನ್ನನುಷ್ಠಿಸಲಿ; ಯಾವನಾದರೂ ರೋಗಿಯಾಗಿದ್ದರೆ ಯಾ ಪ್ರವಾಸದಲ್ಲಿದ್ದರೆ ಆತನು ಬೇರೆ ದಿವಸಗಳಲ್ಲಿ ಸಂಖ್ಯೆಯನ್ನು ಪೂರ್ತಿಗೊಳಿಸಲಿ. ಅಲ್ಲಾಹನು ನಿಮ್ಮ ಸೌಲಭ್ಯವನ್ನು ಉದ್ದೇಶಿಸುತ್ತಾನೆ; ನಿಮ್ಮ ಯಾತನೆಯನ್ನು ಉದ್ದೇಶಿಸುವುದಿಲ್ಲ. ಇದು ನಿಮಗೆ ಸಂಖ್ಯೆಯನ್ನು ಪೂರ್ತಿಗೊಳಿಸಲಿಕ್ಕೂ ನಿಮ್ಮನ್ನು ಅಲ್ಲಾಹನು ಸನ್ಮಾರ್ಗದಲ್ಲಿ ನಡೆಸಿದ್ದಕ್ಕೆ ಅವನ ಮಹಿಮೆಯನ್ನು ನೀವು ಕೊಂಡಾಡಲಿಕ್ಕೂ ನೀವು ಕೃತಜ್ಞತೆ ಸಲ್ಲಿಸಲಿಕ್ಕೂ ಆಗಿದೆ."

* "ನಿನ್ನೊಡನೆ ನನ್ನ ದಾಸರು ನನ್ನ ಬಗ್ಗೆ ಕೇಳಿದರೆ, ನಾನು ಸಮೀಪದಲ್ಲೇ ಇದ್ದೇನೆ (ಎಂದು ಹೇಳು); ಪ್ರಾರ್ಥಿ ನನ್ನೊಡನೆ ಪ್ರಾರ್ಥಿಸಿದರೆ ಅವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು; ಆದ್ದರಿಂದ ಅವರು ನನ್ನ ಕರೆಗೆ ಓಗೊಟ್ಟು ನನ್ನನ್ನು ನಂಬಲಿ – ಅವರು ಮಾರ್ಗದರ್ಶನ ಪಡೆಯಲಿಕ್ಕಾಗಿ."

* ವ್ರತರಾತ್ರಿಗಳಲ್ಲಿ ನಿಮಗೆ ನಿಮ್ಮ ಪತ್ನಿಯರೊಡನೆ ಸಂಸರ್ಗ ಅನುಮತಿಸಲಾಗಿದೆ. ಅವರು ನಿಮಗೆ ಉಡುಪು ಮತ್ತು ನೀವು ಅವರಿಗೆ ಉಡುಪು. ನಿಮ್ಮೊಡನೆ ನೀವೇ ಅನ್ಯಾಯವೆಸಗುತ್ತಿರುವಿರೆಂದು ಅಲ್ಲಾಹನು ಬಲ್ಲನು. ಆದುದರಿಂದ ಅವನು ನಿಮ್ಮ ಪಶ್ಚಾತ್ತಾಪವನ್ನು ಸ್ವೀಕರಿಸಿ, ನಿಮಗೆ ಕ್ಷಮೆನೀಡಿರುತ್ತಾನೆ. ಆದ ಕಾರಣ, ಇನ್ನು ಮುಂದೆ ಉಷಃಕಾಲದ ಬಿಳಿನೂಲು ಕಪ್ಪುನೂಲಿನಿಂದ ಬೇರ್ಪಟ್ಟು ನಿಮಗೆ ಕಾಣುವ ವರೆಗೆ, ನೀವು ಸಂಸರ್ಗ ಮಾಡಬಹುದು ಹಾಗೂ ನಿಮಗೆ ನಿಯತಗೊಳಿಸಿದುದನ್ನು ನೀವು ಕಾಂಕ್ಷಿಸಬಹುದು, ನೀವು ಕುಡಿಯಲೂ ತಿನ್ನಲೂ ಬಹುದು. ಅನಂತರ ರಾತ್ರಿಯಾಗುವ ತನಕ ನೀವು ವ್ರತವನ್ನು ಪೂರ್ಣವಾಗಿ ಅನುಷ್ಠಿಸಿರಿ. ಮಸೀದಿಗಳಲ್ಲಿ ಧ್ಯಾನೋಪಾಸನೆಯಲ್ಲಿರುವಾಗ, ನೀವು ಅವರೊಂದಿಗೆ ಸಂಸರ್ಗ ಮಾಡಬಾರದು. ಇದು ಅಲ್ಲಾಹನು ನಿಶ್ಚಯಪಡಿಸಿದ ಸೀಮೆಗಳಾಗಿವೆ. ಆದುದರಿಂದ ನೀವು ಅವರನ್ನು ಸಮೀಪಿಸಬಾರದು. ಈ ಪ್ರಕಾರ ಜನರಿಗೆ ಅಲ್ಲಾಹನು ಅವನ ಉದ್ದೇಶಗಳನ್ನು ವ್ಯಕ್ತಗೊಳಿಸಿ ಕೊಡುತ್ತಾನೆ. ಆ ಮೂಲಕ ಅವರು ಕೆಡುಕುಗಳ ಬಗ್ಗೆ ಜಾಗರೂಕತೆ ವಹಿಸಬಹುದಾಗಿದೆ." (2:184-188)

ಸೂರತುಲ್ ಬಖರದ ಐದು ವಚನಗಳಾಗಿವೆ ಮೇಲೆ ಉದ್ಧರಿಸಲ್ಪಟ್ಟದ್ದು. ಒಂದನೆಯ ವಚನದಲ್ಲಿ, ಪೂರ್ವ ಸಮುದಾಯಗಳಿಗೆ ಉಪವಾಸವು ಒಂದು ಧರ್ಮಾಚರಣೆಯಾಗಿ ವಿಧಿಸಲ್ಪಟ್ಟಿದ್ದಂತೆ ಮುಸ್ಲಿಮರಿಗೂ ವಿಧಿಸಲಾಗಿದೆ ಎಂದು ಹೇಳಲಾಗಿದೆ. ಅದರ ಪ್ರಕಾರ, ದೈವಿಕ ಧರ್ಮಾವಲಂಬಿಗಳಾದ ಎಲ್ಲಾ ಜಾತಿಯವರಲ್ಲೂ ಒಂದು ತರದಲ್ಲವಾದರೆ ಬೇರೊಂದು ತರದಲ್ಲಿ ವ್ರತಾನುಷ್ಠಾನ ರೂಢಿಯಲ್ಲಿತ್ತೆಂದು ನಾವು ಕಾಣುತ್ತೇವೆ. ಮಾತ್ರವಲ್ಲ, ಇಂದು ಪ್ರತ್ಯೇಕ ಧರ್ಮಗ್ರಂಥವೇನೂ ಇಲ್ಲದ ಜಾತಿಯವರೆಡೆಯಲ್ಲೂ ಈ ಆಚಾರ ವಾಡಿಕೆಯಲ್ಲಿದೆ. ಏಕೆಂದರೆ ಇಂತಹ ಜನರು ಸಹ ಅತಿ ಪ್ರಾಚೀನ ಕಾಲದ ಯಾವುದಾದರೂ ದೈವಿಕ ಮತದ ಶಿಷ್ಟಾಚಾರದ ಪ್ರಭಾವಕ್ಕೆ ಒಳಪಟ್ಟವರಾಗಿರಬೇಕು. ಹೇಗಿದ್ದರೂ ಪ್ರವಾದಿವರ್ಯರಾದ ಮುಹಮ್ಮದ್ ಪೈಗಂಬರರಿಗೆ ದೇವರಿಂದ ಅವತೀರ್ಣವಾದ ಖುರ್ಆನಿನಲ್ಲಿ ಹೇಳಿದ ಸಂಗತಿಯು ವಾಸ್ತವಿಕತೆಯನ್ನು ಇಂದಿನ ವಿವಿಧ ಧರ್ಮೀಯರೆಲ್ಲಾ ಅವರ ಆಚಾರಾನುಷ್ಠಾನ ಮೂಲಕ ಸಾಕ್ಷೀಕರಿಸುತ್ತಾರೆ. ಇದರಿಂದಲೇ ಆತ್ಮೋನ್ನತಿಯನ್ನು ಲಕ್ಷ್ಯವಾಗಿಟ್ಟುಕೊಂಡಿರುವ ಈ ಆಚಾರದ ಆವಶ್ಯಕತೆ ನಮಗೆ ಮನದಟ್ಟಾಗುತ್ತದೆ.

ಯಹೂದರ ಧರ್ಮಗ್ರಂಥವಾದ 'ಟೋರಾ'ದಲ್ಲೂ ಅದರ ಅನುಬಂಧವಾದ ಉಪಗ್ರಂಥಗಳಲ್ಲೂ ಕ್ರೈಸ್ತ ಧರ್ಮಗ್ರಂಥವಾದ 'ಹೊಸ ಒಡಂಬಡಿಕೆ'ಯಲ್ಲೂ ವ್ರತಾನುಷ್ಠಾನದ ಬಗ್ಗೆ ಹೇಳಲಾಗಿದೆ. ಯಹೂದರ ಧರ್ಮಶಾಸ್ತ್ರಕಾರನಾದ ಪ್ರವಾದಿ ಮೋಶೆ ನಾಲ್ವತ್ತು ದಿನಗಳ ವರೆಗೆ ಅನ್ನಪಾನಾದಿಗಳನ್ನು ತ್ಯಜಿಸಿ ಉಪವಾಸ ಅನುಷ್ಠಿಸಿದ್ದರೆಂದು ವಿಮೋಚನಕಾಂಡ 34 : 28ರಲ್ಲಿ ಮತ್ತು ಧರ್ಮೋಪದೇಶಕಾಂಡ 9 : 9ರಲ್ಲಿ ಪ್ರಸ್ತಾಪಿಸಲಾಗಿದೆ. ನಂತರ, ಇಸ್ರಾಯೇಲರೆಡೆಯಲ್ಲಿ ಅವತರಿಸಿದ ಇತರ ಪ್ರವಾದಿಗಳೂ ಅವರ ಅನುಯಾಯಿಗಳೂ ಉಪವಾಸ ಆಚರಿಸಿದ್ದರೆಂದು ಹಳೆಯ ಒಡಂಬಡಿಕೆ ಸಾಕ್ಷ್ಯವಹಿಸುತ್ತದೆ. ಉದಾಹರಣೆಗೆ,

೧ ಅರಸುಗಳು 19 : 8, ಎಜ್ರನು 8 : 21, ಎಸ್ತೇರಳು 4:16, ದಾನಿಯೇಲನು 9:3, ಯೋನನು 3:5, ಜೆಕರ್ಯನು 8:19 ನೋಡಿರಿ.

ಇಸ್ರಾಯೇಲರಲ್ಲಿ ಕೊನೆಗೆ ಪ್ರವಾದಿಯಾಗಿ ಅವತರಿಸಿದ ಯೇಸುಕ್ರಿಸ್ತರ ಅನುಯಾಯಿಗಳೆಂದು ಹೇಳುವ ಕ್ರೈಸ್ತರು ಈಗ ವ್ರತಾನುಷ್ಠಾನದಲ್ಲಿ ಅಷ್ಟೊಂದು ಆಸಕ್ತಿಯನ್ನು ತೋರಿಸುವುದಿಲ್ಲ. ಆದರೆ ಯೇಸುಕ್ರಿಸ್ತರಾದರೋ ನಾಲ್ವತ್ತು ಹಗಲು ರಾತ್ರಿ ಉಪವಾಸವಿದ್ದರೆಂದು ಮತ್ತಾಯ 4:2 ಮತ್ತು ಲೂಕ 4:2 ಸಾಕ್ಷಿವಹಿಸುತ್ತನೆ. ಮಾತ್ರವಲ್ಲ, ಅವರು ಸೈತಾನನ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದಕ್ಕೆ ಆತ್ಮಶಕ್ತಿ ಗಳಿಸಿದ್ದು ಆ ಉಪವಾಸದಿಂದಾಗಿತ್ತೆಂದು ಸಹ ಆ ಸಂದರ್ಭದಿಂದ ಮನದಟ್ಟಾಗುತ್ತದೆ. ಉಪವಾಸದ ಮಹತ್ವದ ಬಗ್ಗೆ ಅವರು ಶಿಷ್ಯರಿಗೆ ಬೋಧಿಸುವುದನ್ನು ನೋಡಿರಿ:

**"Verily I say unto you, If you have faith as a grain of mustard seed, you shall say unto this mountain, Remove hence to yonder place; and it shall remove; and nothing shall be impossible unto you. Howbeit this kind goeth not out but by prayer and fasting" [St. Matthew 17:20, 21 - Authorized (King James) Version]** ಎಂದರೆ "ನಿಮಗೆ ಸತ್ಯವಾಗಿ ಹೇಳುತ್ತೇನೆ, ಸಾಸಿವೇಕಾಳಷ್ಟು ನಂಬಿಕೆ ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ – ಇಲ್ಲಿಂದ ಹೋಗು ಎಂದು ಹೇಳಿದರೂ ಅದು ಹೋಗುವದು; ಮತ್ತು ನಿಮ್ಮ ಕೈಯಿಂದಾಗದಂಥದು ಒಂದೂ ಇರುವುದಿಲ್ಲ. ಆದಾಗ್ಗೂ ಪ್ರಾರ್ಥನೆ ಮತ್ತು ಉಪವಾಸ ಮೂಲಕವಲ್ಲದೆ ಈ ಜಾತಿ ನೀಗಲಾರದು ಅಂದನು" (ಮತ್ತಾಯ **17:20, 21**).

ಯೇಸುಕ್ರಿಸ್ತರ ಶಿಷ್ಯರು ಸಹ ಉಪವಾಸ ವ್ರತ ಅನುಷ್ಠಿಸುತ್ತಿದ್ದರೆಂದು ಅಪೊಸ್ತಲರ ಕೃತ್ಯಗಳ 14ನೇ ಅಧ್ಯಾಯದಲ್ಲಿ ಸ್ಪಷ್ಟವಾಗುತ್ತದೆ.

ಜೊರಾಸ್ಟ್ರಿಯನ್ ಧರ್ಮೀಯರೆಡೆಯಲ್ಲೂ ಹಿಂದೂಗಳೆಡೆಯಲ್ಲೂ ವ್ರತಾನುಷ್ಠಾನ ರೂಢಿಯಲ್ಲಿತ್ತೆಂದೂ ಅವರ ಧರ್ಮಗ್ರಂಥಗಳಲ್ಲಿ ಈ ಧರ್ಮಾನುಷ್ಠಾನದ ಬಗ್ಗೆ ಪ್ರಸ್ತಾಪಿಸಲಾಗಿತ್ತೆಂದೂ ಕಾಣಬಹುದು. ಹೀಗೆ ಸರ್ವಧರ್ಮೀಯರೆಡೆಯಲ್ಲೂ ಈ ಧರ್ಮಾಚಾರಣೆ ಗೋಚರವಾಗುತ್ತದೆಂಬುದು ಪವಿತ್ರ ಖುರ್‌ಆನಿನ ಹೇಳಿಕೆಯ ಸತ್ಯತೆಗೂ ಮುಹಮ್ಮದ್ ಪೈಗಂಬರರ ದೈವೀಪ್ರಕಾಶನ ತಥ್ಯವೆಂಬುದಕ್ಕೂ ಸಾಕ್ಷ್ಯವಾಗುತ್ತದೆ.

ಪೂರ್ವ ಧರ್ಮಗಳಲ್ಲೂ ವ್ರತಾನುಷ್ಠಾನ ಅಥವಾ ಉಪವಾಸ ಒಂದು ಧರ್ಮಾಚಾರಣೆಯಾಗಿ ವಿಧಿಸಲಾಗಿತ್ತೆಂದು ಪವಿತ್ರ ಖುರ್‌ಆನ್ ಹೇಳುವಂತೆ ಆ ಧರ್ಮಗಳ ಪೈಕಿ ಇಂದು ಅವಶೇಷವಾಗಿರುವವುಗಳ ಅನುಯಾಯಿಗಳೆಡೆಯಲ್ಲಿ ಈ ಆಚಾರ ವಾಡಿಕೆಯಲ್ಲಿರುವುದಾಗಿ ನಾವು ಕಾಣುತ್ತೇವಷ್ಟೇ. ಆದರೆ ಈ ಅನುಷ್ಠಾನ ಮೂಲಕ ಅವರಲ್ಲುಂಟಾಗಬೇಕಾದ ನೈತಿಕ ಅಥವಾ ಆಧ್ಯಾತ್ಮಿಕವಾದ ಪರಿವರ್ತನ ಫಲವೇನೆಂಬುದರ ಕುರಿತು ಅವರ ಧರ್ಮಗ್ರಂಥಗಳಲ್ಲಿ ಹೇಳಲಾಗಿಲ್ಲ. "ಉಪವಾಸವು ಸರ್ವಯುಗಗಳಲ್ಲೂ ಸಕಲ ಜಾತಿಗಳೆಡೆಯಲ್ಲೂ ಒಂದು ಆಚಾರವಾಗಿರುವುದು ಅಧಿಕವಾಗಿಯೂ ದುಃಖಸಂದರ್ಭಗಳಲ್ಲಿ, ದುರಿತ ಘಟ್ಟಗಳಲ್ಲಿ ಮತ್ತು ಪೀಡಾನುಭವ ಕಾಲಗಳಲ್ಲಿ ಆಗಿದೆ" ಎಂದು 'ಕ್ರೂಡನ್ಸ್ ಬೈಬ್ಲಿಕಲ್ ಕೋರ್ಡನ್ಸ್' ಎಂಬ ಕ್ರೈಸ್ತ ಗ್ರಂಥದಲ್ಲಿ ಹೇಳಿದ ಪ್ರಕಾರ ವಿವಿಧ ಮತಸ್ಥರೆಡೆಯಲ್ಲಿ ವ್ರತವು ಆಚರಣೆಯಲ್ಲಿರುವುದು ದುಃಖನಿವಾರಣೆ, ದುರಿತ ಪರಿಹಾರ, ದೇವಕೋಪ ಶಮನ ಇತ್ಯಾದಿಗಳಿಗಾಗಿತ್ತೆಂದು ಕಾಣಬಹುದಾಗಿದೆ. ಆದರೆ ಈ ಸಂಪ್ರದಾಯದಿಂದ ಸಂಪೂರ್ಣ ಭಿನ್ನವಾದ ರೀತಿಯಲ್ಲಿ ವ್ರತಾನುಷ್ಠಾನಕ್ಕೆ ನೈತಿಕವೂ ಆಧ್ಯಾತ್ಮಿಕವೂ ಆದ ಒಂದರ್ಥವನ್ನೂ ಉದ್ದೇಶವನ್ನೂ ಪವಿತ್ರ ಖುರ್‌ಆನ್ ಸಂಕಲ್ಪಿಸಿದೆ. ಉಪವಾಸವನ್ನು ಆಚರಿಸಬೇಕೆಂಬ ಆದೇಶದೊಂದಿಗೆಯೇ ಅದರ ಮೂಲಕ ಕೆಡುಕನ್ನು ತಡೆಯಬಹುದೆಂದು ಹೇಳುತ್ತಾ ಅದರ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಕುರಿತು ಆ ಪವಿತ್ರ ಗ್ರಂಥವು ಬೋಧಿಸಿದೆ. ಮಾತ್ರವಲ್ಲ, ಅದಕ್ಕೆ ಆವಶ್ಯಕವಾದ ಹಲವು ಉಪಾಧಿಗಳ ಕುರಿತು ಪ್ರತಿಪಾದಿಸಿದೆ. ಹೀಗೆ ಇಸ್ಲಾಮಿನ ವ್ರತಾನುಷ್ಠಾನವು ಕೇವಲ ಅನ್ನಪಾನಾದಿಗಳನ್ನು ತೊರೆಯುವ ಒಂದು ಹೊಟ್ಟೆಗಿಲ್ಲದ ಉಪವಾಸವಲ್ಲವೆಂದೂ ಎಲ್ಲಾ ತರ ದೋಷಗಳನ್ನು ಪರಿವರ್ಜಿಸಿಕೊಂಡು ಜೀವನವನ್ನು ಪಾವನಗೊಳಿಸುವ ಒಂದು ದೃಢವ್ರತವೆಂದೂ ಖುರ್‌ಆನ್ ಮನಗಾಣಿಸಿಕೊಡುತ್ತದೆ.

ಉಪವಾಸಿಗನು ಒಂದು ಮಾಸ ಕಾಲವಿಡೀ ಅರ್ಧ ಸಮಯವೆಲ್ಲಾ ಲೌಕಿಕವಾದ ಸುಖಭೋಗವಸ್ತುಗಳನ್ನೆಲ್ಲಾ ಪರಿತ್ಯಜಿಸಲು ಅಭ್ಯಾಸ ಮಾಡುತ್ತಾನೆ; ಸುಖಭೋಗಾಸಕ್ತಿಯು ಮನುಷ್ಯನನ್ನು ಪಾಪದೆಡೆಗೆ ಕೊಂಡೊಯ್ಯಲು ಎಡೆಗೊಡುತ್ತದೆಯಷ್ಟೆ. ಒಟ್ಟಾರೆ, ಈ ವ್ರತಕಾಲದಲ್ಲಿ ವ್ರತಾನುಷ್ಠಾನಿ ತನ್ನ ಇಚ್ಛೆಗಳನ್ನು ನಿಯಂತ್ರಿಸಲಿಕ್ಕೂ ಮನೋನಿಗ್ರಹ ಮಾಡಲಿಕ್ಕೂ ತರಬೇತಿಹೊಂದುವುದರಿಂದ ಸಹಜವಾದ ದೋಷಪ್ರವಣತೆಗಳಿಂದ ಅಗಲಿಕೊಳ್ಳುವ ದೃಢಮನಸ್ಸು ಮತ್ತು ಅಭ್ಯಾಸ ಕರಗತವಾಗುತ್ತವೆ. ಶಾರೀರಿಕ ಅಥವಾ ಮಾನಸಿಕವಾದ ಯಾವುದೇ ಸಾಮರ್ಥ್ಯವೂ ಶಕ್ತಿಯೂ ಪೂರ್ಣತೆಯನ್ನು ಪಡೆಯಬೇಕಾದರೆ ಅದು ಒಂದು ವಿಶಿಷ್ಟ ತರದ ಶಿಕ್ಷಣಕ್ಕೂ ನಿಯಂತ್ರಣಕ್ಕೂ ಅಧೀನವಾಗಿರಬೇಕಲ್ಲವೇ. ಅದೇ ಪ್ರಕಾರ ದೇವೇಚ್ಛೆಗೆ ಶರಣಾಗಲಿಕ್ಕೂ ಅವನೊಡನಿರುವ ಅನುಸರಣೆಯನ್ನು ಸರಿಯಾಗಿ ಪಾಲಿಸಲಿಕ್ಕೂ ಇರುವ ಒಬ್ಬನ ಸಾಮರ್ಥ್ಯವನ್ನೂ ಶಕ್ತಿಯನ್ನೂ ಪೂರ್ಣಗೊಳಿಸಲಿಕ್ಕೆ ಅವನ ಆಂತರಿಕ ಶಕ್ತಿಗಳು ವಿಶೇಷತರದ ಒಂದು ಶಿಕ್ಷಣಕ್ಕೆ ಅಧೀನವಾಗಿರಬೇಕಾಗಿದೆ. ಹಾಗಿದ್ದರೆ ಮಾತ್ರವೇ ಅವನ ಆತ್ಮಶಕ್ತಿ ಉನ್ನತಿಯನ್ನೇರುವುದು,

ಸಂಕ್ಷಿಪ್ತವಾಗಿ, ಮನುಷ್ಯನಿಗೆ ಅವನ ಉತ್ಕೃಷ್ಟವಾದ ಲಕ್ಷ್ಯವನ್ನು ಹೊಂದುವುದಕ್ಕೆ ಅವಶ್ಯವೆಂದು ಇಸ್ಲಾಂ ನಿರ್ದೇಶಿಸಿದ ಮನಃಕಾಯಕರ್ಮಗಳಲ್ಲಿ ಒಂದಾಗಿದೆ ವ್ರತಾನುಷ್ಠಾನ. ಇದರ ಮೂಲಕ ಅವನಿಗೆ ತನ್ನ ಇಚ್ಛೆಗಳನ್ನೂ ಮನೋಚಾಂಚಲ್ಯಗಳನ್ನೂ ನಿಯಂತ್ರಿಸಲಿಕ್ಕೂ ನಿರೋಧಿಸಲಿಕ್ಕೂ ಸಾಧ್ಯವಾಗುತ್ತದೆ. ವಿಕಾರಗಳನ್ನು ನಿಯಂತ್ರಿಸಲು ಸಮರ್ಥನಾಗುವ ವ್ಯಕ್ತಿಗೆ ತನ್ನ ಮನಃಶಕ್ತಿಯನ್ನು ವಿಕಾಸಗೊಳಿಸಲಿಕ್ಕೂ ಪೋಷಿಸಲಿಕ್ಕೂ ದೋಷಪ್ರವಣತೆಗಳಿಂದೆಲ್ಲಾ ಮನಸ್ಸನ್ನು ತಡೆಯಲಿಕ್ಕೂ ಸತ್ಕರ್ಮಗಳಲ್ಲಿ ತೊಡಗಿಸಲಿಕ್ಕೂ ಸಾಧ್ಯವಾಗುತ್ತದೆ. ನಾವು ನಿತ್ಯವೂ ಅಭ್ಯಾಸದಿಂದ ಮಾಡುತ್ತಿರುವ ಕಾರ್ಯಗಳನ್ನು ಈ ಇಚ್ಛಾ ನಿರೋಧಮಾರ್ಗ ಮೂಲಕ ನಮಗೆ ಸುಲಭವಾಗಿ ಬಿಟ್ಟುಬಿಡಲಿಕ್ಕೆ ಶಕ್ತವೆಂದಾದರೆ ನಾವು ಎಂದಿಗೂ ಅವುಗಳ ಗುಲಾಮರಾಗಲಿಕ್ಕಿಲ್ಲ. ಬಾಹ್ಯವಾದ ನಿರ್ಬಂಧವೇನೂ ಇಲ್ಲದೆ ದೇವಸಂಪ್ರೀತಿಗೋಸ್ಕರ ಮಾತ್ರ ವ್ರತಾನುಷ್ಠಾನಿ ತನ್ನ ಇಚ್ಛೆಗಳನ್ನು ನಿಯಂತ್ರಿಸುತ್ತಲೂ ದುಷ್ಟಪ್ರವಣತೆಗಳನ್ನು ನಿರೋಧಿಸುತ್ತಲೂ ಇದ್ದುಕೊಂಡು ತನ್ನ ವ್ರತವನ್ನು ಪೂರ್ಣವಾಗಿ ಪಾಲಿಸುವಾಗ ಎಲ್ಲದಕ್ಕಿಂತಲೂ ಸ್ವಂತ ಸುಖಕ್ಕಿಂತಲೂ ದೇವಾಜ್ಞೆಗಳನ್ನು ಮಿಗಿಲೆಂದು ತಿಳಿದುಕೊಳ್ಳಲಿಕ್ಕೂ ಅವುಗಳನ್ನು ಗೌರವಿಸಲಿಕ್ಕೂ ಒಂದು ಪ್ರಜ್ಞೆಯು ಮೂಡುತ್ತದೆ. ತನ್ನ ಇಷ್ಟಾನುಸಾರ ಅನುಭವಿಸಬಹುದಾದ ತನ್ನ ಸಂಖಸೌಕರ್ಯ ಸಾಧನಗಳನ್ನೆಲ್ಲಾ ದೇವಾಜ್ಞೆಗೆ ವಿಧೇಯನಾಗಬೇಕೆಂಬ ಏಕ ಉದ್ದೇಶದಿಂದ ಪ್ರೇರಿತನಾಗಿ ಓರ್ವನು ಪರಿತ್ಯಜಿಸಿ ಅವುಗಳಲ್ಲಿ ಎಷ್ಟು ಆಶೆಯೂ ಆವಶ್ಯವೂ ತೋರಿದರೂ ಸರ್ವಸಾಕ್ಷಿಯಾದ ದೇವರ ಮುಂದೆ ಅವನ ಆಜ್ಞೆಯನ್ನು ಉಲ್ಲಂಘಿಸಿ ನಡೆಯಬೇಕಾಗುವುದೆಂಬ ಆತ್ಮಸಂಕೋಚದಿಂದ ತನ್ನ ಇಚ್ಛೆಗಳನ್ನು ಅದುಮಿಟ್ಟುಕೊಳ್ಳುವಾಗ ಖಂಡಿತವಾಗಿಯೂ ಅವನ ಆತ್ಮಕ್ಕೆ ಅಭೌಮವಾದ ಒಂದು ಪಾವನತೆ ಅನುಭವವಾಗುವುದು. ಆ ಪರಿಶುದ್ಧತೆ ಅವನ ಪ್ರಜ್ಞೇಂದ್ರಿಯಗಳಲ್ಲೂ ಕರ್ಮೇಂದ್ರಿಯಗಳಲ್ಲೂ ಪ್ರಕಾಶಿಸಲು ತೊಡಗುವುದು.

ಈ ಪ್ರಕಾರ ದೇವಸಂಪ್ರೀತಿಯನ್ನು ಬಯಸಿ ವರ್ಷದಲ್ಲಿ ಒಂದು ತಿಂಗಳ ಕಾಲ ಹಗಲು ಹೊತ್ತೆಲ್ಲಾ ವ್ರತವನ್ನನುಷ್ಠಿಸಿಕೊಂಡು ಇಚ್ಛಾನಿರೋಧವನ್ನೂ ಮನೋನಿಗ್ರಹವನ್ನೂ ಅಭ್ಯಸಿಸುವುದಾದರೆ ಅದು ಅವನ ಒಂದು ಸ್ಥಿರಗುಣವಾಗಿ ಮಾರ್ಪಟ್ಟು ದೇವವಿರೋಧವಾದ ಏನನ್ನೂ ಇಚ್ಛಿಸದಂತೆಯೂ ಅನುಭವಿಸದಂತೆಯೂ ಇರುವ ಒಂದು ಆತ್ಮಶಕ್ತಿ ಅನುಭವಸಿದ್ಧವಾಗುವುದು. ವ್ರತಾನುಷ್ಠಾನದಿಂದ ಸಿದ್ಧಿಸುವ ಈ ಪರಿಶುದ್ಧತೆ ಉಪವಾಸಿಗನ ಸ್ವಭಾವದಲ್ಲಿ ಒಂದು ಪಕ್ವತೆಯನ್ನೂ ಶಾಂತತೆಯನ್ನೂ ಬೆಳೆಸಿಕೊಂಡು ಬರಲಿಕ್ಕೆ ನೆರವಾಗುತ್ತದೆ. ಹೀಗೆ ವ್ರತಾನುಷ್ಠಾನಿ ಈ ಭಕ್ತಿಸಾಧನೆ ಮೂಲಕ "ದೋಷಬಾಧೆಯನ್ನು ತಡೆಯಲಿಕ್ಕೆ" ಅಭ್ಯಸಿಸುವುದರಿಂದ ಕೆಡಕನ್ನು ದೂರವಾಗಿರಿಸಲಿಕ್ಕೂ ಒಳಿತನ್ನು ಸಾಧ್ಯವಾದಷ್ಟು ಹತ್ತಿರಗೊಳಿಸಲಿಕ್ಕೂ ಸಮರ್ಥನಾಗಿ ದೋಷಪಿಶಾಚಿಯ ಮೇಲೆ ವಿಜಯವನ್ನು ಗಳಿಸುವನು. ಆದ್ದರಿಂದಲೇ "ಅಸ್ಸಿಯಾಮು ಜುನ್ನತುನ್" (ಉಪವಾಸವು ಒಂದು ಗುರಾಣಿಯಾಗಿದೆ) ಎಂದು ಪೈಗಂಬರರು ನುಡಿದಿರುತ್ತಾರೆ. ಗುರಾಣಿಯಿಂದ ಶತ್ರುವಿನ ಆಕ್ರಮಣವನ್ನು ತಡೆಯುವಂತೆ ದೋಷಪ್ರವಣತೆಗಳ ಆಕ್ರಮಣವನ್ನು ಉಪವಾಸ ಮೂಲಕ ತಡೆಯಬಹುದೆಂದೂ ನಿಯಂತ್ರಿಸಬಹುದೆಂದೂ ತಾತ್ಪರ್ಯ. ★

# ನಿರಾಯುಧೀಕರಣ ಮತ್ತು ಆರ್ಥಿಕ ಭದ್ರತೆ

—ಪಿ. ಎ. ಕಿರೆಯೆವ್

ಮಾನವಕುಲ ಇಂದು ಕವಲುದಾರಿಯಲ್ಲಿದೆ. 2000ನೇ ಇಸವಿಯ ಒಳಗಾಗಿ ಸಂಪೂರ್ಣ ನಾಶಗೊಳಿಸ ಬಲ್ಲ ಶಕ್ತಿಯ ನ್ಯೂಕ್ಲಿಯರ್ ಅಸ್ತ್ರಗಳು ಮತ್ತು ಇತರ ವಿಲಯಾಸ್ತ್ರಗಳಿಂದ ಭೂಮಂಡಲವನ್ನು ಮುಕ್ತಗೊಳಿ ಸುವುದು, ಅಥವಾ ವಿಶ್ವವ್ಯಾಪಕವಾದ ಇನ್ನೊಂದು ಹಿರೋಷಿಮಾ ಅನಾಹುತ ಜರಗಲು ಆಸ್ಪದ ನೀಡು ವುದು – ಇವೆರಡರಲ್ಲಿ ಒಂದು ಮಾರ್ಗವನ್ನು ಮಾನವ ಕುಲ ಆರಿಸಿಕೊಳ್ಳಬೇಕಾಗಿದೆ. ಇಂದು ಮಿಲಿಟರಿ ಕ್ಷೇತ್ರ ದಲ್ಲಿ ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಖರ್ಚು ವೆಚ್ಚ ಗಳು ವರ್ಷದಲ್ಲಿ ಒಂದು ಟ್ರಿಲಿಯನ್ ಡಾಲರ್‌ಗಳಿಗೆ ತಲುಪಿದೆ. ಕಲ್ಪನಾತೀತವಾದ ಮೊತ್ತವಿದು. ನೂರು ಡಾಲರ್ ನೋಟನ್ನು ಒಂದರ ಮೇಲೊಂದರಂತೆ 100 ಕಿಲೋಮೀಟರ್ ಎತ್ತರದ ವರೆಗೆ ಪೇರಿಸಿದರೆ ಒಂದು ಟ್ರಿಲಿಯನ್ ಡಾಲರ್ ಮೊತ್ತವಾಗುತ್ತದೆ.

1960ನೇ ಇಸವಿಯಿಂದ ಈ ವರೆಗೆ 14 ಟ್ರಿಲಿಯನ್ ಡಾಲರ್‌ಗಳು ಮಿಲಿಟರಿ ಉದ್ದೇಶಗಳಿಗಾಗಿ ವೆಚ್ಚವಾಗಿದೆ. ಈ ಅವಧಿಯಲ್ಲಿ ಜಾಗತಿಕ ಉತ್ಪಾದನಾ ಮಟ್ಟ ಹಣಕಾಸಿನ ದರದಲ್ಲಿ ಹೇಳುವುದಾದರೆ ಕೇವಲ 8.6 ಟ್ರಿಲಿಯನ್ ಡಾಲರ್‌ಗಳಷ್ಟು ಹೆಚ್ಚಿತು. ಇಂದು ಜಗತ್ತಿನಾದ್ಯಂತ ಮಾನವ ಶಕ್ತಿಯ ನಷ್ಟವನ್ನು ಹಿರೋಷಿಮಾ ದುರಂತಕ್ಕೆ ಹೋಲಿಸಿದರೆ ಪ್ರತಿ ಮೂರು ದಿನಗಳಲ್ಲಿ 130,000 ಮಂದಿ ಹಸಿವೆ ಹಾಗೂ ಕಾಯಿಲೆ ಗಳಿಂದ ನರಳಿ ಸಾಯುತ್ತಿದ್ದಾರೆ. ಒಂದು ಹೊಸ ಬಾಂಬರ್‌ಗೆ, ಟ್ಯಾಂಕ್ ಅಥವಾ ಸಬ್‌ಮೆರಿನ್ ನಿರ್ಮಾ ಣಕ್ಕೆ ತಗಲುವ ವೆಚ್ಚದಿಂದ ಹಲವು ಶಾಲೆಗಳನ್ನು, ಆಸ್ಪತ್ರೆಗಳು ಹಾಗೂ ಕಿಂಡರ್‌ಗಾರ್ಟನ್‌ಗಳನ್ನು ನಿರ್ಮಿಸ ಬಹುದು. ಹಸಿವು, ರೋಗರುಜಿನಗಳು, ನಿರುದ್ಯೋಗ ಹಾಗೂ ಅನಕ್ಷರತೆಯನ್ನು ತೊಡೆದುಹಾಕಲು ಪರಿಣಾಮ ಕಾರಿ ಕ್ರಮ ಕೈಗೊಳ್ಳಬಹುದು.

ಇವೆಲ್ಲ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೂ ಜಗತ್ತಿನಲ್ಲಿ ಸುರಕ್ಷಿತತೆ ಖಾತ್ರಿಗೊಳಿಸುವ ಕಾರ್ಯ ಭಾರಕ್ಕೂ ನಿಕಟ ಸಂಬಂಧವಿದೆ. ಶಸ್ತ್ರಾಸ್ತ್ರ ಪೈಪೋಟಿಯ ವೇಗ ತಗ್ಗಿದರೆ ಹಾಗೂ ಜಗತ್ತಿನಾದ್ಯಂತ ಮಿಲಿಟರಿ ಉದ್ದೇಶಗಳಿಗಾಗಿ ಆಗುತ್ತಿರುವ ವೆಚ್ಚ 2000ನೇ ಇಸವಿ ಯೊಳಗಾಗಿ ಕನಿಷ್ಠ ಪಕ್ಷ ಮೂರನೇ ಒಂದಂಶ ಕಮ್ಮಿ ಯಾದರೆ ತತ್ಪರಿಣಾಮವಾಗಿ ಜಾಗತಿಕ ರಂಗದಲ್ಲಿ ಒಟ್ಟು ಉತ್ಪಾದನೆ ಪ್ರಮಾಣ ಶೇಕಡಾ 3.7ರಷ್ಟು ಹೆಚ್ಚಳ ಸಾಧಿಸಲಿದೆ. ಕೃಷಿ ಉತ್ಪನ್ನ ಶೇಕಡಾ 4.6ರಷ್ಟು ಹೆಚ್ಚಳ ಸಾಧಿಸಲಿದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಉತ್ಪಾದನೆ ಮಟ್ಟ ಶೇಕಡಾ 10ರಿಂದ 14ರಷ್ಟು ವೃದ್ಧಿಸಲಿದೆ. ವಿಶ್ವಸಂಸ್ಥೆಯ ತಜ್ಞರ ಸಮೀಕ್ಷೆಯೊಂದರಿಂದ ಈ ಅಂಕಿ ಅಂಶಗಳನ್ನು ಎತ್ತಿಕೊಳ್ಳಲಾಗಿದೆ.

ಮಿಲಿಟರಿ ಕ್ಷೇತ್ರದಲ್ಲಾಗುವ ವೆಚ್ಚಗಳ ಯಾದಿ ಯಲ್ಲಿ ಪ್ರತಿ 100 ಬಿಲಿಯ ಡಾಲರ್ ಉಳಿತಾಯ ಮಾಡಿದರೆ ಆ ಹಣಕಾಸಿನಿಂದ 300 ಥರ್ಮಲ್ ವಿದ್ಯುತ್ ಸ್ಥಾವರ (ಪ್ರತಿಯೊಂದು 120,000 ಕಿಲೋ ವಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿ ರುವ)ಗಳು, 1600 ಸಕ್ಕರೆ ಉತ್ಪಾದನೆ ಕಾರ್ಖಾನೆ ಗಳನ್ನು ಅಥವಾ 1000 ರಾಸಾಯನಿಕ ರಸಗೊಬ್ಬರ ಕಾರ್ಖಾನೆಗಳನ್ನು ನಿರ್ಮಿಸಬಹುದು. ಏಶಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದ ಜನತೆಗೆ ಶುದ್ಧ ಕುಡಿಯುವ ನೀರು ಪೂರೈಸಲು ಕೇವಲ 3 ಬಿಲಿಯ ಡಾಲರ್ ವೆಚ್ಚ ತಗಲುವುದು. ಮಿಲಿಟರಿ ಕ್ಷೇತ್ರದಲ್ಲಿ ವಿನಿಯೋಗಿಸುವ ಖರ್ಚು ವೆಚ್ಚದಲ್ಲಿ ಕೇವಲ ಶೇಕಡಾ 0.5 ಅಂಶ ಅಭಿವೃದ್ಧಿಶೀಲ ದೇಶಗಳು 1990ನೇ ಇಸವಿಯ ಒಳಗಾಗಿ ಆಹಾರ ವಸ್ತುಗಳ ಬಗ್ಗೆ ಸ್ವಾವ ಲಂಬನೆ ಸಾಧಿಸಲು ಧಾರಾಳ ಸಾಲುತ್ತದೆ.

ಇವೆಲ್ಲ ಅಂಕಿ ಅಂಶಗಳ ಬಗ್ಗೆ ಯೋಚಿಸಿದಾಗ ಮಿಲಿಟರಿ ಕ್ಷೇತ್ರದಲ್ಲಿ ವೆಚ್ಚವನ್ನು ಗಣನೀಯವಾಗಿ ಕಮ್ಮಿ ಮಾಡುವ ಮೂಲಕ ಹಾಗೂ ಶಸ್ತ್ರಾಸ್ತ್ರಗಳ ಪ್ರಮಾಣ ವನ್ನು ಗುಣಾತ್ಮಕವಾಗಿಯೂ ಸಂಖ್ಯಾತ್ಮಕವಾಗಿಯೂ ತಗ್ಗಿಸುವುದರಿಂದ ಇಂದು ಜಗತ್ತಿನ ಹಲವು ರಾಷ್ಟ್ರಗಳು ಎದುರಿಸುತ್ತಿರುವ ಸಮಸ್ಯೆಗಳ ಕಗ್ಗಂಟನ್ನು ಬಿಡಿಸಲು ಧಾರಾಳ ಸಂಪನ್ಮೂಲಗಳು ಲಭಿಸುತ್ತವೆ.

("ಸೋವಿಯತ್ ಲೇಖನ ಮಾಲೆ"ಯಿಂದ)

## ಆಹಾರ – ಆರೋಗ್ಯ

# ಸಕಲ ರೋಗ ನಿವಾರಕ ಕ್ಯಾಬೇಜ್

ನಮ್ಮ ಭೂಮಂಡಲದಲ್ಲಿ ಸಸ್ಯಗಳು ಮೊತ್ತ ಮೊದಲು ಬೆಳೆಯಲು ಆರಂಭಿಸಿದಾಗಲೇ ಕ್ಯಾಬೇಜ್ ಸಸ್ಯವೂ ಆವಿರ್ಭವಿಸಿರಬೇಕು ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಕ್ಯಾಬೇಜ್ ಎಂಬ ಹೆಸರಿನ ಮೂಲ ಪ್ರಾಚೀನ ರೋಮ್‌ನಗರದ ಲ್ಯಾಟಿನ್ ಭಾಷೆಯಲ್ಲಿ ವ್ಯಕ್ತವಾಗಿದೆ. ಲ್ಯಾಟಿನ್‌ನ 'ಕಾಪುತ್' (ಅಂದರೆ ತಲೆ ಎಂದು ಅರ್ಥ) ಪದದಿಂದ ಕ್ಯಾಬೇಜ್ ಪದ ಉಗಮವಾಯಿತು. ಪ್ರಾಚೀನ ಕಾಲದಲ್ಲಿಯೂ ಕ್ಯಾಬೇಜ್ ಅನ್ನು ಖಾದ್ಯ ಪದಾರ್ಥವಾಗಿ ಮಾತ್ರವಲ್ಲ ಔಷಧಿಯಾಗಿಯೂ ಬಳಸುತ್ತಿದ್ದರು. ಕ್ಯಾಬೇಜ್‌ನಲ್ಲಿ ರೋಗ ವಾಸಿಮಾಡುವ ಶಕ್ತಿ ಅಂತರ್ಗತವಾಗಿದೆ ಎಂದು ವೈದ್ಯಕೀಯ ವಿಜ್ಞಾನದ ಪಿತಾಮಹ ಹಿಪೊಕ್ರೆಟಸ್, ತತ್ವಜ್ಞಾನಿ ಅರಿಸ್ಟಾಟಲ್, ಇತಿಹಾಸಕಾರ ಪ್ಲಿನಿ ಮುಂತಾದವರು ಅಭಿಪ್ರಾಯಪಟ್ಟಿದ್ದಾರೆ. ಪ್ರಾಚೀನ ರೋಮಿನ ಜನರು ತಲೆನೋವು ಹಾಗೂ ನಿದ್ರಾಹೀನತೆ ವ್ಯಾಧಿಯ ನಿವಾರಣೆಗೆ, ಹೆರಿಗೆ ಸಂದರ್ಭದಲ್ಲಿ ಮಹಿಳೆಯ ಯಾತನೆ ಉಪಶಮನಗೊಳಿಸಲು, ರಕ್ತಸ್ರಾವ ನಿಲ್ಲಿಸಲು ಕ್ಯಾಬೇಜ್ ಬಳಸುತ್ತಿದ್ದರು. ಕ್ಯಾಬೇಜ್‌ನಲ್ಲಿ ಅಸಾಧಾರಣ ಪಾಟ್ಟದಲ್ಲಿ ರೋಗ ಚಿಕಿತ್ಸಕ ಗುಣ ಅಡಗಿದೆ ಎಂದು ಪುರಾತನರ ಅಭಿಪ್ರಾಯವನ್ನು ಆಧುನಿಕ ಔಷಧ ವಿಜ್ಞಾನವೂ ಸಮರ್ಥಿಸುತ್ತದೆ. ಕ್ಯಾಬೇಜ್ ವಿಟಮಿನ್‌ಗಳಿಂದ ಸಮೃದ್ಧವಾಗಿದೆ. ಸೇಬಿನಲ್ಲಿರುವುದಕ್ಕಿಂತಲೂ ಅಧಿಕ ವಿಟಮಿನ್ ಸಿ ಆದರಲ್ಲಿ ಅಡಕವಾಗಿದೆ. ವಯಸ್ಕರು ಕೇವಲ 250 ಗ್ರಾಂ ಹಸಿ ಕ್ಯಾಬೇಜ್ ತಿಂದರೆ ಅವರಿಗೆ ಅಗತ್ಯವಾದಷ್ಟು ಸಿ ವಿಟಮಿನ್ ಆದರಲ್ಲಿ ಲಭಿಸುತ್ತದೆ.

ಕಾಬೇಜ್‌ನಲ್ಲಿ ಅಡಕವಾಗಿರುವ ಅತಿಸೂಕ್ಷ್ಮ ಪೌಷ್ಟಿಕ ಘಟಕಗಳು ಮೆಟಬಾಲಿಸಂ ಪ್ರಕ್ರಿಯೆಯನ್ನು (ಪೋಷಕದ್ರವ್ಯ ಜೀವಿಯ ದೇಹ ಭಾಗವಾಗಿ ಮಾರ್ಪಡುವುದು – ಜೀವದ್ರವ್ಯ ಪರಿಣಾಮಕ್ರಿಯೆ) ನಿಯಂತ್ರಿಸುತ್ತದೆ. ಎಳೆಯ ಮಗುವಿನ ಶರೀರದ ಬೆಳವಣಿಗೆಯಲ್ಲಿಯೂ ಹಸಿ ಕ್ಯಾಬೇಜ್ ಪ್ರಮುಖ ಪಾತ್ರ ವಹಿಸುತ್ತದೆ. ಕ್ಯಾಬೇಜ್‌ನಲ್ಲಿ ಅಡಕವಾಗಿರುವ ಕೆಲವು ಘಟಕಗಳು ಹೃದಯದ ರಕ್ತನಾಳಗಳ ಭಿತ್ತಿಗಳಲ್ಲಿ ತೇವ ಹಚ್ಚಿದಂತಹ ಆರೋಗ್ಯಕ್ಕೆ ಮಾರಕವಾದ ಕೊಬ್ಬಿನ ಸಂರಚನೆ ರೂಪುಗೊಳ್ಳುವುದನ್ನು ತಡೆಗಟ್ಟುತ್ತದೆ. ಪಿತ್ತಕೋಶದಲ್ಲಿ ಕಲ್ಲುಗಳು ಉಂಟಾಗುವ ವಿದ್ಯಮಾನವನ್ನು ತಡೆಗಟ್ಟುತ್ತದೆ.

ಕ್ಯಾಬೇಜ್‌ನಲ್ಲಿ ಅಡಕವಾಗಿರುವ ಹಸಿ ಸೆಲ್ಯುಲೋಸ್ ಆರೋಗ್ಯಕ್ಕೆ ತುಂಬ ಉಪಯುಕ್ತ. ಕ್ಯಾಬೇಜಿನ ಹಸಿರು ಸೊಪ್ಪು ವಿಟಮಿನ್‌ಗಳಿಂದ ಸಮೃದ್ಧವಾಗಿರುವುದರಿಂದ ರಕ್ತಹೀನತೆಯಿಂದ (ಅನೀಮಿಯಾ) ಬಳಲುವವರಿಗೆ ಅದು ತುಂಬ ಪ್ರಯೋಜನಕಾರಿಯಾಗಿದೆ. ರಕ್ತದಲ್ಲಿ, ನರಗಳ ಅಂಗಸತ್ವಗಳಲ್ಲಿ, ಪಿತ್ತಕೋಶದಲ್ಲಿ ಉತ್ಪನ್ನವಾಗುವ ಕೊಲೆಸ್ಟರಾಲ್ ಅನ್ನು ಅದು ನಿವಾರಿಸುತ್ತದೆ. ಆ ಮೂಲಕ ಹೃದಯದ ರಕ್ತನಾಳಗಳು ಪೆಡಸಾಗುವ ದಪ್ಪವಾಗುವ ಸಮಸ್ಯೆಯನ್ನು ನಿವಾರಿಸುತ್ತದೆ.

### ಟಾಟೋರ್ನಿಕ್ ಆಮ್ಲ

ಈಚೆಗೆ ಸಸ್ಯಶಾಸ್ತ್ರಜ್ಞರು ಕ್ಯಾಬೇಜ್‌ನಲ್ಲಿ ಇನ್ನೊಂದು ಪೌಷ್ಟಿಕಾಂಶವನ್ನು ಪತ್ತೆಹಚ್ಚಿದ್ದಾರೆ. ಅದರ ಹೆಸರು ಟಾಟೋರ್ನಿಕ್ ಆಮ್ಲ. ಈ ಆಮ್ಲವು ಸಕ್ಕರೆ ಮತ್ತು ಇತರ ಶರ್ಕರ ಪಿಷ್ಟಗಳು ಕೊಬ್ಬು ಆಗಿ ಪರಿವರ್ತನೆಯಾಗುವುದನ್ನು ತಡೆಗಟ್ಟುತ್ತದೆ. ಆದುದರಿಂದ ಬೊಜ್ಜು ಇಳಿಸಿಕೊಳ್ಳಲು ಬಯಸುವವರಿಗೆ ಕ್ಯಾಬೇಜ್ ತುಂಬ ಉಪಯುಕ್ತವಾಗಿದೆ. ನೀವು ತೆಳ್ಳಗಾಗಲು ಬಯಸುವಿರಾದರೆ ದಿನವೂ ಕೊಂಚ ಕ್ಯಾಬೇಜ್ ಸೂಪ್ ಕುಡಿಯು

ಬೇಕು. ಕ್ಯಾಬೇಜಿನ ಕ್ಯಾಲೊರಿ ಮೌಲ್ಯ ತೀರಾ ಕನಿಷ್ಠ ಮಟ್ಟದ್ದು (100 ಗ್ರ್ಯಾಮ್ ಕ್ಯಾಬೇಜ್ 30 ಕಿಲೊ ಕ್ಯಾಲೊರಿ ಮೌಲ್ಯ ಉಳ್ಳದ್ದಾಗಿದೆ.) ಬ್ರೆಡ್‌ನ ಕ್ಯಾಲೊರಿ ಮೌಲ್ಯಕ್ಕೆ ಹೋಲಿಸಿದರೆ ಇದು ತೀರಾ ಕಡಿಮೆ. ಉದಾಹರಣೆಯಾಗಿ ನೂರು ಗ್ರ್ಯಾಮ್ ಬ್ರೆಡ್ 240 ಕಿಲೋ ಕ್ಯಾಲೊರಿ ಮೌಲ್ಯವುಳ್ಳದ್ದಾಗಿದೆ).

ಕ್ಯಾಬೇಜ್‌ನ ಕ್ಯಾಲೊರಿ ಮೌಲ್ಯ ಕಮ್ಮಿಯಾಗಿದ್ದರೂ ಜೈವಿಕ ಮೌಲ್ಯ ಅಪರಿಮಿತ ಎನ್ನಬಹುದು.

ಕ್ಯಾಬೇಜ್ ರಸ ಹೊಟ್ಟೆನೋವು ಹಾಗೂ ಕರುಳಿನ ಹುಣ್ಣು ವಾಸಿಮಾಡಲು ಉತ್ತಮ ಔಷಧವಾಗಿದೆ ಎಂದು ವೈದ್ಯಕೀಯ ತಜ್ಞರು 1950ರ ದಶಕದಲ್ಲಿ ಪತ್ತೆಹಚ್ಚಿದರು. ಹಸಿ ಕ್ಯಾಬೇಜಿನಿಂದ ವಿಜ್ಞಾನಿಗಳು ಹುಣ್ಣು ನಿರೋಧಕ ಘಟಕ (ಅದನ್ನು ಅವರು ವಿಟಮಿನ್ "ಯು" ಎಂದು ಕರೆದಿದ್ದಾರೆ)ವನ್ನೂ ಪ್ರತ್ಯೇಕಗೊಳಿಸಿದ್ದಾರೆ.

ರೋಗ ವಾಸಿಮಾಡಬಲ್ಲ ಕ್ಯಾಬೇಜ್ ರಸ ತಯಾರಿಸಲು ಕ್ಯಾಬೇಜ್ ಎಲೆಗಳನ್ನು ರಸತೆಗೆಯುವ ಯಂತ್ರದಲ್ಲಿ ಹಾಕಬೇಕು. ಅನಂತರ ದೊರೆತ ರಸವನ್ನು ಉಗಿಯಲ್ಲಿ ಬಿಸಿಮಾಡಬೇಕು. ಹೀಗೆ ಸಿದ್ಧವಾದ ರಸವನ್ನು ಊಟಕ್ಕೆ ಮುನ್ನ ಇಪ್ಪತ್ತು ಅಥವಾ ಮೂವತ್ತು ನಿಮಿಷಗಳ ಮೊದಲು (100 ಗ್ರ್ಯಾಮ್‌ಗಳಷ್ಟು) ನಾಲ್ಕೈದು ಬಾರಿ ಕುಡಿಯಬೇಕು. ಈ ರಸವನ್ನು 2° ಸೆಲ್ಸಿಯಸ್ ಮೀರಿದ ಉಷ್ಣತೆಯಲ್ಲಿ ಯಾವತ್ತೂ ಇರಿಸಬಾರದು. 24 ತಾಸು ಅವಧಿಗಿಂತ ಹೆಚ್ಚುಕಾಲ ಅದನ್ನು ಇರಿಸಿಕೊಳ್ಳಬಾರದು. ಸುಮಾರು ಒಂದು ತಿಂಗಳ ಅವಧಿವರೆಗೆ ಕ್ಯಾಬೇಜ್ ರಸ ಚಿಕಿತ್ಸೆ ಮುಂದುವರಿಸಬೇಕು. ಆದರೆ ಜಠರದಲ್ಲಿ ಆಮ್ಲೀಯ ದುಸ್ಥಿತಿ ಎದುರಿಸುತ್ತಿರುವವರು ಕ್ಯಾಬೇಜ್ ರಸ ಕುಡಿಯಬಾರದು. ಏಕೆಂದರೆ ಈ ರಸ ಆಮ್ಲ ಶೇಖರಣೆಯನ್ನು ವೃದ್ಧಿಸುವ ಸಾಧ್ಯತೆಗಳಿವೆ. ಹೊಟ್ಟೆಹುಣ್ಣಿನಿಂದ ನರಳುವವರು ಕ್ಯಾಬೇಜ್ ರಸವನ್ನೇನೋ ಕುಡಿಯಬಹುದು ನಿಜ. ಆದರೆ ಹಸಿ ಕ್ಯಾಬೇಜ್ ತಿನ್ನಬಾರದು. ಆದರಿಂದ ತದ್ವಿರುದ್ಧ ಪರಿಣಾಮಗಳಾಗುವ ಸಾಧ್ಯತೆಗಳಿವೆ.

## ಶಕ್ತಿವರ್ಧಕ ಟಾನಿಕ್

ಕ್ಯಾಬೇಜ್‌ನಲ್ಲಿ ಬ್ಯಾಕ್ಟೀರಿಯಾ ನಿರೋಧಕ ಗುಣವೂ ಇದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಪ್ರಾಚೀನ ಕಾಲದಲ್ಲಿ ರಶ್ಯಾದಲ್ಲಿ ಮನೆಮದ್ದಾಗಿ ಕ್ಯಾಬೇಜ್ ಎಲೆಗಳನ್ನು ಬಳಸುವ ಪದ್ಧತಿ ಇದ್ದಿತು. ಮುಖ್ಯವಾಗಿ ಸುಟ್ಟಗಾಯ ವಾಸಿಮಾಡಲು ಅದು ತುಂಬ ಉಪಯುಕ್ತವೆಂದು ಕಂಡುಬಂದಿದೆ. ಕ್ಯಾಬೇಜ್‌ನ ಎಲೆಯನ್ನು ಜಜ್ಜಿ ತೆಗೆದು ರಸದೊಂದಿಗೆ ಮೊಟ್ಟೆಯ ಬಿಳಿ ಭಾಗವನ್ನು ಬೆರೆಸಿ ತಯಾರಿಸಿದ ಮುಲಾಮನ್ನು ಗಾಯಗಳಿಗೆ ಬಳಿಯುತ್ತಿದ್ದರು. ಬಿಸಿನೀರಿನಲ್ಲಿ ಕರಗಿಸಿದ ಕ್ಯಾಬೇಜ್ ರಸವನ್ನು ತಲೆಗೆ ಚೆನ್ನಾಗಿ ತಿಕ್ಕಿದರೆ ಸಮೃದ್ಧ ಕೂದಲು ಬೆಳೆಯಲೂ ಸಹಾಯಕವಾಗುತ್ತದೆ ಎಂಬ ಅಂಶ ದೃಢಪಟ್ಟಿದೆ.

ಹುಳಿ ಬರಿಸಿದ ಕ್ಯಾಬೇಜ್ ರಸವೂ ಉತ್ತಮ ಔಷಧಿಯಾಗಿದೆ. ಹುಳಿಬರಿಸಿದ ಕ್ಯಾಬೇಜ್ ರಸ ತಯಾರಿಸುವ ವಿಧಾನ ಹೀಗಿದೆ: ಮೊದಲು ಕ್ಯಾಬೇಜ್‌ನ ಜುಟ್ಟನ್ನು ಕತ್ತರಿಸಬೇಕು. ನಂತರ ಈ ಜುಟ್ಟುಗಳಿಗೆ ಕತ್ತರಿಸಿದ ಕ್ಯಾರೆಟ್, ಸೇಬುಹಣ್ಣಿನ ತುಣುಕುಗಳನ್ನು ಸೇರಿಸಬೇಕು. ಅನಂತರ ಅವುಗಳಿಗೆ ಉಪ್ಪುಬೆರೆಸಿ ಚೆನ್ನಾಗಿ ಅರೆಯಬೇಕು. ಈ ದ್ರಾವಣವನ್ನು ಭರಣಿಗಳಲ್ಲಿ ತುಂಬಿಸಿಡಬೇಕು. ದೀರ್ಘಕಾಲ ಬಾಳಿಕೆಗೆ ಅದರೊಂದಿಗೆ ಒಂದು ಮುಷ್ಟಿ ಕ್ರೇನ್‌ಬೆರಿ ಹಾಗೂ ಕೆಂಪು ಬಿಲ್‌ಬೆರಿ ಹಣ್ಣುಗಳನ್ನು ಸೇರಿಸಬೇಕು.

ಹುಳಿ ಬರಿಸಿದ ಕ್ಯಾಬೇಜ್‌ರಸ ಉತ್ತಮ ಶಕ್ತಿವರ್ಧಕ ಟಾನಿಕ್ ಆಗಬಲ್ಲುದು. ಜೀರ್ಣಕ್ರಿಯೆಗೆ ಅದು ಉತ್ತಮ. ಸಂಧಿವಾತ ರೋಗ, ರಕ್ತದ ಒತ್ತಡ, ಮಲವಿಸರ್ಜನೆಯಲ್ಲಿ ತೊಡಕು ಮುಂತಾದುವನ್ನು ನಿವಾರಿಸಿಕೊಳ್ಳಲು ಅದು ತುಂಬಾ ಉಪಯುಕ್ತ ಔಷಧಿ ಎಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

(ಕೃಪೆ : ಸ್ಪುಟ್ನಿಕ್)

## ಪ್ರಕೃತಿ ವೈಚಿತ್ರ್ಯ

# ನಿರ್ಲಿಂಗ ಜನನ

ಸ್ತ್ರೀ ಪುರುಷ ಸಂಬಂಧವಿಲ್ಲದೆ ಆಗುವ "ಪಾರ್ತೆನೊಜೆನೆನಿಸ್" (ನಿರ್ಲಿಂಗಜನನ) ಪರಿಕಲ್ಪನೆಯ ಕುರಿತು ಜೀವವಿಜ್ಞಾನಿಗಳು ಈಚೆಗೆ ಚಿಂತಿಸುತ್ತಿದ್ದಾರೆ. ಸ್ತ್ರೀ ಅಂಡಾಣುವನ್ನು ಕೆಲವೊಂದು ನಿರ್ದಿಷ್ಟ ಭೌತಿಕ–ರಾಸಾಯನಿಕ ಪ್ರಭಾವಕ್ಕೆ ಒಳಗಾಗುವಂತೆ ಮಾಡಿದರೆ ಅದು ತನ್ನಷ್ಟಕ್ಕೆ ಒಡೆದು ಚೂರಾಗುತ್ತದೆ. ಕ್ರಮೇಣ ಹೊಸ ಅಂಗಭಾಗವಾಗಿ ಬೆಳೆಯುತ್ತದೆ. ಹೀಗೆ ಗರ್ಭ ಧಾರಣೆ ಇಲ್ಲದೆಯೇ ಹೊಸ ಜೀವದ ಹುಟ್ಟು ಸಾಧ್ಯವೇ ಎಂಬ ಈ ಪರಿಕಲ್ಪನೆಯನ್ನು ಸರೀಸೃಪಗಳು, ಹಕ್ಕಿಗಳು ಹಾಗೂ ನೀರಿನಲ್ಲೂ ನೆಲದಲ್ಲೂ ವಾಸಿಸುವ ಜೀವಿಗಳ ಮೇಲೆ ಪ್ರಯೋಗಿಸಿ ಪರಿಶೀಲಿಸಲಾಗಿದೆ. ಈ ನಿಟ್ಟಿನಲ್ಲಿ ಭರವಸೆದಾಯಕ ಸಾಧನೆ ವ್ಯಕ್ತವಾಗಿದೆ. ಆದರೆ ಸಸ್ತನಿಗಳಲ್ಲಿ ಈ ವರೆಗೆ ಇಂತಹ ಪ್ರಯೋಗ ಯಶಸ್ವಿಯಾಗಿಲ್ಲ.

ಉದಾಹರಣೆಯಾಗಿ ಮೇರಿ ಕನ್ನಿಕೆಯ ಪ್ರಸಂಗವನ್ನು ಪ್ರಸ್ತಾಪಿಸಬಹುದು. ಹಸಿವು, ಭಾವನಾತ್ಮಕ ತುಮುಲ, ಹಾಗೂ ಇತರ ಕೆಲವು ಕಾರಣಗಳಿಂದಾಗಿ ಮೇರಿಯ ಶಾರೀರಿಕ ಪರಿಸ್ಥಿತಿ ಅಸ್ತವ್ಯಸ್ತವಾಗಿರಬಹುದು. ಪರಿಣಾಮವಾಗಿ ಗಂಡಿನ ಸಂಪರ್ಕವೇ ಇಲ್ಲದೆ ಆಕೆ ಗರ್ಭಧರಿಸಿದಳು. ಗಂಡು ಹೆಣ್ಣಿನ ಸಂಪರ್ಕವೇ ಇಲ್ಲದೆ ನಿರ್ಲಿಂಗಜನನ ಅಥವಾ ಜೀವೋತ್ಪತ್ತಿಯಲ್ಲಿ ಸಾಮಾನ್ಯವಾಗಿ ಹುಟ್ಟುವುದು ಹೆಣ್ಣು ಜೀವವೇ ಹೊರತು ಗಂಡಲ್ಲ ಎಂಬುದು ವೈಜ್ಞಾನಿಕ ಸಾಕ್ಷ್ಯಾಧಾರಗಳಿಂದ ದೃಢವಾಗಿದೆ. ಗಂಡು ಮಗುವಿನ ಜನನಕ್ಕೆ ಅಗತ್ಯವಾಗಿರುವ "ಯುಕ್ರೊ"ಮೊಸೋಮೋಮುಗಳನ್ನು ಹೆಣ್ಣು ಸ್ವತಃ ತನ್ನ ಶರೀರದಿಂದಲೇ ಒದಗಿಸಲು ಸಾಧ್ಯವಿಲ್ಲ.

ಒಟ್ಟಿನಲ್ಲಿ ಇಂತಹ ಜೀವೋತ್ಪತ್ತಿಯ ಪರಿಕಲ್ಪನೆ ಕುರಿತು ನಾವು ತಿಳಿದಿರುವುದು ತೀರಾ ಅಲ್ಪ.

(ಕೃಪೆ: ಸ್ಪುಟ್ನಿಕ್)

## 'ನಾಗರಿಕತೆ'ಗೆ ತಿಲಾಂಜಲಿ

# ಮಿನಿ ಒಲ್ಲದ ಲಲನೆಯರು

ಅಕ್ಷರಶಃ ಇದನ್ನು ಬಂಡಾಯವೆನ್ನುವಂತಿಲ್ಲವಾದರೂ ಕನಿಷ್ಠ ಅಮೆರಿಕದ ಉದ್ಯೋಗಸ್ಥ ಮಹಿಳೆಯರಾದರೂ ಈಗ ಮಿನಿ ಸ್ಕರ್ಟ್ ವಿರುದ್ಧ ದನಿಯೆತ್ತಲಾರಂಭಿಸಿದ್ದಾರೆ. ಯುರೋಪಿನ ಐದು ಪ್ರಮುಖ ಉಡುಪು ವಿನ್ಯಾಸ ಸಂಸ್ಥೆಗಳು ಮತ್ತು ಅಮೆರಿಕದ ಐದು ಪ್ರಮುಖ ಉಡುಪು ವಿನ್ಯಾಸಕಾರರು ಕಾಲ ಮೊಣಗಂಟಿನಿಂದ ಸ್ವಲ್ಪ ಮೇಲಿನಿಂದ ಹಿಡಿದು ತೊಡೆಯಿಂದಲೂ ಮೇಲಕ್ಕೆ ತೊಡುವ ವೈವಿಧ್ಯಮಯ ಮಿನಿಗಳನ್ನು ಕಳೆದ ವರ್ಷ ಭಾರೀ ಪ್ರಚಾರದ ಗದ್ದಲದ ನಡುವೆ ಮಾರುಕಟ್ಟೆಗೆ ಬಿಡುಗಡೆಗೊಳಿಸಿದ ಬಳಿಕ ಅವು ಲಂಡನ್, ಪ್ಯಾರಿಸ್, ರೋಮ್‌ಗಳಲ್ಲಿ ಕನ್ಯಾಮಣಿಗಳ ಒಲುಮೆಗೆ ಪಾತ್ರವಾದುವಾದರೂ ಅಮೆರಿಕದ ಉದ್ಯೋಗಸ್ಥ ಮಹಿಳೆಯರು ಇವುಗಳ ಬಗ್ಗೆ ರೇಜಿಗೆ ವ್ಯಕ್ತಪಡಿಸಿದ್ದಾರೆ. ಜೀವನದಲ್ಲಿ ಮಹತ್ತನ್ನು ಸಾಧಿಸುವ ತಮ್ಮ ಗಂಭೀರ ಸ್ವಭಾವಕ್ಕೆ ಈ ಪಾತರಗಿತ್ತಿ ಉಡುಪುಗಳು ಹೊಂದುವುದಿಲ್ಲ. ಇವೆಲ್ಲ ಪುರುಷ ಪ್ರಧಾನ ವಿನ್ಯಾಸ ಸಂಸ್ಥೆಗಳ ಕರಾಮತ್ತು ಎಂದು ಮಿನಿಗಳನ್ನು ಅವರು ಎಡಗಾಲಿನಿಂದ ಒದ್ದುಬಿಟ್ಟಿದ್ದಾರೆ. ಅಮೆರಿಕದ ಎಲ್ಲಾ ಪ್ರಮುಖ ನಗರಗಳಲ್ಲಿ ಮಿನಿಗಳಿಗೆ ಬೇಡಿಕೆ ಈಗ ಕುಂದುತ್ತಿದೆ. ಇದರ ಪರಿಣಾಮ ಯುರೋಪಿನಲ್ಲೂ ಪ್ರತಿಫಲಿಸಲಾರಂಭಿಸಿದೆ. ಹೊಸ ವಿನ್ಯಾಸಗಳ ಬಿಡುಗಡೆಯಲ್ಲಿ ಮಿನಿಗಳ ಸಂಖ್ಯೆ ಈಗ ಭಾರೀ ಕಡಿಮೆಯಾಗುತ್ತಿದೆ.

(ಉದಯವಾಣಿ, ಏಪ್ರಿಲ್ 14, 1988)

# * ಅಹ್ಮದಿಯಾ ವಾರ್ತೆಗಳು *

## ರಾಷ್ಟ್ರಪತಿಯವರಿಗೆ ಖುರ್‌ಆನ್ ಹಿಂದಿ ಭಾಷಾಂತರದ ಉಡುಗೊರೆ



A delegation of Muslim leaders presented a copy of the Hindi version of Holy Quran to the President, R. Venkataraman in New Delhi on February 18

(ಫೋಟೊ ಕೃಪೆ: Competition Success Review–
GENERAL KNOWLEDGE TODAY, APRIL, 1988)

ಕಳೆದ ಫೆಬ್ರುವರಿ 18ರಂದು ಕೇಂದ್ರ ಅಹ್ಮದಿಯಾ ನಿಯೋಗವೊಂದು ರಾಷ್ಟ್ರಪತಿ ಶ್ರೀ ವೆಂಕಟರಾಮನರನ್ನು ಭೇಟಿಯಾಗಿ ಅಹ್ಮದಿಯಾ ಸಂಘಟನೆಯ ವತಿಯಿಂದ ಪ್ರಕಟವಾದ ಖುರ್‌ಆನಿನ ಹಿಂದಿ ಭಾಷಾಂತರವನ್ನು ಪಾರಿತೋಷಕವಾಗಿ ನೀಡಿತು. ನಿಯೋಗದಲ್ಲಿ ಶೇಖ್ ಅಬ್ದುಲ್ ಹಮೀದ್ ಸಾಹೇಬ್ ಆಜಿರ್ಝ್, ಮಲಿಕ್ ಸಲಾಹುದ್ದೀನ್ ಸಾಹೇಬ್ ಎಂ. ಎ., ಸಯ್ಯದ್ ಫಝ್ಲುಲ್ ಅಹ್ಮದ್ ಸಾಹೇಬ್ ಪಟ್ನಾ, ಮೌಲಾನ ಬಶೀರ್ ಅಹ್ಮದ್ ಸಾಹೇಬ್ ದೆಹ್ಲವಿ ಮತ್ತು ಮುನೀರ್ ಅಹ್ಮದ್ ಸಾಹೇಬ್ ಎಂ. ಎ. ಎಂಬವರು ಇದ್ದರು.

ನಿಯೋಗದ ಮುಖಂಡ ಶೇಖ್ ಅಬ್ದುಲ್ ಹಮೀದ್ ಸಾಹೇಬರು ಅಹ್ಮದಿಯಾ ಜಮಾಅತಿನ ಪರವಾಗಿ ಖುರ್‌ಆನ್ ಭಾಷಾಂತರವನ್ನು ರಾಷ್ಟ್ರಪತಿಯವರಿಗೆ ನೀಡಿದಾಗ ಅವರು ಎದ್ದುನಿಂತು ಆದರಪೂರ್ವಕವಾಗಿ ಅದನ್ನು ಸ್ವೀಕರಿಸಿದರು. ಸುಮಾರು ಒಂದು ಡಜನ್ ಭಾಷೆಗಳಲ್ಲಿ ಈಗಾಗಲೇ ಅಹ್ಮದಿಯಾ ಸಂಘಟನೆಯ ವತಿಯಿಂದ ಖುರ್‌ಆನ್ ಭಾಷಾಂತರಗೊಂಡಿರುವುದೆಂದೂ ಇನ್ನೂ ಅನೇಕ ಭಾಷೆಗಳಲ್ಲಿ ಖುರ್‌ಆನಿನ ತರ್ಜುಮೆ ಸಿದ್ಧಗೊಳ್ಳುತ್ತಿದೆಂದೂ ರಾಷ್ಟ್ರಪತಿಗೆ ತಿಳಿಸಲಾಯಿತು. ಕೋಮುಸೌಹಾರ್ದವನ್ನು ಕಾಪಾಡುವ ಕಾರ್ಯದಲ್ಲಿ ಅಹ್ಮದಿಯಾ ಸಂಘಟನೆಯು ವಹಿಸುತ್ತಿರುವ ಪಾತ್ರವೇನೆಂದು ಅವರಿಗೆ ತಿಳಿಸಲಾಯಿತು.

## ಫಿಜಿಯಲ್ಲಿ 18ನೇ ವಾರ್ಷಿಕ ಸಮ್ಮೇಳನ

ಫಿಜಿಯ ರಾಜಧಾನಿ ಸುವಾದಲ್ಲಿ ಕಳೆದ ಡಿಸೆಂಬರ್ 25 ಮತ್ತು 26ರಂದು ಅಹ್ಮದಿಯಾ ಜಮಾಅತಿನ 18ನೇ ವಾರ್ಷಿಕ ಸಮ್ಮೇಳನವು ವಿಜಯಕರವಾಗಿ ಸಮಾವೇಶಗೊಂಡಿತು.

ಎರಡೂ ದಿನಗಳಲ್ಲೂ ಪ್ರಾತಃಕಾಲದಿಂದಲೇ ಮಸ್ಜಿದ್ ಫರ್ಝುಲೆ ಉಮರ್ ವಠಾರದಲ್ಲಿ ಸ್ಥಳೀಯ ಅಹ್ಮದಿಯಾ ಮಿಶನರಿ ಅಬ್ದುಲ್ ಅರಿಝೀರ್ಝ್ ಶಾಹಿದ್ ಸಾಹೇಬರ ಅಧ್ಯಕ್ಷತೆಯಲ್ಲಿ ಅಧಿವೇಶನಗಳು ಪ್ರಾರಂಭವಾದುವು.

ವಿವಿಧ ಧಾರ್ಮಿಕ ವಿಷಯಗಳ ಬಗ್ಗೆ ಅಹ್ಮದಿಯಾ ವಿದ್ವಾಂಸರು ಭಾಷಣಮಾಡಿದರು.

## ಇಂಗ್ಲೆಂಡ್‌ನಲ್ಲಿ ಪೈಗಂಬರರ ದಿನಾಚರಣೆ

ಕಳೆದ ಜನವರಿ 16ರಂದು ಹನ್‌ಸ್ಲೊ ಅಹ್ಮದಿಯಾ ಸಂಘಟನೆಯ ವತಿಯಿಂದ ಹೀತ್‌ಲೇಂಡ್ ಸ್ಕೂಲಿನ ಹಾಲ್‌ನಲ್ಲಿ ಪೈಗಂಬರರ ದಿನಾಚರಣಾ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಬ್ರಿಟನಿನ ಅಹ್ಮದಿಯಾ ನೇಶನಲ್ ಪ್ರೆಸಿಡೆಂಟ್ ಆಫ್ತಾಬ್ ಅಹ್ಮದ್ ಖಾನ್ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು.

ಜ। ಇಸ್ಮಾಈಲ್ ಆಡ್ಜೋ ಸಾಹೇಬ್ (ಇಥಿಯೋಪಿಯಾ), ಮಿ। ಜಾನ್ ಕೊನೆಲ್ಲಿ (ಡೆಪ್ಯುಟಿ ಲೀಡರ್ ಓಫ್ ಲೋಕಲ್ ಕೌನ್ಸಿಲ್), ಮಿ। ಪೆಟ್ರಿಕ್ ಗ್ರೌಂಡ್ (ಪಾರ್ಲಿಮೆಂಟ್ ಮೆಂಬರ್), ಜ। ಬಶೀರ್ ಅಹ್ಮದ್ ಸಾಹೇಬ್ ರಫೀಕ್ (ಮಾಜಿ ಇಮಾಂ, ಮಸ್ಜಿದ್ ಫಝ್ಲ್, ಲಂಡನ್), ಮಿ। ಜೆ. ಶರ್ಮಾ (ಮಾಜಿ ಮೇಯರ್ ಹನ್‌ಸ್ಲೊ), ಮಿ। ಇಂದರ್ ಸಿಂಘ್ ಉಪಲ್ (ಸೀನಿಯರ್ ಕಮ್ಯುನಿಟಿ ರಿಲೇಶನ್ಸ್ ಆಫೀಸರ್), ಜ। ಅತಾಉಲ್ ಮುಜೀಬ್ ರಾಶಿದ್ ಸಾಹೇಬ್ (ಅಹ್ಮದಿಯಾ ಮಿಶನರಿ ಹಾಗೂ ಇಮಾಂ ಮಸ್ಜಿದ್ ಫಝ್ಲ್, ಲಂಡನ್) ಮೊದಲಾದವರು ಮುಹಮ್ಮದ್ ಪೈಗಂಬರರ ಜೀವನದ ವಿವಿಧ ಘಟನೆಗಳ ಬಗ್ಗೆ ಭಾಷಣಮಾಡಿದರು.

## ಕಲ್ಕತ್ತಾ ಪುಸ್ತಕ ಪ್ರದರ್ಶನದಲ್ಲಿ ಬುಕ್‌ಸ್ಟಾಲ್

ಕಲ್ಕತ್ತಾದ ಪಬ್ಲಿಷರ್ಸ್ ಆ್ಯಂಡ್ ಬುಕ್ ಸೆಲ್ಲರ್ಸ್ ಗಿಲ್ಡ್ ವತಿಯಿಂದ ಕಳೆದ ಹನ್ನೆರಡು ವರ್ಷಗಳಿಂದ ಏರ್ಪಡಿಸುತ್ತಿರುವ ಬೃಹತ್ ಪುಸ್ತಕ ಪ್ರದರ್ಶನವು ಕಳೆದ ಫೆಬ್ರವರಿ 27ರಿಂದ ಮಾರ್ಚ್ 7ರ ವರೆಗೆ ನಡೆಯಿತು. ಅಮೇರಿಕ, ರಶ್ಯಾ, ಜರ್ಮನಿ, ಬ್ರಿಟನ್, ಬಂಗ್ಲಾದೇಶ ಮೊದಲಾದ ದೇಶಗಳ ಪ್ರಕಾಶಕರು ಸಹ ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಕಳೆದ ಹನ್ನೊಂದು ವರ್ಷಗಳಿಂದಲೂ ಅಹ್ಮದಿಯಾ ಸಂಘಟನೆಯು ಈ ಪ್ರದರ್ಶನದಲ್ಲಿ ಭಾಗವಹಿಸುತ್ತಿದೆ. ಬೆಲೆಬಾಳುವ ಪುಸ್ತಕಗಳಲ್ಲದೆ, ಇಂಗ್ಲಿಷ್, ಹಿಂದಿ, ಉರ್ದು, ಬಂಗಾಳಿ ಮೊದಲಾದ ಭಾಷೆಗಳಲ್ಲಿ ಪ್ರಕಟಿಸಲಾದ ಸಾವಿರಾರು ಕಿರುಹೊತ್ತಗೆಗಳನ್ನೂ ವಿತರಿಸಲಾಯಿತು.

ವಿದ್ಯಾರ್ಥಿ ವಿದ್ಯಾರ್ಥಿನಿಯರ ಹೊರತು ಸುಮಾರು 20 ಲಕ್ಷ ಮಂದಿ ಈ ಪ್ರದರ್ಶನಕ್ಕೆ ಭೇಟಿ ನೀಡಿದ್ದಾರೆಂದು ಅಂದಾಜು ಮಾಡಲಾಗಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಉಚಿತ ಪ್ರವೇಶವಿತ್ತು.

## ಶೌರತ್‌ನಲ್ಲಿ "ತಾಹಿರ್ ಲೈಬ್ರರಿ" ಸ್ಥಾಪನೆ

ಕಾಶ್ಮೀರದ ಶೌರತ್‌ನಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಸ್ಥಾಪಿಸಲಾದ "ತಾಹಿರ್ ಲೈಬ್ರರಿ"ಯನ್ನು ಕಳೆದ ಜನವರಿ 8ರಂದು ಸ್ಥಳೀಯ ಮಿಶನರಿ ಮೌಲವಿ ಮಲಿಕ್ ಮುಹಮ್ಮದ್ ಮಕ್ಬೂಲ್ ಸಾಹೇಬ್ ಉದ್ಘಾಟಿಸಿದರು.

## ಧರ್ಮಸೇವೆಗಾಗಿ ಅಹ್ಮದಿಯಾ ಮಿಶನರಿಗೆ ಬಹುಮಾನ

ಹೈದರಾಬಾದಿನ ಅಹ್ಮದಿಯಾ ಮಿಶನರಿ ಮೌಲವಿ ಹಮೀದುದ್ದೀನ್ ಸಾಹೇಬ್ ಶಮ್ಸ್‌ರವರು ಆಂಧ್ರ ಪ್ರದೇಶದ ವಿವಿಧ ಕಡೆಗಳಲ್ಲಿ ಗೈದ ಧರ್ಮಸೇವೆಯನ್ನು ಗುರುತಿಸಿ ಅವರಿಗೆ "ಫ್ರೀ ಪ್ರೆಸ್ ಎಡಿಟರ್ಸ್ ಫೆಡರೇಶನ್, ಹೈದರಾಬಾದ್" ಎಂಬ ಸಂಸ್ಥೆಯು ಕಳೆದ ಫೆಬ್ರವರಿ 27ರಂದು ಬಹುಮಾನವನ್ನು ನೀಡಿ ಗೌರವಿಸಿದೆ.

# ವಾಣಿಯಂಬಲದಲ್ಲಿ ಕೇರಳ ರಾಜ್ಯ ಅಹ್ಮದಿಯಾ ವಾರ್ಷಿಕ ಸಮ್ಮೇಳನ

ಕೇರಳ ರಾಜ್ಯ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಕಳೆದ ಫೆಬ್ರವರಿ 27 ಮತ್ತು 28ರಂದು ಮಲಪ್ಪುರ ಜಿಲ್ಲೆಯ ವಾಣಿಯಂಬಲದ "ಇಮಾಂ ಮಹ್‌ದಿ ನಗರ"ದಲ್ಲಿ ಜರಗಿತು.

27ರಂದು ಸಂಜೆ 5–30 ಗಂಟೆಗೆ ಅಹ್ಮದಿಯಾ ಜಮಾಅತಿನ ಸ್ಥಾಪಕರ ಮೊಮ್ಮಗ ಹಾಗೂ ಭಾರತದ ಪ್ರಧಾನ ಕಾರ್ಯದರ್ಶಿಯವರಾದ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಸಮ್ಮೇಳನವನ್ನು ಉದ್ಘಾಟಿಸಿದರು.

ಪವಿತ್ರ ಖುರ್‌ಆನ್ ಸಾರುವ ಮಹತ್ತಾದ ಅಧ್ಯಾಪನಗಳನ್ನು ಲೋಕದ ಎಲ್ಲೆಡೆಗೂ ಹರಡಿಸುವ ಕರ್ತವ್ಯವನ್ನು ಅಹ್ಮದಿಯಾ ಜಮಾಅತ್ ವಹಿಸಿಕೊಂಡಿದೆ ಎಂದು ಅವರು ಹೇಳಿದರು. **ಪವಿತ್ರ ಖುರ್ ಆನಿನಲ್ಲಿ ದುರ್ಬಲವಾದ ಒಂದೇ ಒಂದು ವಚನವಿಲ್ಲ**ವೆಂದು ಅವರು ಸಾರಿದರು. ಸಮತ್ವ ಸುಂದರವಾದ ಇಸ್ಲಾಮಿಕ ಆದರ್ಶದ ಮೂಲಕ ಸಮಾಧಾನ ಮತ್ತು ಶಾಂತಿಯನ್ನು ಲೋಕದಲ್ಲಿ ಸ್ಥಾಪಿಸಲಿಕ್ಕೋಸ್ಕರ ಅಹ್ಮದಿಯಾ ಸಂಘಟನೆ ಗೈಯುತ್ತಿರುವ ಯತ್ನದಲ್ಲಿ ಭಾಗವಹಿಸಲು ಅವರು ಜನರಿಗೆ ಕರೆನೀಡಿದರು.

ಕೇರಳ ಅಹ್ಮದಿಯಾ ಅಮೀರ್ ಜನಾಬ್ ಅಮೀರ್ ಅಲಿ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು. ಎಂ. ಅಬ್ದುಲ್ ಲತೀಫ್ ಸಾಹೇಬರ ಖುರ್‌ಆನ್ ಪಾರಾಯಣದೊಂದಿಗೆ ಅಧಿವೇಶನವು ಆರಂಭಗೊಂಡಿತ್ತು. ಮೌಲವಿ ಮುಹಮ್ಮದ್ ಇಸ್ಮಾಈಲ್ ಸಾಹೇಬ್ (ಆಲೆಪ್ಪಿ), ಎನ್. ಅಬ್ದುರ್ರಹೀಂ ಸಾಹೇಬ್ (ಮಾತೃಭೂಮಿ) ಮೊದಲಾದವರು ಭಾಷಣ ಮಾಡಿದರು.

ಎರಡನೇ ದಿನದ ಅಧಿವೇಶನವು ಮೌಲವಿ ಮುಹಮ್ಮದ್ ಅಬುಲ್ ವಫಾ ಸಾಹೇಬ್ (ಚೀಫ್ ಮಿಶನರಿ, ಕೇರಳ) ಅವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಎಂ. ಅಬ್ದುಲ್ ರಹ್ಮಾನ್ ಸಾಹೇಬ್ (ಕೇರಳ ಕೌಮುದಿ), ಮೌಲವಿ ಮುಹಮ್ಮದ್ ಉಮರ್ ಸಾಹೇಬ್ (ಮಿಶನರಿ, ಮದ್ರಾಸ್), ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾವುದ್ದೀನ್ ಸಾಹೇಬ್ (ಉಸ್ಮಾನಿಯಾ ವಿಶ್ವವಿದ್ಯಾಲಯದ ಖಗೋಳ ಶಾಸ್ತ್ರ ಮುಖ್ಯಸ್ಥ) ಮೊದಲಾದವರು ಭಾಷಣಮಾಡಿದರು. ಕೇರಳ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಂ. ಆಲಿಕೋಯ ಸಾಹೇಬ್ ಕೃತಜ್ಞತೆ ಸಲ್ಲಿಸಿದರು.

## "ಫಝ್ಲ್ ಮಸ್ಜಿದ್" ಉದ್ಘಾಟನೆ

ಮಲಪ್ಪುರ ಜಿಲ್ಲೆಯ ವಾಣಿಯಂಬಲದಲ್ಲಿ ಕಳೆದ ಫೆಬ್ರವರಿ 27ರಂದು ಮಧ್ಯಾಹ್ನ ಅಹ್ಮದಿಯಾ ಮಸೀದಿ "ಫಝ್ಲ್ ಮಸ್ಜಿದ್" ಅನ್ನು ಅಹ್ಮದಿಯಾ ಜಮಾಅತಿನ ಸ್ಥಾಪಕರ ಪೌತ್ರ ಹಾಗೂ ಭಾರತದ ಅಹ್ಮದಿಯಾ ಪ್ರಧಾನ ಕಾರ್ಯದರ್ಶಿ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಉದ್ಘಾಟಿಸಿದರು.

ಪಾಕಿಸ್ತಾನದ ಮಿಲಿಟರಿ ಆಡಳಿತೆ ಮತ್ತು ಯಾಥಾಸ್ಥಿತಿಕ ಮುಸ್ಲಿಮರು ಇಸ್ಲಾಮಿನ ಹೆಸರಿನಲ್ಲಿ ಆರಾಧನಾಲಯಗಳಾದ ಅಹ್ಮದಿಯಾ ಮಸೀದಿಗಳನ್ನು ನಿರ್ಮೂಲನ ಮಾಡುವಾಗ ಅಹ್ಮದಿಯರು ಲೋಕದ ಮೂಲೆ ಮೂಲೆಗಳಲ್ಲಿ ಅಲ್ಲಾಹನ ಮಹತ್ವವನ್ನು ಪ್ರಕೀರ್ತನ ಮಾಡುವ ಮಸೀದಿಗಳನ್ನು ನಿರ್ಮಿಸುತ್ತಿದ್ದಾರೆಂದು ಮಿರ್ಝಾ ವಸೀಂ ಅಹ್ಮದ್ ಸಾಹೇಬರು ತನ್ನ ಭಾಷಣದಲ್ಲಿ ನುಡಿದರು. ಇಂದಿಲ್ಲಿ ಉದ್ಘಾಟಿಸಲ್ಪಟ್ಟ ಫಝ್ಲ್ ಮಸ್ಜಿದಿನ ಬಾಗಿಲುಗಳು ಏಕದೇವೋಪಾಸನೆಗೋಸ್ಕರ ಎಲ್ಲರಿಗೂ ತೆಗೆದಿರಿಸಲಾಗಿದೆಯೆಂದು ಅವರು ಸಾರಿದರು.

ಈ ಮಸೀದಿ ನಿರ್ಮಾಣದ ಪೂರ್ಣವ್ಯಯವನ್ನು ಜ| ಸಿ. ಕೆ. ಅಲವಿ ಸಾಹೇಬ್ ಮತ್ತು ಅವರ ಕುಟುಂಬ ಸದಸ್ಯರು ವಹಿಸಿಕೊಂಡಿದ್ದಾರೆ.

## ಪಾಕಿಸ್ತಾನದಲ್ಲಿ ಅಹ್ಮದಿಯಾ ವಿರುದ್ಧ ವಿಶೇಷಾಜ್ಞೆಯನ್ನು ರದ್ದುಪಡಿಸಲು ಮಾನವ ಹಕ್ಕು ಸಮಿತಿಯ ಮನವಿ

ಪಾಕಿಸ್ತಾನದ ಮಾನವ ಹಕ್ಕು ಸಮಿತಿಯು ಕಳೆದ ಮಾರ್ಚ್ 25ರಂದು ಕರಾಚಿಯಲ್ಲಿ ಸೇರಿದ್ದ ವಾರ್ಷಿಕ ಮಹಾಸಭೆಯಲ್ಲಿ, ಪಾಕಿಸ್ತಾನದಲ್ಲಿ ಮಾನವ ಹಕ್ಕುಗಳ ಪರಿಸ್ಥಿತಿಯ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿತು. ನಿವೃತ್ತ ನ್ಯಾಯಾಧಿಪತಿ ಡೋರಬ್ ಪಟೇಲ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

1984 ಎಪ್ರಿಲ್ ತಿಂಗಳಲ್ಲಿ ವಿಧಿಸಲಾಗಿದ್ದ ಅಹ್ಮದಿಯಾ ವಿರುದ್ಧ ವಿಶೇಷಾಜ್ಞೆಯನ್ನು ರದ್ದುಗೊಳಿಸ ಬೇಕೆಂದು ಸರಕಾರವನ್ನು ಕೋರುವ ಠರಾವೊಂದನ್ನು ಸಭೆಯಲ್ಲಿ ಅಂಗೀಕರಿಸಲಾಯಿತು.

ಝಿಯಾ ಮಿಲಿಟರಿ ಸರಕಾರ ಹೊರಡಿಸಿದ ಆ ವಿಶೇಷಾಜ್ಞೆಯ ಪ್ರಕಾರ ಯಾವನೇ ಅಹ್ಮದಿಯು **ಕಲಿಮಃ, ಅಝಾನ್, ಸಲಾಂ ಮೂಲಕ ಅಥವಾ ಬೇರೆ** ಯಾವುದೇ ರೀತಿಯಲ್ಲಿ ತಾನು ಮುಸ್ಲಿಮನೆಂದು ತೋರ್ಪಡಿಸಿದಲ್ಲಿ ಮೂರು ವರ್ಷಗಳ ಸೆರೆಮನೆ ವಾಸ ಮತ್ತು ಜುಲ್ಮಾನೆಯಿಂದ ದಂಡಿಸಲಾಗುವುದು!

### ಓದಿದ್ದು.......!!

"ನನಗೆ ದಣಿವೆನಿಸಿದಾಗ ನಾನು ಮನೆಗೆ ಹೋಗಿ ಭಾರತೀಯ ಚಲಚಿತ್ರಗಳನ್ನು ವೀಕ್ಷಿಸು ತ್ತೇನೆ. ಅದು ನನಗೆ ಮನಶ್ಶಾಂತಿಯನ್ನು ನೀಡು ತ್ತದೆ."

—ಪಾಕಿಸ್ತಾನದ ಅಧ್ಯಕ್ಷ ಝಿಯಾಉಲ್‌ಹಕ್
(ಇಂಡಿಯನ್ ಎಕ್ಸ್‌ಪ್ರೆಸ್, ಮೇ 4, 1988)

# ಜನಾಬ್ ಎನ್. ಹಾಮಿದ್ ಸಾಹೇಬ್ ನಿಧನ

ಮಲಯಾಳಂ ಭಾಷೆಯ ಅಹ್ಮದಿಯಾ ಮುಖವಾಣಿ "ಸತ್ಯದೂತನ್" ಮಾಸಪತ್ರಿಕೆಯ ಪ್ರಧಾನ ಸಾರಥಿ ಹಾಗೂ ಹಲವು ವರ್ಷಗಳ ಕಾಲ ಅದರ ಸಂಪಾದಕ, ಪ್ರಕಾಶಕ ಹಾಗೂ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ ಜ। ಎನ್. ಹಾಮಿದ್ ಸಾಹೇಬ್ ಕಳೆದ ಫೆಬ್ರವರಿ 5ರಂದು ಕಣ್ಣಾನ್ನೂರಿನ ಸ್ವಗೃಹದಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್)

ಅವರಿಗೆ 90 ವರ್ಷ ಪ್ರಾಯವಾಗಿತ್ತು. ವಾತರೋಗ ಪೀಡಿತರಾಗಿ ಕೆಲವು ವರ್ಷಗಳಿಂದ ಅವರು ಹಾಸಿಗೆ ಯಲ್ಲೇ ಇದ್ದರು.

ಸುಮಾರು 50 ವರ್ಷಗಳ ಕಾಲ ಅವರು ವಿವಿಧ ಹುದ್ದೆಗಳನ್ನು ವಹಿಸಿಕೊಂಡು "ಸತ್ಯದೂತನ್"ಗೆ ತ್ಯಾಗ ಭರಿತ ಸೇವೆ ಸಲ್ಲಿಸಿದ್ದಾರೆ. ಮಲಯಾಳಂ ಅಲ್ಲದೆ ಅರಬಿ, ಉರ್ದು, ಹಿಂದಿ, ಇಂಗ್ಲಿಷ್ ಮೊದಲಾದ ಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದ ಅವರು ಅಧ್ಯಯನಕ್ಕೆ ಅರ್ಹವಾದ ಅನೇಕ ಪ್ರೌಢ ಲೇಖನಗಳನ್ನು ಬರೆದಿದ್ದಾರೆ. ಅನೇಕ ಅಹ್ಮದಿಯಾ ಕೃತಿಗಳನ್ನು ಅವರು ಮಲಯಾಳಕ್ಕೆ ಭಾಷಾಂತರಿಸಿದ್ದಾರೆ.

ತನ್ನ ಯೌವನ ಕಾಲದಲ್ಲಿ ಅವರು ಮದ್ರಾಸಿನಿಂದ ಹೊರಡುವ The Mail ಎಂಬ ಪತ್ರಿಕೆಯ ಕಣ್ಣಾನ್ನೂ ರಿನ ಪ್ರತಿನಿಧಿಯಾಗಿದ್ದರು. ಕಣ್ಣಾನ್ನೂರಿನ ಯುರೋಪ್ಯನ್ ಬೋಯ್ಸ್ ಹೈಸ್ಕೂಲಿನಲ್ಲಿ ಅವರು ಹಿಂದಿ ಅಧ್ಯಾಪಕ ರಾಗಿಯೂ ದುಡಿದಿದ್ದರು.

ಕೇರಳದ ಆದಿಕಾಲದ ಅಹ್ಮದಿಯರಲ್ಲಿ ಓರ್ವ ಗಣ್ಯ ವ್ಯಕ್ತಿಯಾಗಿದ್ದ ಅವರು ಕಣ್ಣಾನ್ನೂರ್ ಅಹ್ಮದಿಯಾ ಜಮಾಅತಿನಲ್ಲಿ ದೀರ್ಘಕಾಲ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು.


ದಿವಂಗತರಿಗೆ ಅಲ್ಲಾಹನು ಮಗ್‌ಫಿರತನ್ನು ಕರುಣಿಸಲಿ. ಆಮೀನ್.

## AHMADIYYA ENGLISH LITERATURE

| | | | |
|---|---|---|---|
| 1. | Introduction to the Study of the Holy Quran | By Hazrath Mirza Bashiruddin Mahmud Ahmad | 16-00 |
| 2. | The Philosophy of the Teachings of Islam | By Hazrath Mirza Ghulam Ahmad | 6-00 |
| 3. | Characteristics of the Quranic Teachings | By Hazrath Mirza Bashiruddin Mahmud Ahmad | 2-00 |
| 4. | The Holy Prophet Muhammad | By Hazrath Mirza Bashiruddin Mahmud Ahmad | 2-00 |
| 5. | Ahmadiyya Movement | By Hazrath Mirza Bashiruddin Mahmud Ahmad | 2-25 |
| 6. | What is Ahmadiyyat? | By Hazrat Mirza Bashiruddin Mahmud Ahmad | 1-50 |
| 7. | The Economic Structure of Islamic Society | By Hazrat Mirza Bashiruddin Mahmud Ahmad | 2-50 |
| 8. | The New World Order of Islam | By Hazrat Mirza Bashiruddin Mahmud Ahmad | 2-25 |
| 9. | Truth About Khatme Nabuwath | By Hazrath Mirza Bashir Ahmad, M. A. | 2-50 |
| 10. | Islam and Slavery | By Hazrat Mirza Bashir Ahmad, M. A. | 1-25 |
| 11. | Forty Gems of Beauty | By Hazrat Mirza Bashir Ahmad, M. A. | 2-50 |
| 12. | Our Teachings | By Hazrat Mirza Ghulam Ahmad | 1-00 |
| 13. | An Interpretation of Islam | By Laura Veccia Vaglieri | 3-00 |
| 14. | Muhammad the Most Successful Prophet | By Moulana Sharif Ahmad Amini | 1-00 |
| 15. | The Goal of Man and the Way to Reach it | By Muhammad Karimullah Naujawan & Dr. Hafiz Saleh Muhammad Allahdin, Ph. D. | 0-50 |
| 16. | Jesus in India | By Hazrath Mirza Ghulam Ahmad | 2-25 |
| 17. | A Review of Christianity | By Hazrat Mirza Ghulam Ahmad | 1-00 |
| 18. | Four Questions by a Christian and their Answers | By Hazrat Mirza Ghulam Ahmad | 1-25 |
| 19. | How to get rid of the Bondage of Sin | By Hazrat Mirza Ghulam Ahmad | 1-25 |
| 20. | Where Did Jesus Die? | By J. D. Shams | 5-00 |
| 21. | Did Jesus Redeem Mankind? | By Mirza B. M. Ahmad | 2-50 |
| 22. | The Tomb of Jesus | By Sufi Mutiur Rahman Bengalee, M.A. | 1-00 |
| 23. | The Christian Doctrine of Atonement | By Dr. M. M. Sadiq, D. D., L. L. D., S. S. P. (London) | 1-00 |
| 24. | Why did early Christians accept Islam? | By J. D. Shams | 1-00 |
| 25. | Latest Findings about Jesus Christ | | 0-50 |

Write to : **Secretary for Mission Work**
Sadr Anjuman Ahmadiyya, Qadian - 143 516 (Punjab)

Regd. with the Registrar of Newspapers for India Regd. No. R. N. 27354/75
YUGARASHMI Kannada Quarterly, May 1988 / Hijrat 1367




English Translation of the
HOLY QURAN
with Arabic Text &
Extensive Index

**Price : Rs. 20-00**
**Postage Extra**

Write to:
**NAZIR DAWAT-O-TABLIGH**
Sadr Anjuman Ahmadiyya
Qadian - 143 516 (Punjab)

ಸ್ಟ್ಯಾಂಡರ್ಡ್ ಟೈಲರಿ
ಕಡೂರು, ಚಿಕ್ಕಮಗಳೂರು ಜಿಲ್ಲೆ

ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು, ಮೆತ್ತಡ ಹಂಚು, ಅಲಂಕಾರಿಕ ಹಂಚು, ಮೊದಲಾದ ಎಲ್ಲಾ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

**STANDARD TILERY**
KADUR
CHICKMAGALUR DIST.

Edited and Published by Muhammad Yusuf on behalf of Jamath Ahmadiyya at 10-23-1008, Ansari Road, Bunder, Mangalore-575 001. Phone: 32039
Printed at Jubilee Printing Press, Ansari Road, Bunder, Mangalore-575 001.